ಪ್ರಜಾವಾಣಿ ಶನಿವಾರ • ನವೆಂಬರ್ 9, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER
ಕ್ಲಾಸಿಫೈಡ್ಸ್

REAL ESTATE SELLING

Agricultural Land

Out-Station

Magadi Road

FULLY DEVELOPED Agriculture Land near Magadi Road, Nelamangala 2.14 Acres Sale, 2.10 Crores. Suitable for Resort, Farm land. Top location. 9880564557, 8073961925.

Sites

Anjanapura

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

ANJANAPURA SITE for Sale 4th Block 30x40 facing South good location immediate construction near last Bus stop. 9845132011, 9663554448

ANJANAPURA BDA Site For Sale 40X55 #786 8th block 12000/- per sqft Contact:8095504466

Banashankari

MANTRALAYA ENTERPRISES: BUYING And SELLING BDA/`A` Khatha SITES, BANASHANKARI 6th Stage, Anjanapura, Vishweswaraiah Layout. 9945724472.

BDA SITE NO 536/D 20X30 WEST FACING BANASHANKARI 6th STAGE, 4th T-BLOCK Rs. 70 LAKHS Shivakumar 9845875555

BDA ALLOTED PLOT 30x40 NORTH FACING, 10th BLOCK, BANASHANKARI 6TH STAGE, DIRECT BUYERS: 9945492464

BSK 6TH Stage 11th Block BDA 20X30 North facing allottee site 78,00,000/- excellent vastu for sale -9986975122

'AVAILABLE' BDA Sites,Banashankari 6th stage, 10th Block,30x40, North Facing Owner Meeting:9663393533

SITE FOR Sale Banashankari 6th Stage 40X60 Good Location 40 feet Road Contact:9448050035

Gnanabharathi

"AVAILABLE 30X50 West facing Site Shanthi Vidhya Layout Attached Bangalore University, Good location. 9845500019/ 7019314962"

Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kempegowda Layout

***NADAPRABHU* KEMPEGOWDA** Layout 1st-block K Sector 30x40 west facing,7th block F Sector 50x80 west-facing,Nayara Petrol bunk backside and VishveshwaraiahLayout 3rd-block 40x60 east-facing. Contact: 9686469799

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact Kumar: 9945119449

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

Nandini Layout

FOR SALE / 2400sqft Commercial plot/16th Main Rd,Nandini Layout, next to Sri Balaji Electronics,suitable for shops, PGs, house. 9900570439.

R T Nagar

SULTANPALYA MAIN ROAD, R.T.NAGAR, SALE 10,000-20,000SQFT CORNER PLOTS, CLEAR TITLES IMMEDIATE REGISTRATION, 9743745648

Vishweshwariah Layout

BDA SITE, No 2234, 40X60 WEST FACING, VISHVESHWARAIAH LAYOUT, 1ST BLOCK, Rs 12600/- SFT, Hemanth 9341226446 Shivakumar 9845875555

"30X40 WEST facing BDA site for Sale Vishveshwaraiah Layout 5th Block, Good location. 9845500019/ 7019314962"

30X40 VISHVESHWARAIAH Layout 1st Block Near Watar Tank, 40x60 Site Sale 1st Block Near KHB: 8310003509

House

Girinagar

HOUSE FOR Sale 30x50 BBMP A Khata S/F Girinagar Raghavendra Mutt Backside Good Location 8880014616

Jayanagar

PRIME COMMERCIAL Prop 10th Main 4th Block 42/66 W/F Clear Titles Genuine Buyers Call: 9686522990

J P Nagar

DUPLEX VASTU Spacious AC 4BHK Fully Furnished 4Car parking JPNagar Phase5 NRI/ MNC Prefered: 6364372796

Nagarabhavi

"FOR SALE: Ground, first`&, 2nd-floor old house Nagarabhavi BDA 11th Block East facing Papareddypalya. 9845014134"

Vijayanagar

BDA 30X40 NF, GF House RPC Layout, Vijayanagar, 18,500/- PSqft Near Swimming Pool Owner 9739957911

Nandini Layout

BDA 30X40 North Facing, 2BHK Independent House in Railway Layout at Nandini Layout for sale call 9844039482

Andrahalli

FOR SALE 25x33 feet 3000 sqt 2 & 1 BHK 5 house building. good rent income. E Katha. Andrahalli Bangalore. Price 99 laks . Call 9901889675

T C Palya

"TC.PALYA GATED Community BBMP B-Katha New Independent House Ground and First Floor 1.50`Crore. Owner. 9449008336"

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Commercial Building

Seshadripuram

4185 SQ.FT Land with Building for Sale in Seshadripuram opposite Mantri Mall, 17,000 sq.ft built up area. 9945939990

Jayanagar

JAYANAGAR J.P.NAGAR Commercial Rental Income Properties Available For Sale 10Cr to 30Cr(Genuine Buyers) Rao: 9341906338/ 9742211233

Commerical

HRBR Layout

HRBR COMMERCIAL 100 Feet Road BDA North Facing, Excellent Site 40x60 For Sale Call: 7829203369

Majestic And Around

COMMERCIAL PREMISES Sale 'Suprabhata Lodging' Sheshadri Road, Near Anand Rao Circle 1520sqft. Built-Up 8000 Sqft: 9844059690

Chitradurga

HIRIYUR 6000 sqft commercial property in prime location Hiriyur Main Road, immediate sale. Genuine buyers only. 9591945892

Flat

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Kengeri

1 BHK BDA Apartment at Kengeri, Mysore Road, Rs. 16 Lakhs, Lokesh Contact: 98862 01690

Farm House/ Land/ Resorts

Mysore

LAND FOR SALE IN MYSORE, 38.5 Gunta Land for Sale, Near Cauvery Hospital, Bannur Main Road. Genuine Buyers only/ Brokers Excuse. Contact: 8762204610/ 9731868839.

REAL ESTATE BUYING

Joint Development

Joint Venture

"URGENTLY REQUIRED- PROPERTY any dimensions in &`around Bangalore for Builders (Joint Venture or Individual). Genuine Parties-Call: 9019533999/ 9731379933"

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

North

WANTED SITE/ BUILDING ON 60x90 or 50x80 AT BANGALORE NORTH LOCATION FOR IMMEDIATE PURCHASE. OWNERS CALL: 8884433342/ 8884433324.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

BUILDERS ESSENTIAL

Roofing Materials

"WE-FIX" LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

House

3 BHK Corner First Floor House With Garage Close to Bashyam Circle Rajajinagar Contact: 9945070268

JOB OPPORTUNITIES

General

REQUIRED PHARMACIST Diploma Holders for Retail License of a Pharmaceutical Company, Location: Timber Yard Layout. Call 98450-26204 for Walk-in- Interview immediately

BUSINESS

Business to Business

Business

PINEWOOD REAPERS Kd-Kiln Dried Good Quality Available@ Reasonable/Cheap Rates 9632912101 9986495950 @Bidadi Industrial Area

Services

SEEKING EQUITY funds for`25 years old NGO. Entering into Profitable Social Venture. Contact: 7619278091, utkarshequity22@ gmail.com

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

PERSONAL

Change of Name

I, AKSHAINARAYAN S/o.Padmanabhan R/o#A.204 Ittina Anu apartment Hopefarm Junction Whitefield Bangalore 560066 have changed my`Name to Akshainarayan Iyengar. Vide affidavit dated:31.10.2024 before`Notary Amitkumar S.Bariya, Ahmedabad

I, RADHA K, D/o Late P. Sreedhara Kurup, aged about 69 years, R/at Phoenix Garden, Block 3, D-2, 22nd cross Kuvempu Road, Vignan Nagar New Thippasandra Post Bengaluru- 560075 have changed my name to S RADHA vide affidavit dated: 05.11.2024 before Notary Government of India, Bhagya Kumari N, Bengaluru- 560008, Karnataka.

I, SRIRAMA NAGA VEERANJANEYULU GAZULA have changed to New name SRIRAM GAZULA, Residing at HNo-281, Karumariyamma Temple Road, Khanekandaya Whitefield, Bangalore- 560066 vide affidavit dated 08-11-2024 before Veena J, Notary Public, Bangalore.

I, PREETHAM B.T S/o B.N. Thyagaraj, aged 29 years, have changed my name to PREETAM T, vide affidavit dated 08.11.2024, before notary Ravi, Bangalore

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಲಂಕೇಶ್ ಅಧ್ಯಯನ ಶಿಬಿರ 11ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಇದೇ 11ರಿಂದ 13ರವರೆಗೆ 'ಲಂಕೇಶ್ ಬಹುತ್ವಗಳ ಶೋಧ' ಶೀರ್ಷಿಕೆಯಡಿ ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಅಧ್ಯಯನ ಶಿಬಿರ ಹಮ್ಮಿಕೊಂಡಿದೆ.

ವಕೀಲ ಸಿ.ಎಚ್. ಹನುಮಂತರಾಯ ಅವರು ಶಿಬಿರವನ್ನು ಉದ್ಘಾಟಿಸುತ್ತಾರೆ. ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕುಂದರಾಜ್ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ. ಎಂ.ಎಸ್. ಆಶಾದೇವಿ ಅವರ ನಿರ್ದೇಶನದಲ್ಲಿ ಶಿಬಿರ ನಡೆಯಲಿದೆ. ಉದ್ಘಾಟನೆ, ಸಾರ್ವಜನಿಕ ಉಪನ್ಯಾಸ ಹಾಗೂ ಸಮಾರೋಪ ಸಮಾರಂಭಗಳಿಗೆ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇರಲಿದೆ. ಗೋಷ್ಠಿಗಳಿಗೆ ಆಹ್ವಾನಿತರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಎನ್. ತಿಳಿಸಿದ್ದಾರೆ.

ಲಂಕೇಶರ ಬದುಕು-ಬರಹ, ಕಾವ್ಯ, ಕಾದಂಬರಿಗಳು, ಸಣ್ಣ ಕಥೆಗಳು ಸೇರಿ ಲಂಕೇಶ್ ಅವರಿಗೆ ಸಂಬಂಧಿಸಿದಂತೆ ವಿವಿಧ ಗೋಷ್ಠಿಗಳು ನಡೆಯಲಿವೆ. ಸಂವಾದ, ಸಾರ್ವಜನಿಕ ಉಪನ್ಯಾಸಗಳನ್ನೂ ಹಮ್ಮಿಕೊಳ್ಳಲಾಗಿದೆ. ಮೂರು ದಿನಗಳ ಈ ಅಧ್ಯಯನ ಶಿಬಿರದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳುತ್ತಾರೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಬಹುಮಾದರಿ ಸಾರಿಗೆ 'ಹಬ್'ಗೆ ಜಮೀನು ಹಸ್ತಾಂತರಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದಲ್ಲಿ ಬಹುಮಾದರಿ ಸಾರಿಗೆ 'ಹಬ್' ನಿರ್ಮಿಸಲು ಬಿಎಂಆರ್‌ಸಿಎಲ್‌ಗೆ ಕೆಐಎಡಿಬಿಯ 45 ಎಕರೆ ಜಮೀನನ್ನು ಶೀಘ್ರ ಹಸ್ತಾಂತರಿಸುವಂತೆ ಕೇಂದ್ರ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.



ಶೋಭಾ ಕರಂದ್ಲಾಜೆ

'ನಾನು ಪ್ರತಿನಿಧಿಸುವ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹೆಬ್ಬಾಳ ಮತ್ತು ಹೆಬ್ಬಾಳ ಅಮಾನಿಕೆರೆಯಲ್ಲಿ ಬಹುಮಾದರಿ ಸಾರಿಗೆ ಸಂಪರ್ಕ ಕೇಂದ್ರವನ್ನು ನಿರ್ಮಿಸಲು ಬಿಎಂಆರ್‌ಸಿಎಲ್ ಯೋಜನೆ ರೂಪಿಸಿದೆ. ರೈಲು, ಮೆಟ್ರೊ ರೈಲು, ಉಪನಗರ ರೈಲು, ಬಿಎಂಟಿಸಿ ಬಸ್‌ಗಳು ಹಾದು ಹೋಗುವುದರಿಂದ ಬಳಕೆದಾರರಿಗೆ ಉಪಯೋಗವಾಗುವ, ವಾಹನ ದಟ್ಟಣೆಯನ್ನು ಕಡಿಮೆ ಮಾಡುವ ಯೋಜನೆ ಇದಾಗಿದೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಜಮೀನು ಒದಗಿಸಿಕೊಟ್ಟರೆ ಬಹು ಹಂತದ ಕಾರು ಪಾರ್ಕಿಂಗ್, ಆಧುನಿಕ ಡಿಪೊ ಮತ್ತು ಇತರ ಸಂಬಂಧಿತ ಮೂಲಸೌಕರ್ಯಗಳು ಇಲ್ಲಿ ನಿರ್ಮಾಣಗೊಳ್ಳಲಿವೆ. ಅಭಿವೃದ್ಧಿಯ ವಿಚಾರದಲ್ಲಿ ಕೇಂದ್ರ ಸರ್ಕಾರವು ಯಾವಾಗಲೂ ರಾಜ್ಯ ಸರ್ಕಾರದೊಂದಿಗೆ ಕೈ ಜೋಡಿಸುತ್ತದೆ. ಕೆಐಎಡಿಬಿಯಿಂದ ಜಮೀನು ಹಸ್ತಾಂತರ ವಿಳಂಬವಾದರೆ ಸಮಯ ವ್ಯರ್ಥವಾಗುತ್ತದೆ. ವೆಚ್ಚ ಅಧಿಕಗೊಳ್ಳುತ್ತದೆ. ಇದು ನಾಗರಿಕ ಜೀವನದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ.

'ಜಮೀನಿನ ದರವನ್ನು ಭರಿಸುವುದಾಗಿ ರಾಜ್ಯ ಸರ್ಕಾರಕ್ಕೆ ಬಿಎಂಆರ್‌ಸಿಎಲ್ ಪತ್ರ ಬರೆದಿದೆ. ಹಾಗಾಗಿ ಬಿಎಂಆರ್‌ಸಿಎಲ್‌ಗೆ ಜಮೀನು ಹಸ್ತಾಂತರಿಸಲು ನಗರಾಭಿವೃದ್ಧಿ ಇಲಾಖೆಗೆ ಮತ್ತು ಕೈಗಾರಿಕಾ ಇಲಾಖೆಗೆ ಸೂಚನೆ ನೀಡುತ್ತೀರಿ ಎಂಬ ಭರವಸೆ ಇದೆ' ಎಂದು ಮುಖ್ಯಮಂತ್ರಿಯವರ ಬಗ್ಗೆ ಶೋಭಾ ಕರಂದ್ಲಾಜೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುಧಾ ಓದಿರಿ

ಡಿಕೆಶಿ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಪೀಠವು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕರ್ನಾಟಕ ಸರ್ಕಾರದ ಪ್ರತಿಕ್ರಿಯೆ ಕೇಳಿದೆ.

ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಸಿಬಿಐ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಶುಕ್ರವಾರ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ಶಿವಕುಮಾರ್ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

'ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ'ದ ಗೋಷ್ಠಿಯಲ್ಲಿ ಗಮನ ಸೆಳೆದ ಸಂವಾದ

'ರಾಮ–ರಾವಣರಲ್ಲಿ ಗೌರವ ಯಾರಿಗೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೀತೆಯನ್ನು ಅಪಹರಿಸಿದರೂ, ಆಕೆಯ ಮಾತಿಗೆ ಬೆಲೆ ಕೊಟ್ಟು ರಾವಣ ಗೌರವದಿಂದ ನಡೆಸಿಕೊಂಡಿದ್ದ. ಮತ್ತೊಂದೆಡೆ ಸೀತೆಯನ್ನು ಕಾಡಿಗೆ ಅಟ್ಟಿದ್ದು ಮತ್ತು ಬೆಂಕಿಗೆ ದೂಡಿದ್ದು ರಾಮ. ಈ ಇಬ್ಬರು ಪುರುಷರಲ್ಲಿ ಯಾರನ್ನು ಗೌರವದಿಂದ ಕಾಣಬೇಕು' ಎಂಬ ಪ್ರಶ್ನೆಯನ್ನು ಲೇಖಕಿ ಕೆ.ಆರ್.ಸಂಧ್ಯಾ ರೆಡ್ಡಿ ಸಭಿಕರ ಮುಂದಿಟ್ಟರು.

ನ್ಯಾಷನಲ್ ಕಾಲೇಜು ನಗರದಲ್ಲಿ ಆಯೋಜಿಸಿರುವ ಸಾಹಿತ್ಯ ಹಬ್ಬದಲ್ಲಿ ಶುಕ್ರವಾರ, 'ಜನಪದ ಸಾಹಿತ್ಯ ಚರಿತ್ರೆ ಮತ್ತು ತತ್ವಗಳು' ಕುರಿತ ಗೋಷ್ಠಿ ವೇಳೆ ಅವರು ಎತ್ತಿದ ಈ ಪ್ರಶ್ನೆಯನ್ನು ಹಲವು ವಿದ್ಯಾರ್ಥಿನಿಯರೂ ಚರ್ಚಿಸಿದರು.

'ಯಾರನ್ನು ಗೌರವದಿಂದ ಕಾಣಬೇಕು ಎಂಬುದನ್ನೇ ಜನಪದರು, ಜನಪದ ರಾಮಾಯಣಗಳು ಚರ್ಚಿಸುತ್ತಾ ಹೋಗುತ್ತವೆ. ಈ ರೀತಿಯ ಚರ್ಚೆ ಜನಪದ ಸಾಹಿತ್ಯದಲ್ಲಿ ಮಾತ್ರ ಸಾಧ್ಯ. ವಾಲ್ಮೀಕಿ ರಾಮಾಯಣದಂತಹ ಶಿಷ್ಟ ಸಾಹಿತ್ಯದಲ್ಲಿ ಈ ರೀತಿಯ ವ್ಯಾಖ್ಯಾನ ಅಥವಾ ಚರ್ಚೆ ಎತ್ತಿಕೊಂಡರೆ ದಾಳಿಗಳೇ ಆಗಿಬಿಡುತ್ತವೆ' ಎಂದು ಸಂಧ್ಯಾ ಅವರು ತಮ್ಮ ಪ್ರಶ್ನೆಗೆ ತಾವೇ ವಿವರಣೆಯನ್ನೂ ನೀಡಿದರು.

ಸಂವಾದದ ವೇಳೆ ಈ ಬಗ್ಗೆ ಪ್ರಶ್ನಿಸಿದ ವಿದ್ಯಾರ್ಥಿನಿಯೊಬ್ಬರು, 'ಜನಪದರು ರಾವಣನಲ್ಲಿನ ಒಳ್ಳೆಯ ಗುಣಗಳನ್ನು ಚರ್ಚಿಸಿದ್ದಾರೆ. ಆದರೆ ಆರ್ಯನ್ನರ ಪ್ರಭಾವದ ಶಿಷ್ಟ ಸಾಹಿತ್ಯಗಳು ಆ ಬಗ್ಗೆ ಮಾತನಾಡುವುದಿಲ್ಲ. ರಾವಣ ದ್ರಾವಿಡ ಜನಾಂಗದವನು ಎಂದು ಆರ್ಯನ್ನರು ಆತನನ್ನು ಕೆಟ್ಟವನಂತೆ ಚಿತ್ರಿಸಿದರೇ' ಎಂದು ಪ್ರಶ್ನಿಸಿದರು.

'ಸಂಸ್ಕೃತದಲ್ಲಿ ರಚನೆಯಾದ ಶಿಷ್ಟ ಸಾಹಿತ್ಯವೆಲ್ಲವೂ ಆರ್ಯನ್ನರದ್ದೇ. ಅವರು ತಮ್ಮ ಮೌಲ್ಯಗಳನ್ನು ಮುಂದು ಮಾಡುವುದಕ್ಕಾಗಿ ಪಾತ್ರಗಳನ್ನು ತಮಗೆ ಅಗತ್ಯವಿದ್ದಂತೆ ಚಿತ್ರಿಸಿದ್ದಾರೆ' ಎಂದು ಸಂಧ್ಯಾರೆಡ್ಡಿ ಉತ್ತರಿಸಿದರು.

ಈ ವಿವರಣೆಗೆ ಆಕ್ಷೇಪ ವ್ಯಕ್ತಪಡಿಸಿದ ಮತ್ತೊಬ್ಬ ವಿದ್ಯಾರ್ಥಿನಿ, 'ರಾವಣ ಒಳ್ಳೆಯವನು ಎಂದು ಜನಪದರು ಹೇಳಿದ್ದಾರೆ ಎಂಬ ಚರ್ಚೆಯಿದು. ಕೆಟ್ಟವರನ್ನು ಒಳ್ಳೆಯವರು ಎಂದು ಬಿಂಬಿಸುವ ಮೂಲಕ ನಾವು ಮುಂದಿನ ಸಮಾಜಕ್ಕೆ ಏನನ್ನು ಹೇಳಲು ಹೊರಟಿದ್ದೇವೆ. ಆ ರೀತಿಯ ವ್ಯಾಖ್ಯಾನ ಮಾಡುವ ಜನಪದ ಸಾಹಿತ್ಯಗಳು ಎಷ್ಟು ಸರಿ' ಎಂದು ಪ್ರಶ್ನಿಸಿದರು.

ಅದಕ್ಕೆ ಉತ್ತರಿಸಿದ ಸಂಧ್ಯಾ, 'ಪುರಾತನ ಕಾಲದಲ್ಲಿ ಇದ್ದಂತೆಯೇ ಇರಬೇಕು ಎಂಬುದು ನಿಮ್ಮ ನಿಲುವೇ? ಶಿಷ್ಟ ಸಾಹಿತ್ಯದಲ್ಲಿ ಪಾತ್ರಗಳ ಕಪ್ಪು–ಬಿಳುಪು ಎಂಬ ಚಿತ್ರಣವಿದೆ. ಆದರೆ ಒಬ್ಬ ವ್ಯಕ್ತಿ ಸಂಪೂರ್ಣವಾಗಿ ಒಳ್ಳೆಯವನೇ ಆಗಿರುವುದಿಲ್ಲ, ಹಾಗೆಯೇ ಸಂಪೂರ್ಣವಾಗಿ ಕೆಟ್ಟವನೂ ಆಗಿರುವುದಿಲ್ಲ. ಎರಡೂ ರೀತಿಯ ಗುಣಗಳು ಒಬ್ಬ ವ್ಯಕ್ತಿಯಲ್ಲೇ ಇರುತ್ತವೆ. ಇದನ್ನೇ ಜನಪದರು, ಜನಪದ ಸಾಹಿತ್ಯಗಳು ಹುಡುಕಾಡುವುದು' ಎಂದರು.

ಬಸವಣ್ಣನ ಚರ್ಚೆ: 'ಬಸವಣ್ಣನ ಕುರಿತು ವಿನಯಾ ಒಕ್ಕುಂದ ಅವರು ಬರೆದಾಗ ಅವರ ವಿರುದ್ಧ ದೊಡ್ಡಮಟ್ಟದ ದಾಳಿಗಳೇ ನಡೆದವು' ಎಂದ ಅವರು, 'ಮಹಿಳೆಯರಿಗೆ ಬಸವಣ್ಣ ಕೊಟ್ಟಷ್ಟು ಪ್ರಾತಿನಿಧ್ಯ ಇನ್ಯಾರೂ ನೀಡಿಲ್ಲ. ಆದರೆ ಅದೇ ಬಸವಣ್ಣ, ನಾರಿಗೆ ಗುಣವೇ ಶೃಂಗಾರ ಎಂದಿದ್ದಾರೆ. ಗುಣವು ಮಹಿಳೆಯರಿಗಷ್ಟೇ ಇರಬೇಕೆ? ಪುರುಷರಿಗೆ ಇರಬಾರದೇ' ಎಂದು ಪ್ರಶ್ನಿಸಿದರು.

'ವಚನಗಳ ಹೊಸ ಓದಿನ ಅವಶ್ಯಕತೆ' ಕುರಿತ ಗೋಷ್ಠಿಯಲ್ಲಿ ಓ.ಎಲ್. ನಾಗಭೂಷಣಸ್ವಾಮಿ ಮತ್ತು 'ಜಯಮೋಹನ್‌ರವರ ಕಥಾ ಸಾಹಿತ್ಯ' ಕುರಿತ ಗೋಷ್ಠಿಯಲ್ಲಿ ಟಿ.ಪಿ. ಅಶೋಕ ಮಾತನಾಡಿದರು.



'ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ'ದಲ್ಲಿ ಲೇಖಕಿ ಕೆ.ಆರ್.ಸಂಧ್ಯಾ ರೆಡ್ಡಿ ಮತ್ತು ನಾಟಕಕಾರ ಚಂದ್ರಶೇಖರ ಕಂಬಾರ ಮಾತುಕತೆಯಲ್ಲಿ ತೊಡಗಿದ್ದರು. ನ್ಯಾಷನಲ್ ಎಜುಕೇಷನಲ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷ ಎಚ್.ಎನ್.ಸುಬ್ರಹ್ಮಣ್ಯ (ಎಡಬದಿ) ಮತ್ತು ಸಾಹಿತಿ ಟಿ.ಪಿ.ಅಶೋಕ ಇದ್ದರು. –ಪ್ರಜಾವಾಣಿ ಚಿತ್ರ

'ಟಿಪ್ಪು ದುರಂತ ನಾಯಕ'

'ಹಲಗಲಿಯ ಬೇಡರು, ಚನ್ನಮ್ಮನ ಮತ್ತು ರಾಯಣ್ಣನ ಲಾವಣಿಗಳು, ಟಿಪ್ಪುವಿನ ಲಾವಣಿಗಳು ಇಂತಹ ಹತ್ತಾರು ಪ್ರತಿರೋಧಗಳನ್ನು ದಾಖಲಿಸಿವೆ. ಇವುಗಳನ್ನು ಆಳವಾಗಿ ಅಧ್ಯಯನ ಮಾಡಿದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಮರುರಚಿಸಬೇಕಾಗುತ್ತದೆ. ಟಿಪ್ಪುವಿನ ಬಗ್ಗೆ ಏನೇನೋ ಚರ್ಚೆಗಳು ನಡೆಯುತ್ತವೆ. ಆದರೆ ಆತ ಒಬ್ಬ ದುರಂತ ನಾಯಕ ಎಂಬುದನ್ನು ಲಾವಣಿಗಳು ಹಿಡಿದಿಟ್ಟಿವೆ' ಎಂದು ಸಂಧ್ಯಾರೆಡ್ಡಿ ಹೇಳಿದರು.

ಚರ್ಚೆಗಳು ಬದಲಾಗಿವೆ: ಕಂಬಾರ

'ಈ ಹಿಂದೆ ನಡೆಯುತ್ತಿದ್ದ ಸಾಹಿತ್ಯ ಮತ್ತು ಚರ್ಚೆಗಳು ಒಂದು ರೀತಿಯಲ್ಲಿದ್ದವು. ಈಗ ಎಲ್ಲವೂ ಬದಲಾಗಿದೆ. ಮೊದಲು ಚರ್ಚೆ ನಡೆಸುತ್ತಿದ್ದಂತೆ ಈಗ ನಡೆಸಲು ಸಾಧ್ಯವಿಲ್ಲ' ಎಂದು ನಾಟಕಕಾರ ಚಂದ್ರಶೇಖರ ಕಂಬಾರ ಹೇಳಿದರು.

ಸಾಹಿತ್ಯ ಹಬ್ಬವನ್ನು ಉದ್ಘಾಟಿಸಿದ ಅವರು, 'ಹೀಗೆ ಎಲ್ಲವೂ ಬದಲಾಗಿರುವ ಹೊತ್ತಿನಲ್ಲಿ ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬವನ್ನು ಆರಂಭಿಸಿದೆ. ಅದನ್ನು ಎರಡನೇ ವರ್ಷವೂ ಮುನ್ನಡೆಸುತ್ತಿದೆ. ಇಲ್ಲಿಂದ ಸಾಹಿತ್ಯದ ಹೊಸ ಚರ್ಚೆಗಳು ಆರಂಭವಾಗಲಿ' ಎಂದರು.

ತೆರಿಗೆ ಬಾಕಿ: ವಸತಿಯೇತರ ಕಟ್ಟಡಗಳಿಗೆ ಬೀಗ ಹಾಕಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರು ಮತ್ತು ಪರಿಷ್ಕರಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ವಸತಿಯೇತರ ಕಟ್ಟಡಗಳಿಗೆ ಬೀಗ ಹಾಕಿ ಆಸ್ತಿ ತೆರಿಗೆ ವಸೂಲಿ ಮಾಡಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ ನೀಡಿದ್ದಾರೆ.

ಬಿಬಿಎಂಪಿ ಆರ್.ಆರ್. ನಗರ ವಲಯ ವ್ಯಾಪ್ತಿಯಲ್ಲಿ 'ಆಯುಕ್ತರ ನಡೆ ವಲಯದ ಕಡೆ ಕಾರ್ಯಕ್ರಮದಡಿ' ಶುಕ್ರವಾರ ವಿವಿಧ ಕಾಮಗಾರಿಗಳನ್ನು ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಆರ್.ಆರ್. ನಗರ ವಲಯ ವ್ಯಾಪ್ತಿಯಲ್ಲಿಯೇ ತೆರಿಗೆ ಬಾಕಿ ಹೆಚ್ಚಿದೆ. ಆಸ್ತಿ ತೆರಿಗೆ ವಸೂಲಿ ಮಾಡಬೇಕು ಎಂದು ತಿಳಿಸಿದರು.

ಲಗ್ಗೆರೆಯ ಸಹಾಯಕ ಕಂದಾಯ ಅಧಿಕಾರಿ ಕಚೇರಿಗೆ ಭೇಟಿ ನೀಡಿ, ಸಾರ್ವಜನಿಕರ ಅಹವಾಲು ಆಲಿಸಿದರು.

ಯಶವಂತಪುರದ ಎಂಇಐ ರಸ್ತೆಯಲ್ಲಿ ಕೈಗೆತ್ತಿಕೊಂಡಿರುವ 950 ಮೀಟರ್ ಉದ್ದದ ವೈಟ್ ಟಾಪಿಂಗ್ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು. 'ವೇಗವಾಗಿ ಕಾಮಗಾರಿ ನಡೆಸಬೇಕು. ಪ್ರತಿವಾರ ಕಾಮಗಾರಿಯ ಮಾಹಿತಿ ನೀಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸುಮನಹಳ್ಳಿ ಬಳಿ ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರಚಿಕಿತ್ಸಾ ಕೇಂದ್ರದ ಪುನರ್ ನವೀಕರಣ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಿದರು. 'ತಿಂಗಳ ಒಳಗೆ ಕಾಮಗಾರಿ ಮುಗಿಸಿ ನಾಯಿಗಳಿಗೆ ಚಿಕಿತ್ಸೆ ನೀಡುವುದನ್ನು ಆರಂಭಿಸಬೇಕು' ಎಂದು ಹೇಳಿದರು.

ಲೋಕಾಯುಕ್ತರ ನಿರ್ದೇಶನದಂತೆ ನಾಗರಬಾವಿ ಕೆರೆಯ ಸರ್ವೆ ಮಾಡಿ, ಕೆರೆ ಸುತ್ತಲೂ ಬೇಲಿ ನಿರ್ಮಿಸುವ ಕಾಮಗಾರಿಯನ್ನು ವೀಕ್ಷಿಸಿದರು.

ಕಾಲೊನಿಯಲ್ಲಿ ಅಸ್ವಚ್ಛತೆ: ತರಾಟೆ

ಬಡವರು ವಾಸಿಸುವ ಪ್ರದೇಶ, ದಲಿತರ ಕಾಲೊನಿ, ಮತ್ತು ಸ್ಮಶಾನಗಳಲ್ಲಿ ಸ್ವಚ್ಛತೆ, ಕಾಪಾಡುವಲ್ಲಿ ಆರೋಗ್ಯ ಅಧಿಕಾರಿಗಳು ವಿಫಲರಾಗಿರುವುದನ್ನು ಕಂಡು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ತರಾಟೆಗೆ ತೆಗೆದುಕೊಂಡರು.

ಹೇರೋಹಳ್ಳಿ ದಲಿತ ಕಾಲೊನಿ (ದಂಡಿನ ಮಾರಮ್ಮ) ಲಗ್ಗೆರೆ ಮತ್ತು ಕೆಲವು ದಲಿತರ ಕಾಲೊನಿಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುತ್ತಿಲ್ಲ ಎಂದು ದಲಿತ ಮುಖಂಡರು ಅಹವಾಲು ಸಲ್ಲಿಸಿದರು. 'ದಲಿತರ ಕಾಲೊನಿಗಳ ಅಭಿವೃದ್ಧಿಗೆ ₹13 ಕೋಟಿ ಮೀಸಲಾಗಿದೆ. ಒಂದು ವಾರದೊಳಗೆ ಕಾಮಗಾರಿ ಪ್ರಾರಂಭ ಮಾಡಬೇಕು. ಒಂದು ತಿಂಗಳಲ್ಲಿ ಮತ್ತೆ ಸಾರ್ವಜನಿಕರ ಕುಂದು ಕೊರತೆ ಆಲಿಸಲು ಬರುತ್ತೇನೆ. ಮುಂದಿನ ಸಭೆಗೆ ಜಲ ಮಂಡಳಿ, ಬೆಸ್ಕಾಂ ಇಲಾಖೆ ಹಿರಿಯ ಅಧಿಕಾರಿಗಳು ಕಡ್ಡಾಯವಾಗಿ ಸಭೆಯಲ್ಲಿ ಹಾಜರಿರಬೇಕು' ಎಂದು ಮುಖ್ಯ ಆಯುಕ್ತ ಸೂಚಿಸಿದರು.

ವಿದ್ಯಾರ್ಥಿ ಹಲ್ಲು ಮುರಿದ ಶಿಕ್ಷಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ ಕ್ರೈಸ್ಟ್ ಶಾಲೆಯಲ್ಲಿ ವಿದ್ಯಾರ್ಥಿಯ ಮೇಲೆ ಹಲ್ಲೆ ನಡೆಸಿ ಹಲ್ಲು ಮುರಿದ ಪ್ರಕರಣದ ಆರೋಪದಡಿ ಹಿಂದಿ ಶಿಕ್ಷಕಿ ಅಜ್ಮತ್ ಅವರ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆರನೇ ತರಗತಿ ವಿದ್ಯಾರ್ಥಿ ಅಶ್ವಿನ್ (11) ಮೇಲೆ ಶಿಕ್ಷಕಿ ಹಲ್ಲೆ ನಡೆಸಿದ್ದಾರೆ ಎಂದು ದೂರಿ ಆತನ ತಂದೆ ಅನಿಲ್ ಕುಮಾರ್ ವಿ. ಪೈ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಲಾಗಿದೆ.

'ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಶಿಕ್ಷಕಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನ.7ರಂದು ಅಶ್ವಿನ್ ಜೊತೆ ಇತರ ವಿದ್ಯಾರ್ಥಿಗಳು ತರಗತಿಯಲ್ಲಿ ಗೋಸ್ಮಿಕ್ (ಗಮ್) ಮತ್ತು ನೀರು ಚೆಲ್ಲುತ್ತಾ ಆಡುತ್ತಿದ್ದರು. ಇದನ್ನು ಶಿಕ್ಷಕರಿಗೆ ತಿಳಿಸಲು ಅಶ್ವಿನ್ ತೆರಳಿದ್ದ. ಅದೇ ವೇಳೆ ಎದುರಾದ ಹಿಂದಿ ವಿಷಯದ ಶಿಕ್ಷಕಿ ಅಜ್ಮತ್ ಅವರು ಬಾಲಕನ ಮುಖಕ್ಕೆ ಕೋಲಿನಿಂದ ಹೊಡೆದಿದ್ದು, ಹಲ್ಲು ಮುರಿದಿದೆ. ಇದನ್ನು ನನ್ನ ಗಮನಕ್ಕೆ ತಾರದೇ ಸಿಬ್ಬಂದಿಯೇ ರಾಜಿ ಮಾಡಲು ಪ್ರಯತ್ನಿಸಿದ್ದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ. ಬಾಲಕನಿಗೆ ಜಯನಗರ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

'ಮಧ್ಯಾಹ್ನ ಊಟ ಮುಗಿಸಿ ಹೋದಾಗ ವಿದ್ಯಾರ್ಥಿಗಳು ಜಗಳ ಮಾಡಿಕೊಳ್ಳುತ್ತಿದ್ದರು. ಆಗ ಹಲ್ಲು ಮುರಿದಿರಬಹುದು. ಗಲಾಟೆ ನಿಯಂತ್ರಿಸಲು ಕೈಗೆ ಒಂದು ಏಟು ಕೊಟ್ಟಿದ್ದೆ ಅಷ್ಟೆ. ವಿದ್ಯಾರ್ಥಿ ಮುಖಕ್ಕೆ ಪಟಾಕಿಯಿಂದ ಗಾಯವಾಗಿತ್ತು' ಎಂದು ಶಿಕ್ಷಕಿ ಸ್ಪಷ್ಟನೆ ನೀಡಿದ್ದಾರೆ.

ಘಟನೆ ಸಂಬಂಧ ಶಾಲಾ ಆಡಳಿತ ಮಂಡಳಿ ವಿದ್ಯಾರ್ಥಿ ಹಾಗೂ ಶಿಕ್ಷಕಿಯಿಂದ ಮಾಹಿತಿ ಪಡೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಪೋಷಕರ ಮಡಿಲು ಸೇರಿದ ಮಗು

ಬೆಂಗಳೂರು: ವೈಯಾಲಿಕಾವಲ್ ಠಾಣಾ ವ್ಯಾಪ್ತಿಯ ಮಲ್ಲೇಶ್ವರದ ಪೈಪ್‌ಲೈನ್ ರಸ್ತೆಯಲ್ಲಿ ದಿಢೀರ್ ನಾಪತ್ತೆಯಾಗಿದ್ದ ಮಗು 24 ತಾಸಿನ ಬಳಿಕ ಪೋಷಕರ ಮಡಿಲು ಸೇರಿತು.

ಮಲ್ಲೇಶ್ವರ ಪೈಪ್‌ಲೈನ್ ರಸ್ತೆಯಲ್ಲಿ ಮಗುವಿನ ಪೋಷಕರು ವಾಸಿಸುತ್ತಿದ್ದಾರೆ. ಗುರುವಾರ ಬೆಳಿಗ್ಗೆ 9 ಗಂಟೆ ಸುಮಾರಿಗೆ ತಾಯಿ ದಿವ್ಯಾ ಅವರು ತಮ್ಮ ಮೊದಲ ಮಗುವನ್ನು ಶಾಲೆಗೆ ಕಳುಹಿಸಲು ತಯಾರಿ ನಡೆಸುತ್ತಿದ್ದರು. ಎರಡನೇ ಮಗು ಮನೆಯಿಂದ ಹೊರಬಂದು ಆಟವಾಡುತ್ತಿತ್ತು. ಈ ವೇಳೆ ಅಪರಿಚಿತ ಮಹಿಳೆಯೊಬ್ಬರು ಮಗುವನ್ನು ಮಾತನಾಡಿಸುವ ನೆಪದಲ್ಲಿ ಕರೆದುಕೊಂಡು ಹೋಗಿದ್ದರು. ಇದರಿಂದ ಗಾಬರಿಗೊಂಡಿದ್ದ ಮಗುವಿನ ಪೋಷಕರು ವೈಯಾಲಿಕಾವಲ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರೂ ಅಕ್ಕಪಕ್ಕದ ಸ್ಥಳಗಳಲ್ಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದರು. ಆಗ ಮಹಿಳೆಯೊಬ್ಬರು ಮಗುವನ್ನು ಕರೆದೊಯ್ಯುತ್ತಿದ್ದ ದೃಶ್ಯ ಸೆರೆಯಾಗಿರುವುದು ಗೊತ್ತಾಗಿತ್ತು.

ಚಾಕೊಲೇಟ್ ಕೊಡಿಸಿದ್ದ ಮಹಿಳೆ: ಮಗುವನ್ನು ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮಗು ಅಳುವುದಕ್ಕೆ ಆರಂಭಿಸಿತ್ತು. ಮಹಿಳೆ ಮಗುವಿಗೆ ಚಾಕೊಲೇಟ್ ಹಾಗೂ ಬಿಸ್ಕತ್ತು ಕೊಡಿಸಿ ಸುಮ್ಮನಿರಿಸಿದ್ದರು ಎಂದು ಪೊಲೀಸರು ಹೇಳಿದರು.

'ಶುಕ್ರವಾರ ಬೆಳಿಗ್ಗೆ ದೇವಯ್ಯ ಉದ್ಯಾನದಲ್ಲಿ ಮಗುವನ್ನು ಪತ್ತೆಹಚ್ಚಿ ಪೋಷಕರಿಗೆ ಒಪ್ಪಿಸಲಾಯಿತು. ಮಗುವಿಗೆ ಸಣ್ಣಪುಟ್ಟ ತರಚಿದ ಗಾಯವಾಗಿದೆ. ಯಾವುದೇ ಅಪಾಯ ಸಂಭವಿಸಿಲ್ಲ. ಮಗುವನ್ನು ಕರೆದೊಯ್ದಿದ್ದ ಮಹಿಳೆ ಸುಜಾತಾ ಅವರು ಮಾನಸಿಕ ಅಸ್ವಸ್ಥೆ ಎಂದು ಹೇಳಲಾಗುತ್ತಿದೆ' ಎಂದರು.

ಅಪರಾಧ ಸುದ್ದಿ

ಪ್ರಜ್ಞೆ ತಪ್ಪಿಸಿ ದರೋಡೆ: ದಂಪತಿ ಸೆರೆ

ಬೆಂಗಳೂರು: ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ 'ಸಂಪಿಗೆ ಚಿತ್ರಮಂದಿರ'ದ ಮಾಲೀಕ ನಾಗೇಶ್ ಅವರನ್ನು ಮನೆಯಲ್ಲಿ ಹಗ್ಗದಿಂದ ಬಿಗಿದು, ಪ್ರಜ್ಞೆ ತಪ್ಪಿಸಿ ದರೋಡೆ ಮಾಡಿದ್ದ ಪ್ರಕರಣ ಭೇದಿಸುವಲ್ಲಿ ಯಶಸ್ವಿ ಆಗಿರುವ ಜಯನಗರ ಪೊಲೀಸರು, ದಂಪತಿಯನ್ನು ಬಂಧಿಸಿದ್ದಾರೆ. ನೇಪಾಳದ ಗಣೇಶ್ ಹಾಗೂ ಗೀತಾ ಬಂಧಿತ ಆರೋಪಿಗಳು.

'ಆರೋಪಿಗಳು ಮುಂಬೈನಲ್ಲಿ ತಲೆಮರೆಸಿಕೊಂಡಿದ್ದರು. ಮೊಬೈಲ್ ಲೊಕೇಶನ್ ಆಧರಿಸಿ ಆರೋಪಿಗಳಿದ್ದ ಸ್ಥಳ ಪತ್ತೆಹಚ್ಚಲಾಯಿತು' ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನವನ್ನು ಆರೋಪಿಗಳು ಮಾರಾಟ ಮಾಡಿದ್ದಾರೆ. ಚಿನ್ನಾಭರಣ ಜಪ್ತಿ ಪ್ರಕ್ರಿಯೆ ನಡೆಯುತ್ತಿದೆ' ಎಂದು ತಿಳಿಸಿದರು.

ಯುವಕನ ಮೃತದೇಹ ಪತ್ತೆ: ಕೊಲೆ ಶಂಕೆ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಬಾಲಕಿಯನ್ನು ಪ್ರೀತಿಸಿ ಆಕೆಯೊಂದಿಗೆ ಪರಾರಿಯಾಗುವ ವೇಳೆ ಪೋಷಕರಿಗೆ ಸಿಕ್ಕಿಬಿದ್ದು, ಅವರು ಪೊಲೀಸರಿಗೆ ಮಾಹಿತಿ ನೀಡಿದ್ದರಿಂದ ಹೆದರಿ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ.

ಹಂಪಾಪುರ ಗ್ರಾಮದ ಸಂತೋಷ್(20) ಸಾವಿಗೀಡಾದ ಯುವಕ. ನೇಣು ಬಿಗಿದ ಸ್ಥಿತಿಯಲ್ಲಿ ಯುವಕನ ಮೃತದೇಹ ಪತ್ತೆಯಾಗಿದೆ. ದಾಬಸ್‌ಪೇಟೆ ಠಾಣಾ ವ್ಯಾಪ್ತಿಯ ಶಿವಗಂಗೆ ಬಳಿಯ ಹೊಸಪಾಳ್ಯದಲ್ಲಿ ಘಟನೆ ನಡೆದಿದೆ.

'ಕೂಲಿ ಕೆಲಸ ಮಾಡಿಕೊಂಡಿದ್ದ ಸಂತೋಷ್ ಮತ್ತು ಬಾಲಕಿ ಮಧ್ಯೆ ಪ್ರೀತಿ ಮೂಡಿತ್ತು. ಇಬ್ಬರೂ ಗುರುವಾರ ಮನೆ ಬಿಟ್ಟು ಓಡಿ ಹೋಗಲು ಯತ್ನಿಸುವ ವೇಳೆ ಬಾಲಕಿಯ ತಂದೆ ಪೊಲೀಸರಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ನಿಧನವಾರ್ತೆ

ಡಾ.ಪುಟ್ಟಶಂಕರಪ್ಪ



ಬೆಂಗಳೂರು: ಲೇಖಕರೂ ಆಗಿದ್ದ ವೈದ್ಯ ಡಾ.ಪುಟ್ಟಶಂಕರಪ್ಪ (87) ಗುರುವಾರ ನಿಧನರಾದರು. ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಸರ್. ಸಿ.ವಿ.ರಾಮನ್ ನಗರ ವಿಧಾನಸಭಾಕ್ಷೇತ್ರದ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರೂ ಆಗಿದ್ದರು. ಅವರು ಇಂದಿರಾನಗರದ ಅನು ಕ್ಲಿನಿಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ನಗರದಲ್ಲಿ ಇಂದು

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಮಕ್ಕಳ ಮೇಲಿನ ದೌರ್ಜನ್ಯದ ವಿರುದ್ಧ ವಕೀಲರಿಂದ '7ಕೆ ಟ್ರ್ಯಾಕ್' ಓಟ: ಅತಿಥಿಗಳು: ನ್ಯಾ. ಹೇಮಂತ್ ಚಂದನ್‌ಗೌಡರ್, ನ್ಯಾ.ಎಂ. ನಾಗಪ್ರಸನ್ನ, ನ್ಯಾ. ಮಕ್ಕಿಮನೆ ಗಣೇಶಯ್ಯ ಉಮಾ, ನ್ಯಾ. ವೇದವ್ಯಾಸಾಚಾರ್ ಶ್ರೀಶಾನಂದ, ಎ.ಎಸ್. ಪೊನ್ನಣ್ಣ, ಆಯೋಜನೆ: ವಕೀಲರ ಸಂಘ, ಸ್ಥಳ: ಸರ್ಕಾರಿ ಕಲಾ ಕಾಲೇಜು ಮೈದಾನ, ನೃಪತುಂಗ ರಸ್ತೆ, ಬೆಳಿಗ್ಗೆ 6.30

ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ: 'ದಲಿತ ಬಂಡಾಯ ಸಾಹಿತ್ಯ ಅವಲೋಕನ': ಬಂಜಗೆರೆ ಜಯಪ್ರಕಾಶ್, 'ಜೈನ ಸಾಹಿತ್ಯ ಚರಿತ್ರೆ ಮತ್ತು ತತ್ವಗಳು': ಲಲಿತಾಂಬ, 'ಜಾನಪದ ಪ್ರಕಾರಗಳ ನೃತ್ಯ': ನ್ಯಾಷನಲ್ ಎಜುಕೇಶನ್ ಸೊಸೈಟಿಯ ವಿದ್ಯಾರ್ಥಿಗಳು, 'ತಾಳಮದ್ದಳೆ': ಸುಧಾಕರ್ ಜೈನ್ ಮತ್ತು ತಂಡ, ಆಯೋಜನೆ: ನ್ಯಾಷನಲ್ ಕಾಲೇಜು ಸಾಹಿತ್ಯ ಹಬ್ಬ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10ರಿಂದ



ಬಂಜಗೆರೆ ಜಯಪ್ರಕಾಶ್

ಪ್ರೊ.ಸಾ.ಕೃ. ರಾಮಚಂದ್ರರಾವ್ ಶತಮಾನೋತ್ಸವದ ಅಂಗವಾಗಿ ಅವರ ಬೌದ್ಧ ಸಾಹಿತ್ಯ ಕೃತಿಗಳ ಕುರಿತು ವಿಚಾರಸಂಕಿರಣ: ಉದ್ಘಾಟನೆ: ಆರ್. ಗಣೇಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿ: ರಾಹುಲ್ ಎಂ. ಖರ್ಗೆ, ವಿಚಾರ ಮಂಡನೆ: ಮೊಳಕಾಲ್ಮುರು ಶ್ರೀನಿವಾಸಮೂರ್ತಿ, ಜಿ.ಬಿ. ಹರೀಶ್, ಪೂರ್ಣಿಮಾ ಎಸ್., ಆಯೋಜನೆ: ಪಾಲಿ ಇನ್‌ಸ್ಟಿಟ್ಯೂಟ್, ಬಿ.ಎಂ.ಶ್ರೀ. ಪ್ರತಿಷ್ಠಾನ, ಪ್ರೊ.ಸಾ.ಕೃ. ರಾಮಚಂದ್ರರಾವ್ ಮೆಮೋರಿಯಲ್ ಟ್ರಸ್ಟ್, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನದ ಸಭಾಂಗಣ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ನವೀಕೃತ ಕನ್ನಡ ಕಟ್ಟೆಯ ಉದ್ಘಾಟನೆ: ಆಯೋಜನೆ: ಕನ್ನಡ ಜನ–ಜಲ–ನೆಲ–ಸಾಹಿತ್ಯ–ಸಾಂಸ್ಕೃತಿಕ ಅಭಿವೃದ್ಧಿ ಸಂಸ್ಥೆ, ಸ್ಥಳ: ಕನ್ನಡ ಕಟ್ಟೆ, ಚಂದ್ರಶೇಖರ ಭಾರತಿ ಬಡಾವಣೆ, ಕನ್ನಡ ಕಟ್ಟೆ ರಸ್ತೆ, ಶಂಕರಪುರ, ಬೆಳಿಗ್ಗೆ 10

ಉಪನ್ಯಾಸ–ಸಂಗೀತ: 'ಸಿದ್ಧಗಂಗೆಯ ಸಿದ್ಧಿಪುರುಷ, ತ್ರಿದಾಸೋಹ, ತ್ರಿವಿಕ್ರಮ, ನಡೆದಾಡುವ ದೇವರೆಂದು ಖ್ಯಾತರಾದ ಶಿವಕುಮಾರ ಸ್ವಾಮೀಜಿ': ಆರ್. ಶ್ರೀಧರಶಾಸ್ತ್ರೀ ಸೂರಿ, 'ಕನ್ನಡ ಸಂಸ್ಕೃತಿ–ನಮ್ಮ ಹೆಮ್ಮೆ': ಬಸವರಾಜ ಸಾದರ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ: ರಾಜೇಶ್ವರಿ ಸಾದರ, ಕವಿತಾ ಸಾದರ, ಉಪಸ್ಥಿತಿ: ಕೊಡಕ್ಕಲ್ ಶಿವಪ್ರಸಾದ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

'ಸಂವಿಧಾನ ಬದಲಾಯಿಸಿದ್ದು ಯಾರು?' ಪುಸ್ತಕ ಬಿಡುಗಡೆ: ಉದ್ಘಾಟನೆ ಮತ್ತು ಪುಸ್ತಕ ಲೋಕಾರ್ಪಣೆ: ಅರ್ಜುನ್ ರಾಮ್ ಮೇಘ್ವಾಲ್, ಅಧ್ಯಕ್ಷತೆ: ಆರ್.ಅಶೋಕ, ಪುಸ್ತಕ ಪರಿಚಯ: ಎನ್.ಮಹೇಶ್, ವಿಶೇಷ ಆಹ್ವಾನಿತರು: ಮಲ್ಲಮ್ಮ ಹೂವಿನಹಡಗಲಿ, ಅಂತೋಣಿಸ್ವಾಮಿ ಕುಟ್ಟಿ, ಸ್ಥಳ:ಭಾರತೀಯ ವಿದ್ಯಾಭವನ, ಸಂಜೆ 5

ದೇವಾಂಗ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಉದ್ಘಾಟನೆ: ಸ್ವಾಮಿ ವೀರೇಶಾನಂದ ಸರಸ್ವತಿ, ಅತಿಥಿಗಳು: ಕೆ. ನಾರಾಯಣ್, ಉಮಾಶ್ರೀ, ಎಂ.ಡಿ. ಲಕ್ಷ್ಮೀನಾರಾಯಣ, ಅಧ್ಯಕ್ಷತೆ: ಕೆ.ಬಿ. ಭಾಸ್ಕರಯ್ಯ, ಆಯೋಜನೆ: ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ರಜತ ಮಹೋತ್ಸವ ಸಂಭ್ರಮಾಚರಣೆ ಹಾಗೂ 2024–25ನೇ ಸಾಲಿನ ಶೈಕ್ಷಣಿಕ ಕಾರ್ಯಕ್ರಮಕ್ಕೆ ಚಾಲನೆ: ಅತಿಥಿಗಳು: ರಾಜ್ ಕುಮಾರ್ ಖತ್ರಿ, ಮನು ಚೋಪ್ರಾ, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಇಸಿಎಸ್ ಲೇಔಟ್, ಐಟಿ ಪಾರ್ಕ್ ರಸ್ತೆ, ಬೆಳಿಗ್ಗೆ 10

ಕಾದಂಬರಿಕಾರ ಗಜಾನನ ಶರ್ಮ ಅವರೊಂದಿಗೆ ಸಂವಾದ: ನಿರ್ವಹಣೆ: ಜಗದೀಶ ಶರ್ಮಾ ಸಂಪ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಬೆಳಿಗ್ಗೆ 10.30

69ನೇ ಕರ್ನಾಟಕ ರಾಜ್ಯೋತ್ಸವ ಹಾಗೂ ಮಾಸಿಕ ಮಂಟಪ ಪ್ರಥಮ ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ವಿ. ನಾಗೇಂದ್ರ ಪ್ರಸಾದ್, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಮುಖ್ಯ ಅತಿಥಿ: ನೇ.ಭ. ರಾಮಲಿಂಗ ಶೆಟ್ಟಿ, ಆಶಯ ನುಡಿ: ಮುದಿಗೆರೆ ರಮೇಶ್ ಕುಮಾರ್, ಆಯೋಜನೆ: ದೀಪಾ ಅಕಾಡೆಮಿ ಅಂಜನಾನಗರ, ಸ್ಥಳ: ಈಸ್ಟ್ ವೆಸ್ಟ್ ಕಾಲೇಜು ಸಭಾಂಗಣ, ಅಂಜನಾನಗರ, ಬೆಳಿಗ್ಗೆ 10.30

12ನೇ ವಾರ್ಷಿಕೋತ್ಸವದ ಪ್ರಯುಕ್ತ 'ವಚನ ಸುಧೆ' ರಾಗಸಂಯೋಜನೆಯ ವಚನಗಳ ಗಾಯನ: ಉದ್ಘಾಟನೆ: ಎಲ್.ಎ. ರವಿಸುಬ್ರಮಣ್ಯ, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ, ಅತಿಥಿಗಳು: ಧರಣೀದೇವಿ ಮಾಲಗತ್ತಿ, ಬಲವಂತರಾವ್ ಪಾಟೀಲ, ಕಾ.ತ. ಚಿಕ್ಕಣ್ಣ, ಕೆ.ವಿ. ನಾಗರಾಮೂರ್ತಿ, ಶುಭಾ ಧನಂಜಯ, ಹುಸೇನಸಾಬ್ ದಾಸ್ ಕನಕಗಿರಿ, ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

'ಕಾವಿ ಕೆಲಿಡೋಸ್ಕೋಪ್' ಕಲಾ ಪ್ರದರ್ಶನಕ್ಕೆ ಚಾಲನೆ: ಅತಿಥಿಗಳು: ಪ.ಸ. ಕುಮಾರ್, ಗುರುದಾಸ್ ಶೆಣೈ, ರೂಪಾ ಹರಿಪ್ರಸಾದ್, ಆಯೋಜನೆ: ಭಾಸ ಗ್ಯಾಲರಿ ಆ್ಯಂಡ್ ಸ್ಟುಡಿಯೊ & ಕಾವಿ ಆರ್ಟ್ ಫೌಂಡೇಷನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ ಮಧ್ಯಾಹ್ನ 3

ಶಂಕರ್‌ನಾಗ್ ಅವರ ಜನ್ಮದಿನದ ಅಂಗವಾಗಿ 11ನೇ ವರ್ಷದ ಚಾಲಕರ ದಿನಾಚರಣೆ ಹಾಗೂ ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ನಟರಾಜ್ ಶರ್ಮಾ, ಆಯೋಜನೆ: ಕರ್ನಾಟಕ ಆಟೊ, ಟ್ಯಾಕ್ಸಿ, ಗೂಡ್ಸ್, ಶಾಲಾ ವಾಹನ ಚಾಲಕರ ಸಂಘಟನೆ, ಸ್ಥಳ: ಚಂದ್ರಗುಪ್ತ ಆಟದ ಮೈದಾನ (ಶಾಲಿನಿ ಗ್ರೌಂಡ್), ಜಯನಗರ 5ನೇ ವಿಭಾಗ, ಸಂಜೆ 4

15ನೇ ವಾರ್ಷಿಕೋತ್ಸವ: ಗೌರವ ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮಾ, ಕೆ.ಜೆ. ಮಹಾನುಭಾವಿಮಠ್, ಕಲ್ಲೂರಿ ಮನೋರಮ, ಹುಸೇನ್ ಸಾಬ್ ಎಫ್ ಕೆರೂರು, ಡಿ.ಎನ್. ಹರಿದಾಸ್, ಆಯೋಜನೆ: ಅಮೃತ ಕಲಾ ಮಂದಿರ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4.30

ಕೆ.ಆರ್. ಮೀರಾ ಅವರ 'ಭಗವಂತನ ಸಾವು' ಅನುವಾದಿತ ಕೃತಿ ಬಿಡುಗಡೆ: ಪ್ರಕಾಶ್ ರಾಜ್, ಅನುವಾದ: ವಿಕ್ರಂ ಕಾಂತಿಕೆರೆ, ಉಪಸ್ಥಿತಿ: ವಿಜಯ ಕಲಬುರಗಿ, ಸಿದ್ದನಗೌಡ ಪಾಟೀಲ, ಆಯೋಜನೆ: ಬಹುರೂಪಿ, ಡಾ.ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಸಂಜೆ 5

ರಂಗಸಂವಾದ–4: ಮುಖ್ಯ ಅತಿಥಿ: ಎಚ್. ಜನಾರ್ದನ್ (ಜನ್ನಿ), ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಸಂವಾದದ ವಿಷಯ: 'ಜನಪರ ಹೋರಾಟ ಮತ್ತು ರಂಗಭೂಮಿ', ನಿರ್ವಹಣೆ: ಟಿ.ಎಚ್. ಲವಕುಮಾರ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

'ಲಾಸ್ಯಪ್ರಭಾ' ವಾರ್ಷಿಕ ನೃತ್ಯ ಪ್ರದರ್ಶನ: ಯಶೋಮತಿ ಮಿಶ್ರಾ, ಸಾನ್ವಿ ಠಾಕೂರ್, ಅನುರಾಧಾ ವಿಕ್ರಾಂತ್, ರಿಯಾ ವಿಕ್ರಾಂತ್, ಮುರಳಿ ಮೋಹನ್, ಪಾವನಿ, ಆಯೋಜನೆ: ನೃತ್ಯಧ್ವನಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಕನ್ನಡ ಹವ್ಯಾಸಿ ರಂಗೋತ್ಸವ ಸಮಾರೋಪ ಸಮಾರಂಭ: ಆಶಯ ನುಡಿ: ಎಂ.ಎಸ್. ನರಸಿಂಹಮೂರ್ತಿ, ಮುಖ್ಯ ಅತಿಥಿಗಳು: ಹನುಮಂತೇಗೌಡ, ಉಪಸ್ಥಿತಿ: ಎಲ್.ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡ ನಗರ, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ: ಯುಗಳ ಗಾಯನ: ಶ್ವೇತಾ ರಘುನಂದನ್, ಎಸ್.ಎ. ರಮ್ಯಾ ಅನಿಲ್, ಪಿಟೀಲು: ಸಿ.ಎ. ನಟರಾಜ್, ಮೃದಂಗ: ಬೆಳಕವಾಡಿ ಆರ್. ಶ್ರೀಧರ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಅಂಚೆ ಕಚೇರಿ ಹತ್ತಿರ, ಮಲ್ಲೇಶ್ವರ, ಸಂಜೆ 6.15

ಕಿರುಕುಳ ಆರೋಪ: ಗುತ್ತಿಗೆದಾರ ಜಯರಾಂ ಪತ್ತಾರ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಮುನಿರಾಬಾದ್‌ನ ಜೆಸ್ಕಾಂನ ಅಧಿಕಾರಿಯೊಬ್ಬರು ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರ ಜಯರಾಂ ಪತ್ತಾರ ಎಂಬುವವರು ಶುಕ್ರವಾರ ವಿಷ ಸೇವಿಸಿ ತಾಲ್ಲೂಕಿನ ಗಿಣಗೇರಿಯಲ್ಲಿರುವ ತಮ್ಮ ಮನೆಯಲ್ಲಿ ಆತ್ಮಹತ್ಯೆ ಯತ್ನಿಸಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜಯರಾಂ ಬರೆದಿದ್ದಾರೆ ಎನ್ನಲಾದ ಪತ್ರ ಲಭಿಸಿದ್ದು, 'ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನಾನು ನಂಬಿದ ಅಧಿಕಾರಿಯಿಂದ ಬಹಳ ಮೋಸವಾಗಿದೆ. ರೆಸಾರ್ಟ್ ಸಮಸ್ಯೆಯಿಂದಾಗಿ ರೆಸಾರ್ಟ್ ಮಾಲೀಕರಿಗೆ ಬಹಳ ತೊಂದರೆ ಮಾಡಿದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಸಂತೋಷ್ ಕೃತ್ಯಕ್ಕೆ ಮನಸ್ಸು ವಿಚಲಿತಗೊಂಡಿದೆ' ಎಂದು ಬರೆದಿದ್ದಾರೆ.

ಜಯರಾಂ ರೆಸಾರ್ಟ್‌ನ ವಿದ್ಯುತ್ ಕಾಮಗಾರಿ ಮಾಡಿದ್ದರು. ಬಿಲ್ ಪಾವತಿಗೂ ಮೊದಲೇ ಜೆಸ್ಕಾಂ ಅಧಿಕಾರಿ ಸಂತೋಷ್ ಅದೇ ಕಾಮಗಾರಿಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ರೆಸಾರ್ಟ್‌ನವರು ಜಯರಾಂ ಮೇಲೆ ತೀವ್ರ ಒತ್ತಡ ಹೇರಿದ್ದರು. ಇದೇ ವಿಷಯವಾಗಿ ಗುತ್ತಿಗೆದಾರ ಹಾಗೂ ಅಧಿಕಾರಿ ನಡುವೆ ಮಾತಿನ ಚಕಮಕಿಯೂ ನಡೆದಿತ್ತು ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉನಿ/13/2024–25/1866 ದಿನಾಂಕ: 06–11–2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005 ದಿನಾಂಕ: 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಭೂಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	Sri Anthony Swamy S/o Mariyappa	ಯಲಹಂಕ	ಜಾಲ	ಮಾರನಾಯಕನಹಳ್ಳಿ	1/3ಎ	0–14	ಉದ್ಯಾನವನ	ವಸತಿ

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/3123/2024–25

ರಸ್ತೆ, ನೀರು, ಚರಂಡಿ, ವಿದ್ಯುತ್ ಇಲ್ಲದೇ ನಿವೇಶನದಾರರಿಗೆ ಸಂಕಷ್ಟ

ಕೆಂಪೇಗೌಡ ಬಡಾವಣೆ: ನೀಗದ ಬವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ ಎಲ್ಲ ಬ್ಲಾಕ್‌ಗಳಿಗೆ ನವೆಂಬರ್ ಒಳಗೆ ಮೂಲಸೌಕರ್ಯ ಕಲ್ಪಿಸುವುದಾಗಿ ಬಿಡಿಎ ನೀಡಿದ್ದ ಭರವಸೆ ಹುಸಿಯಾಗಿದೆ. ಕರ್ನಾಟಕ ವಿಧಾನಸಭೆ ಅರ್ಜಿ ಸಮಿತಿ ವಿಧಿಸಿದ್ದ ಅಂತಿಮ ಗಡುವು ಮುಗಿದರೂ ಬಡಾವಣೆಯ ನಿವೇಶನದಾರರ ಬವಣೆ ನೀಗಿಲ್ಲ.

ಮೈಸೂರು ರಸ್ತೆಯಲ್ಲಿ ಚಲ್ಲಘಟ್ಟ ಸಮೀಪ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಈ ಬಡಾವಣೆಯ ನಿವೇಶನಗಳನ್ನು 2016 ಮತ್ತು 2018ರಲ್ಲಿ ಹಂಚಿಕೆ ಮಾಡಲಾಗಿತ್ತು. ಬಡಾವಣೆಯಲ್ಲಿ 9 ಬ್ಲಾಕ್‌ಗಳಿದ್ದು, ಸುಮಾರು 29 ಸಾವಿರ ನಿವೇಶನಗಳಿವೆ. ಆದರೆ, ವಿದ್ಯುತ್, ನೀರು, ರಸ್ತೆ ಸಂಪರ್ಕ ಇಲ್ಲದ ಕಾರಣ 30 ಕುಟುಂಬಗಳಷ್ಟೇ ಮನೆ ನಿರ್ಮಿಸಿಕೊಂಡಿವೆ.

ಬಿಡಿಎ ಯಾವುದೇ ಅಭಿವೃದ್ಧಿ ಮಾಡುತ್ತಿಲ್ಲ ಎಂದು ಇಲ್ಲಿನ ನಿವೇಶನದಾರರು ರಚಿಸಿಕೊಂಡಿರುವ 'ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ'ಯು ಕರ್ನಾಟಕ ವಿಧಾನಸಭೆ ಅರ್ಜಿ ಸಮಿತಿಗೆ ದೂರು ನೀಡಿತ್ತು. ಒಂದು ವರ್ಷದ ಒಳಗೆ ಅಭಿವೃದ್ಧಿ ಕಲ್ಪಿಸುವಂತೆ 2022ರಲ್ಲಿ ಅರ್ಜಿ ಸಮಿತಿಯು ಬಿಡಿಎಗೆ ಸೂಚಿಸಿತ್ತು.



ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿರು ಒಟ್ಟು ಒಂಬತ್ತು ಬ್ಲಾಕ್‌ಗಳ ಪೈಕಿ 7ನೇ ಬ್ಲಾಕ್‌ಗಳಲ್ಲಿ ಮಾತ್ರ ರಸ್ತೆ ಡಾಂಬರೀಕರಣ ಮಾಡಲಾಗಿದೆ



ನಾಡಪ್ರಭು ಕೆಂಪೇಗೌಡ ಬಡಾವಣೆಯ ಒಂದು ಬ್ಲಾಕ್‌ನಲ್ಲಿರುವ ಕಚ್ಚಾ ರಸ್ತೆ

ಈ ಅವಧಿ 2023ರ ಸೆಪ್ಟೆಂಬರ್‌ಗೆ ಕೊನೆಗೊಂಡರೂ ಯಾವುದೇ ಅಭಿವೃದ್ಧಿಯಾಗಿರಲಿಲ್ಲ. ಅಭಿವೃದ್ಧಿಪಡಿಸಲು ಇನ್ನೂ 12 ತಿಂಗಳು ಬೇಕು ಎಂದು ಆಗ ಬಿಡಿಎ ಕೋರಿಕೆ ಸಲ್ಲಿಸಿತ್ತು. '12ರ ಬದಲು 14 ತಿಂಗಳು ತೆಗೆದುಕೊಳ್ಳಿ. ಇದೇ ಅಂತಿಮ ಗಡುವು. ಅದರೊಳಗೆ ಮೂಲಸೌಕರ್ಯ ಕಲ್ಪಿಸಿ' ಎಂದು ಅರ್ಜಿ ಸಮಿತಿ ನಿರ್ದೇಶನ ನೀಡಿತ್ತು. ಈ 14 ತಿಂಗಳ ಅವಧಿಯೂ ಮುಗಿದಿದೆ ಎಂದು ಮುಕ್ತ ವೇದಿಕೆಯ ಜಂಟಿ ಕಾರ್ಯದರ್ಶಿ ಸೂರ್ಯಕಿರಣ್ ತಿಳಿಸಿದರು.

ಒಂದೇ ಬ್ಲಾಕ್ ಅಭಿವೃದ್ಧಿ: 'ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರು ಇತ್ತೀಚೆಗೆ ಬಡಾವಣೆಗೆ ಭೇಟಿ ನೀಡಿ ಪರಿಶೀಲಿಸಿದ್ದರು. ಬೇಗ ಸೌಕರ್ಯ ಕಲ್ಪಿಸುವಂತೆ ತಿಳಿಸಿದ್ದರು. ಜೊತೆಗೆ ಅರ್ಜಿ ಸಮಿತಿಯ ಗಡುವು ಕೂಡ ಇತ್ತು. ಮೈಸೂರು ರಸ್ತೆ ಕಡೆಯಿಂದ ಕಾಣುವ 7ನೇ ಬ್ಲಾಕ್ ಅನ್ನು ಮಾತ್ರ ಬಿಡಿಎ ಅಭಿವೃದ್ಧಿ ಮಾಡಿ, ಎಲ್ಲ ಕಡೆ ಅಭಿವೃದ್ಧಿಯಾಗಿದೆ ಎಂದು ಕಣ್ಣಿಗೆ ಮಣ್ಣೆರಚುವ ಪ್ರಯತ್ನ ಮಾಡಲಾಗಿದೆ. 7ನೇ ಬ್ಲಾಕ್‌ನಲ್ಲಿ ಮಾತ್ರ ಶೇ 80ರಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. 5 ಮತ್ತು 6ನೇ ಬ್ಲಾಕ್‌ಗಳಲ್ಲಿ ರಸ್ತೆ ಕಾಮಗಾರಿ ಕುಂಟುತ್ತಾ ಸಾಗಿದೆ. ಉಳಿದ ಬ್ಲಾಕ್‌ಗಳಲ್ಲಿ ಯಾವುದೇ ಮೂಲಸೌಕರ್ಯಗಳಿಲ್ಲ' ಎಂದು ಸೂರ್ಯಕಿರಣ್ ದೂರಿದರು.

'ಕೆಲಸ ಪ್ರಗತಿಯಲ್ಲಿದೆ': ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಬಿಡಿಎ ಆಯುಕ್ತ ಎನ್. ಜಯರಾಂ, 'ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಕೆಲಸವೇ ನಡೆದಿಲ್ಲ ಎಂಬುದು ಸತ್ಯಕ್ಕೆ ದೂರವಾದ ಸಂಗತಿ. ಶೀಘ್ರದಲ್ಲಿ ಎಲ್ಲ ಕಾಮಗಾರಿಗಳೂ ಪೂರ್ಣಗೊಳ್ಳಲಿವೆ' ಎಂದರು.

'ಭರವಸೆಯಷ್ಟೇ.. ಕೆಲಸ ಇಲ್ಲ'

4,040 ಎಕರೆಯಲ್ಲಿ ಬಡಾವಣೆ ನಿರ್ಮಿಸಲು 2010ರಲ್ಲಿ ಬಿಡಿಎ ಯೋಜನೆ ರೂಪಿಸಿತ್ತು. ಅದರಲ್ಲಿ 2,200 ಎಕರೆಯಲ್ಲಿ ಬಡಾವಣೆಯನ್ನು ನಿರ್ಮಿಸಿದೆ. ಎಲ್ಲ 9 ಬ್ಲಾಕ್‌ಗಳ ನಿವೇಶನದಾರರಿಂದ ಹಂತ ಹಂತವಾಗಿ ಹಣ ಪಡೆಯದೇ ಒಂದೇ ಬಾರಿಗೆ ನಿವೇಶನ ಮೊತ್ತವನ್ನು ಬಿಡಿಎ ಕಟ್ಟಿಸಿಕೊಂಡು 2016 ಮತ್ತು 2018ರಲ್ಲಿ ನಿವೇಶನ ಹಂಚಿಕೆ ಮಾಡಿದೆ. ಅಭಿವೃದ್ಧಿ ಕಾರ್ಯಗಳನ್ನು ಹಂತ ಹಂತವಾಗಿ ಮಾಡಲಾಗುವುದು ಎಂದು 2016ರಿಂದಲೂ ಹೇಳಿಕೊಂಡು ಬಂದಿರುವ ಬಿಡಿಎ, ಇನ್ನೂ ಮೂಲಸೌಕರ್ಯಗಳನ್ನು ಕಲ್ಪಿಸಿಲ್ಲ. ಈಗ 7ನೇ ಬ್ಲಾಕ್‌ನಲ್ಲಿ ಮಾತ್ರ ಕೆಲಸ ಮಾಡುತ್ತಿದೆ. ಉಳಿದ ಬ್ಲಾಕ್‌ನ ನಿವೇಶನದಾರರು ಮನೆ ಕಟ್ಟುವುದು ಬೇಡವೇ?

ಚನ್ನಬಸವರಾಜ, ಅಧ್ಯಕ್ಷ, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ

ಮನೆ ಕಟ್ಟುವುದು ಹೇಗೆ?

ಸರಿಯಾದ ರಸ್ತೆ ಇಲ್ಲ, ನೀರು, ವಿದ್ಯುತ್ ಇಲ್ಲ. ನಿವೇಶನದಾರರು ಮನೆ ಕಟ್ಟಿಕೊಳ್ಳುವುದು ಹೇಗೆ? ಹಾಗಾಗಿ ಇಲ್ಲಿಯವರೆಗೆ 25–30 ಮನೆಗಳಷ್ಟೇ ನಿರ್ಮಾಣಗೊಂಡಿವೆ. ಈ ಯೋಜನೆಯಡಿ 1,300 ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಬೇಕಿದ್ದು, ಆ ಸಮಸ್ಯೆಯೂ ಇತ್ಯರ್ಥವಾಗಿಲ್ಲ. ಈಗಾಗಲೇ ಭೂಸ್ವಾಧೀನ ಮಾಡಿಕೊಂಡು ನಿವೇಶನ ಹಂಚಿರುವಲ್ಲಿಯೂ ಸಮಸ್ಯೆಗಳು ಪರಿಹಾರವಾಗಿಲ್ಲ. ಗುತ್ತಿಗೆದಾರರಿಗೆ ಪಾವತಿ ಬಾಕಿ ಉಳಿಸಿಕೊಂಡಿರುವುದೇ ಕಾಮಗಾರಿ ಕುಂಠಿತವಾಗಲು ಕಾರಣ.

ಸೂರ್ಯಕಿರಣ್, ಜಂಟಿ ಕಾರ್ಯದರ್ಶಿ, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ

'ಯಾವ ಗಡುವೂ ಪಾಲನೆಯಾಗಿಲ್ಲ'

7ನೇ ಬ್ಲಾಕ್ ಹೊರತುಪಡಿಸಿ ಉಳಿದವುಗಳಲ್ಲಿ ವಾಹನ ಸಂಚಾರವೇ ಕಷ್ಟವಾಗುವ ಕಚ್ಚಾ ರಸ್ತೆಗಳಷ್ಟೇ ಇವೆ. ವಿದ್ಯುತ್ ಬೀದಿದೀಪದ ಡಮ್ಮಿ ಕಂಬಗಳು, ಕಾರ್ಯನಿರ್ವಹಿಸದ ಉಪ ಕೇಂದ್ರಗಳಿವೆ. ವಿದ್ಯುತ್ ವಿತರಣಾ ಜಾಲ ಇನ್ನೂ ಎಲ್ಲ ಕಡೆ ತಲುಪಿಲ್ಲ. ಒಳಚರಂಡಿ ಜಾಲ ಪೂರ್ಣಗೊಳಿಸದ ಕಾರಣ ಮ್ಯಾನ್‌ಹೋಲ್‌ಗಳು ತುಂಬಿ ಹರಿಯುತ್ತಿವೆ. ಕುಡಿಯುವ ನೀರಿನ ಸೌಕರ್ಯವಿಲ್ಲ. ಈ ಬಗ್ಗೆ 'ರೇರಾ'ಕ್ಕೆ ಹಿಂದೆಯೇ ವೇದಿಕೆ ದೂರು ನೀಡಲಾಗಿತ್ತು. 2018, 2020 ಮತ್ತು 2021ರಲ್ಲಿ 'ರೇರಾ' ಗಡುವು ನೀಡಿದ್ದರೂ ಬಿಡಿಎ ಪಾಲಿಸಿಲ್ಲ. ಆನಂತರ ಅರ್ಜಿ ಸಮಿತಿ ನೀಡಿದ ಎರಡು ಗಡುವುಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳಾಗಿಲ್ಲ.

ಎಂ. ಅಶೋಕ್, ಕಾರ್ಯದರ್ಶಿ, ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ

'ಜ್ಞಾನೋದಯ' ಶಾಲಾ ಕಟ್ಟಡ ತೆರವುಗೊಳಿಸದಂತೆ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧರ್ಮರಾಯ ಸ್ವಾಮಿ ದೇವಸ್ಥಾನ ಉಪ ವಿಭಾಗದ ಸುಂಕೇನಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿರುವ ಶೃಂಗೇರಿ ಮಠದ ಜ್ಞಾನೋದಯ ಶಾಲೆ ಮತ್ತು ಪದವಿಪೂರ್ವ ಕಾಲೇಜು ಕಟ್ಟಡದ ಅನಧಿಕೃತ ಭಾಗ ತೆರವು ಗೊಳಿಸುವ ಆದೇಶಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತರು ತಡೆಯಾಜ್ಞೆ ನೀಡಿದ್ದಾರೆ.

ಶೃಂಗೇರಿ ಮಠದ ಅಡಿಯಲ್ಲಿ ಕಾರ್ಯನಿರ್ವಹಿಸುವ ಈ ಸಂಸ್ಥೆಯ ಕಟ್ಟಡವನ್ನು ನಿಯಮಬಾಹಿರವಾಗಿ ನಿರ್ಮಿಸಲಾಗಿದೆ ಎಂದು ದೂರು ಬಂದಿದ್ದರಿಂದ ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪರಿಶೀಲನೆ ಮಾಡಿ ವರದಿ ನೀಡಿದ್ದರು. ಈ ವರದಿಯ ಆಧಾರದಲ್ಲಿ ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸುವಂತೆ ಬಿಬಿಎಂಪಿ ಚಿಕ್ಕಪೇಟೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ಧರ್ಮರಾಯಸ್ವಾಮಿ ದೇವಸ್ಥಾನ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ ಸೂಚಿಸಿದ್ದರು.

ನ.11ರಂದು ಕಟ್ಟಡದ ಅನಧಿಕೃತ ಭಾಗ ತೆರವುಗೊಳಿಸಲು ತೀರ್ಮಾನಿಸಿ ಪೊಲೀಸ್ ಬಂದೋಬಸ್ತ್ ಒದಗಿಸಲು ಶಂಕರಪುರ ಪೊಲೀಸ್ ಠಾಣೆಗೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪತ್ರ ಬರೆದಿದ್ದರು. ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಸಿದ್ಧತೆಯನ್ನೂ ಮಾಡಿಕೊಳ್ಳಲಾಗಿತ್ತು.

ಈ ಮಧ್ಯೆ ಜ್ಞಾನೋದಯ ಶಾಲೆ ಮತ್ತು ಪಿಯು ಕಾಲೇಜಿನ ಅರ್ಜಿಯ ಆಡಳಿತ ಮಂಡಳಿಯು ಬಿಬಿಎಂಪಿ ಮುಖ್ಯ ಆಯುಕ್ತರ ನ್ಯಾಯಾಲಯದಲ್ಲಿ ಬುಧವಾರ ಮೇಲ್ಮನವಿ ಸಲ್ಲಿಸಿತ್ತು. ಬುಧವಾರವೇ ತುರ್ತಾಗಿ ಅರ್ಜಿಯ ವಿಚಾರಣೆ ನಡೆಸಿರುವ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು, ಮುಂದಿನ ಆದೇಶದವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಮಧ್ಯಂತರ ಆದೇಶ ಹೊರಡಿಸಿದ್ದಾರೆ. ಸಂಸ್ಥೆಯ ಅರ್ಜಿಯ ವಿಚಾರಣೆಯನ್ನು ತ್ವರಿತವಾಗಿ ನಿಗದಿಪಡಿಸುವಂತೆಯೂ ಆದೇಶದಲ್ಲಿ ಸೂಚಿಸಿದ್ದಾರೆ.

ಸಂಬಂಧಿಕರ ಬಗ್ಗೆ ಹೇಳಿಕೊಳ್ಳಲು ಅಸಹ್ಯವೇ: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಮಲ್ಲಿಕಾರ್ಜುನ ಖರ್ಗೆ ಮಗ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಇದೆ. ನಿಮ್ಮ ತಂದೆ, ತಾಯಿ, ಸಂಬಂಧಿಕರ ಬಗ್ಗೆ ಹೇಳಿಕೊಳ್ಳಲು ಅಷ್ಟೊಂದು ಅಸಹ್ಯವೇ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕುಟುಂಬ ರಾಜಕಾರಣದ ಕುರಿತ ಸಂಸದ ತೇಜಸ್ವಿ ಸೂರ್ಯ ಅವರ ಹೇಳಿಕೆಗೆ ಪ್ರಿಯಾಂಕ್ ಪ್ರತಿಕ್ರಿಯಿಸಿದರು.

'ಮಾತೆತ್ತಿದರೆ ಕುಟುಂಬ ರಾಜಕಿಯದ ಬಗ್ಗೆ ಮಾತನಾಡುವ ತೇಜಸ್ವಿ ಸೂರ್ಯ, ತಾವು ಯಾವ ಕುಟುಂಬದ ವರು ಎಂದು ಹೇಳುವುದಿಲ್ಲ. ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡರ ಬಗ್ಗೆ ಕುಟುಂಬ ರಾಜಕೀಯ ಎನ್ನುವ ಅವರಿಗೆ ವಿಜಯೇಂದ್ರ, ರಾಘವೇಂದ್ರ ಕಾಣುವುದಿಲ್ಲವೇ' ಎಂದು ಪ್ರಶ್ನಿಸಿದರು.

ರಾಷ್ಟ್ರೀಯ ಮಟ್ಟದಲ್ಲಿ ಸುಳ್ಳನ್ನು ಸತ್ಯ ಮಾಡುವ ಕೆಲಸ ನಡೆದಿದೆ: ಸಚಿವ ಎಂ.ಬಿ.ಪಾಟೀಲ

‘ವಕ್ಫ್ ರಾದ್ಧಾಂತ ಬಿಜೆಪಿ ಕೊಡುಗೆ’

ಪ್ರಜಾವಾಣಿ ವಾರ್ತೆ



ಎಂ.ಬಿ ಪಾಟೀಲ

ವಿಜಯಪುರ: ‘ರಾಜ್ಯದಲ್ಲಿ ಬಿಜೆಪಿ ಆಡಳಿತ ನಡೆಸಿದ ಅವಧಿಯಲ್ಲಿ ವಕ್ಫ್ ಆಸ್ತಿ ಅತಿಕ್ರಮಣ ತೆರವಿಗೆ ಅನೇಕ ಸುತ್ತೋಲೆ ಹೊರಡಿಸಿದೆ. ಈ ಸಂಬಂಧ ಕಾರ್ಯಪಡೆ ಕೂಡ ರಚಿಸಿತ್ತು. ರಾಜ್ಯದ ಎಲ್ಲ ವಕ್ಫ್ ರಾದ್ಧಾಂತಗಳು ಬಿಜೆಪಿ ಕೊಡುಗೆ. ಅವರ ತಪ್ಪನ್ನು ಕಾಂಗ್ರೆಸ್ ಸರ್ಕಾರ ಸರಿಪಡಿಸುತ್ತಿದೆ’ ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

‘ಕೇಂದ್ರ ಮತ್ತು ರಾಜ್ಯ ಅಧಿಕಾರದಲ್ಲಿ ಇದ್ದ ವೇಳೆ ವಕ್ಫ್ ಆಸ್ತಿ ರಕ್ಷಣೆ ಕುರಿತು ಅಪಾರ ಕಾಳಜಿ ತೋರಿದ್ದ ಬಿಜೆಪಿಯವರು ಬಸವಣ್ಣ ಜನಿಸಿದ ಮತ್ತು ಸೂಫಿ ಸಂತರು ನಡೆದಾಡಿದ ವಿಜಯಪುರ ನೆಲದಲ್ಲಿ ವಕ್ಫ್ ವಿವಾದ ಸೃಷ್ಟಿಸಿದ್ದಾರೆ. ಹಿಂದುತ್ವದ ಪ್ರಯೋಗ ಶಾಲೆ ಮಾಡಲು ಹೊರಟಿದ್ದಾರೆ. ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸುಳ್ಳನ್ನು ಸತ್ಯ ಮಾಡುವ ಕೆಲಸ ನಡೆದಿದೆ’ ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ಬಿಜೆಪಿ ವಕ್ಫ್ ಆಸ್ತಿ ಕುರಿತು ಸುಳ್ಳು ಆರೋಪ ಮಾಡಲು ಪ್ರಾರಂಭಿಸಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರಿಗೆ ನೀಡಲಾದ ಎಲ್ಲ ನೋಟಿಸುಗಳನ್ನು ಹಿಂಪಡೆಯಲು ಆದೇಶ ನೀಡಿದ್ದಾರೆ. ರೈತರಿಗೆ ವಕ್ಫ್ ನೀಡಿರುವ 423 ನೋಟಿಸ್ ರದ್ದು ಪಡಿಸುವ, ಹಿಂಪಡೆಯುವ ಕಾರ್ಯ ಈಗಾಗಲೇ ಮಾಡಲಾಗಿದೆ. ರೈತರು, ಧಾರ್ಮಿಕ ಸ್ಥಳಗಳು ಮತ್ತು ಜನಸಾಮಾನ್ಯರ ಒಂದಿಂಚು ಆಸ್ತಿ ವಕ್ಫ್‌ಗೆ ಸೇರಲು ಬಿಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ವಕ್ಫ್ ಮಸೂದೆ ಸಂಬಂಧಿಸಿದ ಜಂಟಿ ಸಂಸದೀಯ ಸಮಿತಿಯ (ಜೆಪಿಸಿ) ಅಧ್ಯಕ್ಷ ಜಗದಂಬಿಕಾ ಪಾಲ್ ವಿಜಯಪುರಕ್ಕೆ ಭೇಟಿ ನೀಡಿದ್ದು ಕಾನೂನು ಬಾಹಿರ. ಅದು ಹಕ್ಕುಚ್ಯುತಿ ಆಗಲಿದೆ’ ಎಂದರು.

‘ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಕ್ಫ್ ಕಾಯ್ದೆ ರದ್ದಾಗುವವರೆಗೆ ಅನಿರ್ದಿಷ್ಟಾವಧಿ ಧರಣಿಯನ್ನು ದೀರ್ಘಕಾಲದವರೆಗೆ ಮುಂದುವರೆಸುವರು ಎಂದು ಭಾವಿಸಿದ್ದೆ. ಬೇಗನೆ ಧರಣಿ ಅಂತ್ಯಗೊಳಿಸಿದ್ದು ಏಕೆ? ಸೋಳ್ಳೆ ಕಾಟದ ಭಯದಿಂದ ಜಗದಂಬಿಕಾ ಪಾಲ್ ಅವರನ್ನು ಕರೆಯಿಸಿ, ಧರಣಿ ಮುಗಿಸಿದ್ದಾರೆ’ ಎಂದರು.

ಮಾಜಿ ಶಾಸಕ ಪ್ರೊ.ರಾಜು ಆಲಗೂರ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ, ಉಪಾಧ್ಯಕ್ಷ ಗಂಗಾಧರ ಸಂಬಣ್ಣಿ, ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್, ಮಹಾಂತೇಶ ಬಿರಾದಾರ ಇದ್ದರು.



ಜೆಪಿಸಿ ರಾಜ್ಯಕ್ಕೆ ಅನಧಿಕೃತವಾಗಿ ಭೇಟಿ ನೀಡಿ, ಉಪ ಚುನಾವಣೆ ವೇಳೆ ನಾಟಕವಾಡಿದೆ. ಕೇಂದ್ರ ಸರ್ಕಾರವು ಸಮಿತಿಯನ್ನು ದುರ್ಬಳಕೆ ಮಾಡಿದೆ

ಎಚ್.ಕೆ.ಪಾಟೀಲ, ಕಾನೂನು ಸಚಿವ



ವಕ್ಫ್ ವಿಚಾರದಲ್ಲಿ ಸಿದ್ದರಾಮಯ್ಯ ಗಾಬರಿಯಾಗಿದ್ದಾರೆ. ನೀವು ಒಳ್ಳೆಯ ಆಡಳಿತಗಾರ. ಯಾರಿಗೂ ಹೆದರಬೇಡಿ. ಮುಜರಾಯಿ ಅಥವಾ ವಕ್ಫ್ ವಿವಾದವನ್ನು ಸರ್ಕಾರ ಬಗೆಹರಿಸಬೇಕು

ಸಿ.ಎಂ. ಇಬ್ರಾಹಿಂ ಮಾಜಿ ಸಚಿವ

ಸ್ಮಶಾನದ ಪಹಣಿಯಲ್ಲೂ ವಕ್ಫ್ ಹೆಸರು

ನರಗುಂದ (ಗದಗ ಜಿಲ್ಲೆ): ‘ತಾಲ್ಲೂಕಿನ ಚಿಕ್ಕನರಗುಂದ ಗ್ರಾಮದಲ್ಲಿನ ಸ್ಮಶಾನದ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದ್ದು, ಈ ಮೊದಲು ಇದ್ದಂತೆ ದಾಖಲೆಗಳನ್ನು ಸರಿಪಡಿಸಬೇಕು’ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಚಿಕ್ಕನರಗುಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಣಸೀಕಟ್ಟಿ ರಸ್ತೆಗೆ ಹೊಂದಿಕೊಂಡಿರುವ ಸರ್ವೆ ನಂ.113ರ 4 ಎಕರೆ 1 ಗುಂಟೆ ಜಮೀನು ಕಂದಾಯ ಇಲಾಖೆಯ ಸ್ಮಶಾನ ಭೂಮಿ ಎಂದು ಈ ಹಿಂದಿನ ದಾಖಲೆಗಳಲ್ಲಿ ನಮೂದಾಗಿತ್ತು. ಆದರೆ, ಉತಾರದಲ್ಲಿ ಈಗ ವಕ್ಫ್ ಆಸ್ತಿ ಎಂದು ಬದಲಾಗಿದೆ.

‘2019ರ ಗೆಜೆಟ್ ಅಧಿಸೂಚನೆ ಪ್ರಕಾರ, ತಾಲ್ಲೂಕಿನ ಕೆಲ ಆಸ್ತಿಗಳ ಪಹಣಿಯಲ್ಲಿ ವಕ್ಫ್ ಎಂದು ನಮೂದಾಗಿದೆ. ಚಿಕ್ಕನರಗುಂದ ಗ್ರಾಮದ ಸ್ಮಶಾನದ ಪಹಣಿಯಲ್ಲಿ ವಕ್ಫ್ ಎಂದು ನಮೂದಾಗಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಸಮಸ್ಯೆ ಪರಿಹಾರಕ್ಕೆ ಪ್ರಯತ್ನಿಸಲಾಗುವುದು’ ಎಂದು ತಹಶೀಲ್ದಾರ್ ಶ್ರೀಶೈಲ ತಳವಾರ ತಿಳಿಸಿದ್ದಾರೆ.

‘ಯತ್ನಾಳ್ ಕ್ಷಮೆ ಕೇಳದಿದ್ದರೆ ಮಾನನಷ್ಟ ಮೊಕದ್ದಮೆ’

ಕಲಬುರಗಿ: ‘ನಾನು ವಕ್ಫ್ ಭೂಮಿ ಕಬಳಿಸಿದ್ದೇನೆ ಎಂದು ಆರೋಪ ಮಾಡಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಈ ಕುರಿತು ಬೇಷರತ್ ಕ್ಷಮೆ ಕೇಳದಿದ್ದರೆ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ’ ಎಂದು ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಎಚ್ಚರಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾನು ಜಮೀನು ದಾನ ನೀಡಿದ್ದೇನೆಯೇ ಹೊರತು ಕಬಳಿಸಿಲ್ಲ. ಯತ್ನಾಳ್‌ಗೆ ಸಕ್ಕರೆ ಕಾರ್ಖಾನೆ ಎಲ್ಲಿಂದ ಬಂತು? ಮೊದಲು ಬಡವರಿಗೆ ಮನೆ ಕಟ್ಟಿಸಿಕೊಡಿ. ಪ್ರತಿ ವರ್ಷ ನಿಮ್ಮ ಆಸ್ತಿ ಜಾಸ್ತಿಯಾಗುತ್ತಿದೆ. ಎಲ್ಲಿಂದ ಅದು ಬರುತ್ತಿದೆ’ ಎಂದು ಪ್ರಶ್ನಿಸಿದರು.

‘ಯತ್ನಾಳ್–ವಿಜಯೇಂದ್ರ ಮಧ್ಯೆ ಕಿತ್ತಾಟ ನಡೆಯುತ್ತಿದೆ. ಇದರ ಮಧ್ಯೆ ಮುಸ್ಲಿಮರನ್ನು ತೆಗೆದುಕೊಂಡು ಬರುತ್ತಿದ್ದಾರೆ. ಸಚಿವ ಜಮೀರ್ ಅಹ್ಮದ್‌ಗೆ ಅನುಭವದ ಕೊರತೆ ಇದೆ. ಅದಕ್ಕೆ ಏನೋ ಮಾಡೋಕೆ ಹೋಗಿ ಈ ರೀತಿ ಒದ್ದಾಟ ನಡೆಯುತ್ತಿದೆ’ ಎಂದರು.

‘ರಾಜಕಾರಣಿಗಳು ಸಮಾಜವನ್ನು ಕೂಡಿಸುವ ಕೆಲಸ ಮಾಡಬೇಕು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗಲೂ 245 ನೋಟಿಸ್ ನೀಡಿತ್ತು. ಇದೊಂದು ಸಹಜ ಪ್ರಕ್ರಿಯೆ. ನಾನು, ಕೋಡಿಹಳ್ಳಿ ಚಂದ್ರಶೇಖರ ವಿವಾದ ಇರುವ ಕಡೆ ಪ್ರವಾಸ ಮಾಡುತ್ತೇವೆ. ಯಾರು ಜಮೀನಿನಲ್ಲಿ ದುಡಿಯುತ್ತಾನೋ ಅವನದ್ದೇ ಭೂಮಿ ಅಂತ ಇಸ್ಲಾಂ ಸ್ಪಷ್ಟವಾಗಿ ಹೇಳಿದೆ. ಬಿಜೆಪಿ ಸುಮ್ಮನೇ ವಿವಾದ ಮಾಡುತ್ತಿದೆ. ಹಿಜಾಬ್, ರಾಮ ಮಂದಿರದ ಬಳಿಕ ಇವಾಗ ವಕ್ಫ್ ವಿವಾದ ಮುನ್ನೆಲೆಗೆ ತಂದಿದ್ದಾರೆ’ ಎಂದು ಇಬ್ರಾಹಿಂ ಟೀಕಿಸಿದರು.

‘ರಾಜ್ಯದಲ್ಲಿ ಗಟ್ಟಿಯಾದ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದೆ. ಸಮಾನ ಮನಸ್ಕರು ಸೇರಿ ಪಕ್ಷ ಕಟ್ಟಬೇಕು ಅಂತ ತೀರ್ಮಾನ ಮಾಡಿದ್ದೇವೆ. ಜನವರಿಯಲ್ಲಿ ಇದಕ್ಕೊಂದು ರೂಪ ಕೊಡುತ್ತೇವೆ’ ಎಂದರು.

‘ಸೀಟ್ ಬ್ಲಾಕಿಂಗ್: ಕ್ರಿಮಿನಲ್ ಪ್ರಕರಣ’

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾಹಿತಿ

ಪ್ರಜಾವಾಣಿ ವಾರ್ತೆ



ಡಾ.ಎಂ.ಸಿ. ಸುಧಾಕರ್


ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ‘ಸೀಟ್ ಬ್ಲಾಕಿಂಗ್’ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಶುಕ್ರವಾರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದೇ ಐ.ಪಿ ವಿಳಾಸದಿಂದ 10ಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸೀಟುಗಳನ್ನು ನಮೂದಿಸಿದವರ ವಿವರ ಸಂಗ್ರಹಿಸಲು ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆಗೆ (ಸಿಇಎನ್) ದೂರು ನೀಡಲಾಗುವುದು. ಖಚಿತ ಮಾಹಿತಿ ದೊರೆತ ನಂತರ ಕ್ರಿಮಿನಲ್ ಪ್ರಕರಣ ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸೂಚಿಸಲಾಗುವುದು ಎಂದರು.

ಸೀಟು ಹಂಚಿಕೆಯಾಗಿದ್ದರೂ, ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯದ 2,348 ವಿದ್ಯಾರ್ಥಿಗಳಿಗೆ ಕೆಇಎ ನೋಟಿಸ್ ನೀಡಿತ್ತು. ನೋಟಿಸ್‌ಗೆ ವಿದ್ಯಾರ್ಥಿಗಳು ನೀಡಿದ ಉತ್ತರದ ಮೂಲಕ ಬಹು ನೋಂದಣಿಯಾಗಿದ್ದ ಐ.ಪಿ ವಿಳಾಸಗಳನ್ನು ಗುರುತಿಸಲಾಗಿತ್ತು. ಸುಮಾರು 50 ಐ.ಪಿ ವಿಳಾಸದಿಂದ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಬಹು ಬೇಡಿಕೆ ಇರುವ ಕೋರ್ಸ್‌ಗಳ ಸೀಟು ಪಡೆದಿರುವುದು ದೃಢಪಟ್ಟಿದೆ ಎಂದು ಸುಧಾಕರ್ ವಿವರಿಸಿದರು.

ನೋಟಿಸ್ ನೀಡಿದ್ದ ಎಲ್ಲ ವಿದ್ಯಾರ್ಥಿಗಳನ್ನೂ ತನಿಖೆಗೆ ಒಳಪಡಿಸುವುದಿಲ್ಲ. ಒಂದೇ ಐ.ಪಿ ವಿಳಾಸದಿಂದ ಸೀಟು ಪಡೆದ ವಿದ್ಯಾರ್ಥಿಗಳನ್ನಷ್ಟೇ ವಿಚಾರಣೆ ನಡೆಸಲು ಸಿಇಎನ್ ಪೊಲೀಸರಿಗೆ ಸೂಚಿಸಲಾಗುವುದು. ದಾಖಲೆಗಳು ದೊರೆತ ನಂತರ ಕಾಲೇಜುಗಳಿಗೆ ನೋಟಿಸ್ ನೀಡಿ ವಿವರಣೆ ಪಡೆಯಲಾಗುವುದು ಎಂದು ಮಾಹಿತಿ ನೀಡಿದರು.

ಪ್ರಮುಖ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಬೇಡಿಕೆ ಇರುವ ಕೋರ್ಸ್‌ಗಳೇ ಖಾಲಿ ಉಳಿದಿವೆ. ಅಂತಹ ಕಾಲೇಜುಗಳನ್ನು ಪಟ್ಟಿ ಮಾಡಲಾಗಿದೆ. ಸೀಟ್ ಬ್ಲಾಕಿಂಗ್ ದಂಧೆಯ ಹಿಂದೆ ದೊಡ್ಡ ಜಾಲ ಇರುವ ಶಂಕೆ ಇದೆ. ಪ್ರತಿಭಾವಂತರಿಗೆ ಸಿಗಬೇಕಿದ್ದ ಸೌಲಭ್ಯಗಳನ್ನು ವಂಚಿಸುವ ಇಂತಹ ಜಾಲದ ನಿರ್ಮೂಲನೆಗೆ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದರು.



‘ನನಗೆ ಸಮ್ಮೇಳನ ಸರ್ವಾಧ್ಯಕ್ಷತೆ ಬೇಡ’

ಪ್ರಜಾವಾಣಿ ವಾರ್ತೆ



ತರಳಬಾಳು ಶ್ರೀ

ಸಿರಿಗೆರೆ (ಚಿತ್ರದುರ್ಗ): ‘ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿಗಳಿಗೆ ಮನ್ನಣೆ ದೊರೆಯಬೇಕು. ಧರ್ಮ ಗುರುಗಳಾದ ನಾವು ಸರ್ವಾಧ್ಯಕ್ಷ ಸ್ಥಾನ ಬಯಸುವುದಿಲ್ಲ’ ಎಂದು ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

‘ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಗೆ ನಾಡಿನ ಹಿರಿಯ ಸಾಹಿತಿಗಳನ್ನು ಪರಿಗಣಿಸಲಿ’ ಎಂದು ಮಾಧ್ಯಮದವರಿಗೆ ಶುಕ್ರವಾರ ಹೇಳಿದ್ದಾರೆ.

ಅಭಿನವಕುಮಾರ ಚನ್ನಬಸವ ಶ್ರೀ ಲಿಂಗೈಕ್ಯ



ಚನ್ನಬಸವ ಶ್ರೀ

ಸವದತ್ತಿ (ಬೆಳಗಾವಿ ಜಿಲ್ಲೆ)/ ಜಮಖಂಡಿ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಓಲೇಮಠದ ಅಭಿನವಕುಮಾರ ಚನ್ನಬಸವ ಸ್ವಾಮೀಜಿ (62) ಗುರುವಾರ ರಾತ್ರಿ ಬೆಳಗಾವಿ ಜಿಲ್ಲೆ ಸವದತ್ತಿಯ ಗೊರವನಕೊಳ್ಳ ಗ್ರಾಮದ ಶಾಖಾ ಮಠದಲ್ಲಿ ಹೃದಯಾಘಾತದಿಂದ ಲಿಂಗೈಕ್ಯರಾದರು. ಪಾರ್ಥಿವ ಶರೀರವನ್ನು ಶುಕ್ರವಾರ ಸವದತ್ತಿ ಪಟ್ಟಣದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಯಿತು. ನಂತರ ಜಮಖಂಡಿಯ ಓಲೇಮಠದಲ್ಲಿ ಧಾರ್ಮಿಕ ವಿಧಿ ವಿಧಾನದಂತೆ ಅಂತ್ಯಕ್ರಿಯೆ ನೆರವೇರಿತು.

‘ಸೀ ಪ್ಲೇನ್’ ಹಾರಾಟ ಮುಂದೂಡಿಕೆ

ಮಂಡ್ಯ: ಕೇಂದ್ರ ವಿಮಾನಯಾನ ಸಚಿವಾಲಯದ ನಿರ್ದೇಶನದಂತೆ ರಾಜ್ಯ ಸರ್ಕಾರವು ಕೆ.ಆರ್.ಎಸ್. ಅಣೆಕಟ್ಟೆಯ ಹಿನ್ನೀರಿನ ವೇಣುಗೋಪಾಲಸ್ವಾಮಿ ದೇವಸ್ಥಾನದ ಹತ್ತಿರ ನ.10ರಂದು ಆಯೋಜಿಸಿದ್ದ ಜಲ ವಿಮಾನ (ಸೀಪ್ಲೇನ್) ಪ್ರಾಯೋಗಿಕ ಹಾರಾಟವನ್ನು ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

98 ಅಧಿಕಾರಿಗಳಿಗೆ ನೋಟಿಸ್

ಶಾಲಾ ಮಕ್ಕಳಿಗೆ ಮೊಟ್ಟೆ ವಿತರಣೆಯಲ್ಲಿ ಲೋಪ; ಶಿಕ್ಷಣ ಇಲಾಖೆಯಿಂದ ಕ್ರಮ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಶಾಲಾ ಮಕ್ಕಳಿಗೆ ವಾರಕ್ಕೆ ಆರು ದಿನ ಬೇಯಿಸಿದ ಮೊಟ್ಟೆಯನ್ನು ಸಮರ್ಪಕವಾಗಿ ವಿತರಿಸುವಲ್ಲಿ ವಿಫಲರಾದ 98 ಅಧಿಕಾರಿಗಳಿಗೆ ಶಾಲಾ ಶಿಕ್ಷಣ ಇಲಾಖೆ ನೋಟಿಸ್ ನೀಡಿದೆ.

ಪಿ.ಎಂ. ಪೋಷಣ್ ಯೋಜನೆ ಅಡಿ ರಾಜ್ಯ ಸರ್ಕಾರ ಎರಡು ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಿಂದ ನಾಲ್ಕು ಸೇರಿ ವಾರಕ್ಕೆ ಆರು ಮೊಟ್ಟೆಗಳನ್ನು 48 ಸಾವಿರಕ್ಕೂ ಹೆಚ್ಚು ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ನೀಡಲಾಗುತ್ತಿದೆ. ಮೊಟ್ಟೆ ತಿನ್ನುವುದಿಲ್ಲ ಎಂದು ಬೇಡಿಕೆ ಸಲ್ಲಿಸುವ ಮಕ್ಕಳಿಗೆ ನಿಯಮದಂತೆ ಚಿಕ್ಕಿ, ಬಾಳೆಹಣ್ಣು ವಿತರಿಸಲಾಗುತ್ತಿದೆ.

ಅಜೀಂ ಪ್ರೇಮ್‌ಜಿ ಫೌಂಡೇಷನ್ ಮೊಟ್ಟೆ ವಿತರಣೆಗೆ ಕೈಜೋಡಿಸಿದ್ದು, ₹1,500 ಕೋಟಿ ನೆರವು ನೀಡಿದೆ. ಸೆ.25ರಿಂದ ಆರಂಭವಾದ ಮೊಟ್ಟೆ ವಿತರಣೆಯ ಅನುಷ್ಠಾನ ಕ್ರಮ ಕುರಿತು ಫೌಂಡೇಷನ್ ಈಚೆಗೆ ಮೌಲ್ಯಮಾಪನ ನಡೆಸಿತ್ತು. ನಾಲ್ಕು ವಿಭಾಗಗಳ 357 ಶಾಲೆಗಳಿಗೆ ಭೇಟಿ ನೀಡಿದಾಗ 66 ಶಾಲೆಗಳು ಈವರೆಗೂ ಮೊಟ್ಟೆ ವಿತರಿಸದಿರುವುದನ್ನು ಪತ್ತೆ ಮಾಡಿತ್ತು.

ಫೌಂಡೇಷನ್ ಪ್ರತಿನಿಧಿಗಳು ಸಿದ್ಧಪಡಿಸಿದ ಅಧ್ಯಯನ ವರದಿ ಆಧರಿಸಿ ಅನುಷ್ಠಾನದ ಹೊಣೆ ಸಮರ್ಪಕವಾಗಿ ನಿಭಾಯಿಸದ 50 ಬಿಇಒಗಳು ಹಾಗೂ ಪಿ.ಎಂ. ಪೋಷಣ್ ಅಭಿಯಾನದ 48 ಸಹಾಯಕ ನಿರ್ದೇಶಕರೂ ಸೇರಿ 98 ಅಧಿಕಾರಿಗಳಿಗೆ ನೋಟಿಸ್ ನೀಡಲಾಗಿದೆ.

‘ಮಕ್ಕಳಲ್ಲಿ ಅಪೌಷ್ಟಿಕತೆ ನಿವಾರಿಸಲು, ದೈಹಿಕ ಆರೋಗ್ಯದ ಬೆಳವಣಿಗೆಗೆ ಉತ್ತೇಜಿಸಲು ಮಧ್ಯಾಹ್ನದ ಬಿಸಿಯೂಟ ಯೋಜನೆ ಆರಂಭಿಸಲಾಗಿದೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ ನೆರವು ನೀಡುತ್ತಿದೆ. ಇಂತಹ ಮಹತ್ವಕಾಂಕ್ಷಿ ಯೋಜನೆ ಯಶಸ್ಸಿಗೆ ಶ್ರಮಿಸಬೇಕಾದ ಅಧಿಕಾರಿಗಳಿಂದ ನಿರ್ಲಕ್ಷ್ಯ ಸಹಿಸಲು ಸಾಧ್ಯವಿಲ್ಲ. ಅಂಥವರ ವಿರುದ್ಧ ಶಿಸ್ತುಕ್ರಮ ಅನಿವಾರ್ಯ’ ಎಂದು ಇಲಾಖೆ ಆಯುಕ್ತ ಕೆ.ವಿ.ತ್ರಿಲೋಕಚಂದ್ರ ಅವರು ಹೇಳಿದ್ದಾರೆ.

ಮಕ್ಕಳು ಕೇಳಿದರೂ ಮೊಟ್ಟೆ ಕೊಡುತ್ತಿಲ್ಲ!

ಕೆಲ ಶಾಲೆಗಳಲ್ಲಿ ಬೇಯಿಸಿದ ಮೊಟ್ಟೆಗೆ ಮಕ್ಕಳು ಬೇಡಿಕೆ ಸಲ್ಲಿಸಿದ್ದರೂ, ಅಂತಹ ಮಕ್ಕಳಿಗೆ ಮೊಟ್ಟೆ ನೀಡದೇ ಚಿಕ್ಕಿ, ಬಾಳೆ ಹಣ್ಣು ವಿತರಿಸಲಾಗುತ್ತಿದೆ ಎಂದು ಅಜೀಂ ಪ್ರೇಮ್‌ಜಿ ಫೌಂಡೇಷನ್ ಪ್ರತಿನಿಧಿಗಳು ಸಿದ್ಧಪಡಿಸಿದ ಮೌಲ್ಯಮಾಪನ ಅಧ್ಯಯನ ವರದಿ ಹೇಳಿದೆ.

ಚಿಕ್ಕಿ, ಬಾಳೆಹಣ್ಣನ್ನೇ ಹೆಚ್ಚು ಸೇವಿಸುವ ಮಕ್ಕಳಿರುವ ಕೆಲ ಶಾಲೆಗಳಲ್ಲಿ ಶೇ 30ಷ್ಟು ಮಕ್ಕಳು ಚಿಕ್ಕಿ, ಬಾಳೆ ಹಣ್ಣಿಗೆ ಬೇಡಿಕೆ ಸಲ್ಲಿಸಿದ್ದಾರೆ. ಆದರೂ, ಅವರಿಗೆ ಮೊಟ್ಟೆ ಸಿಗುತ್ತಿಲ್ಲ. ಅನಿವಾರ್ಯವಾಗಿ ಅವರು ಶಿಕ್ಷಕರು ನೀಡಿದ ಚಿಕ್ಕಿ, ಬಾಳೆಹಣ್ಣನ್ನೇ ಸೇವಿಸುತ್ತಿದ್ದಾರೆ.

ನಿಯಮದಂತೆ ಚಿಕ್ಕಿ ಪ್ರಮಾಣ ಪ್ರತಿ ವಿದ್ಯಾರ್ಥಿಗೆ 35 ಗ್ರಾಂನಿಂದ 40 ಗ್ರಾಂ ಇರಬೇಕು. ಬಹುತೇಕ ಶಾಲೆಗಳಲ್ಲಿ ಇದು 30 ಗ್ರಾಂಗಿಂತ ಕಡಿಮೆ ಇದೆ. ಮೊಟ್ಟೆ ತಿನ್ನದ ಮಕ್ಕಳಿಗೆ ಮೊದಲ ಆದ್ಯತೆಯಾಗಿ ಬಾಳೆಹಣ್ಣು ನೀಡಬೇಕು.
ಆದರೂ, ಕೇವಲ ಚಿಕ್ಕಿ ನೀಡಲಾಗುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ಹಾವೇರಿ: ರೈತ ಆತ್ಮಹತ್ಯೆ ಬಗ್ಗೆ ಸುಳ್ಳು ಸುದ್ದಿ ಹರಡಿದ ಆರೋಪ

ತೇಜಸ್ವಿ ಸೂರ್ಯ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ರೈತರೊಬ್ಬರ ಆತ್ಮಹತ್ಯೆ ವಿಷಯದಲ್ಲಿ ಸುಳ್ಳು ಸುದ್ದಿ ಹರಿಬಿಟ್ಟಿದ್ದ ಆರೋಪದಡಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹಾಗೂ ಇಬ್ಬರು ಸಂಪಾದಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂಬುದು ನಮೂದಾಗಿದ್ದರಿಂದ ರೈತ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂಬುದಾಗಿ ‘ಕನ್ನಡ ದುನಿಯಾ’ ಹಾಗೂ ‘ಕನ್ನಡ ನ್ಯೂಸ್ ಡಿಜಿಟಲ್’ ಮಾಧ್ಯಮಗಳ ಇ-ಪೇಪರ್‌ನಲ್ಲಿ ಸುಳ್ಳು ಸುದ್ದಿ ಪ್ರಕಟಿಸಲಾಗಿತ್ತು. ಈ ಬಗ್ಗೆ ಪರಿಶೀಲಿಸಿ ಹಾವೇರಿ ಸೆನ್ (ಸೈಬರ್, ಆರ್ಥಿಕ ಹಾಗೂ ಮಾದಕ ದ್ರವ್ಯ ನಿಯಂತ್ರಣ) ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಎಸ್ಪಿ ಅಂಶುಕುಮಾರ ’ಪ್ರಜಾವಾಣಿ’ಗೆ ತಿಳಿಸಿದರು..

'4 ಎಕರೆ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂಬುದು ನಮೂದು ಆಗಿದ್ದರಿಂದ ಮನನೊಂದು ಹಾವೇರಿ ಜಿಲ್ಲೆಯ ಹರನಗಿ ಗ್ರಾಮದ ರೈತ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಕ್ಫ್ ನೋಟಿಸ್ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ' ಎಂಬುದಾಗಿ ಸುಳ್ಳು ಸುದ್ದಿ ಹರಿಬಿಡಲಾಗಿತ್ತು. ಇದೇ ಸುದ್ದಿಯನ್ನು ತೇಜಸ್ವಿಸೂರ್ಯ ಅವರು 'ಎಕ್ಸ್'ನಲ್ಲಿ ಟ್ಯಾಗ್ ಮಾಡಿದ್ದರು' ಎಂದು ಅವರು ತಿಳಿಸಿದರು.

'ಗುಂಪುಗಳ ನಡುವೆ ದ್ವೇಷ ಬಿತ್ತಲು ಸುಳ್ಳು ಸುದ್ದಿ (ಬಿಎನ್‌ಎಸ್ 353 (2) ಹರಿಬಿಟ್ಟ ಆರೋಪದಡಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ’ ಎಂದರು. ‘ಪ್ರಕರಣದ ಬಗ್ಗೆ ಪರಿಶೀಲಿಸಿದಾಗ, ರುದ್ರಪ್ಪ ಅವರು 2022ರ ಜನವರಿ 6ರಂದು ಆತ್ಮಹತ್ಯೆ ಮಾಡಿಕೊಂಡಿದ್ದ ಸಂಗತಿ ಗೊತ್ತಾಗಿತ್ತು. ಬ್ಯಾಂಕ್ ಹಾಗೂ ಇತರೆಡೆ ಮಾಡಿದ್ದ ₹7 ಲಕ್ಷ ಸಾಲ ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿದ್ದ ಬಗ್ಗೆ ಸಂಬಂಧಿಕರು ದೂರು ನೀಡಿದ್ದರು. ಸರ್ಕಾರದಿಂದಲೂ ರೈತನ ಕುಟುಂಬಕ್ಕೆ ₹5 ಲಕ್ಷ ಪರಿಹಾರವೂ ಸಿಕ್ಕಿತ್ತು.ಜಮೀನಿನ ಪಹಣಿ ಪರಿಶೀಲಿಸಿದಾಗ, ಯಾವುದೇ ವಕ್ಫ್ ಆಸ್ತಿ ಎಂಬುದು ನಮೂದಾಗಿರಲಿಲ್ಲ. ಹೀಗಾಗಿ, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಸುದ್ದಿ ಸುಳ್ಳು ಎಂಬುದು ಖಾತ್ರಿಯಾಯಿತು’ ಎಂದು ತಿಳಿಸಿದರು.

‘ಕೋರ್ಟ್‌ಗಳು ಛೀಮಾರಿ ಹಾಕಿದರೂ ಬುದ್ಧಿ ಬಂದಿಲ್ಲ’



ತೇಜಸ್ವಿ ಸೂರ್ಯ

‘ಚಕ್ರವರ್ತಿ ಸೂಲಿಬೆಲೆ ಸೇರಿ ಎಲ್ಲರ ಮೇಲೂ ರಾಜ್ಯ ಸರ್ಕಾರವು ಹುಡುಕಿ ಹುಡುಕಿ ಪ್ರಕರಣ ದಾಖಲಿಸುತ್ತಿದೆ. ಇಂಥ ಪ್ರಕರಣಗಳಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದರೂ ಸರ್ಕಾರಕ್ಕೆ ಬುದ್ಧಿ ಬಂದಿಲ್ಲ’ ಎಂದು ಸಂಸದ ತೇಜಸ್ವಿ ಸೂರ್ಯ ಕಿಡಿಕಾರಿದರು.

ತಮ್ಮ ವಿರುದ್ಧ ದಾಖಲಾದ ಪ್ರಕರಣದ ಬಗ್ಗೆ ಶಿಗ್ಗಾವಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಜವಾಬ್ದಾರಿಯುತ ರಾಜಕಾರಣ ಮಾಡುವವನು ನಾನು. ಸುಳ್ಳು ಹೇಳಿ ಮಾಡಲ್ಲ’ ಎಂದರು.

‘ಕನ್ನಡ ದುನಿಯಾ ಆನ್‌ಲೈನ್ ಸಂಸ್ಥೆಯವರು ಸುದ್ದಿ ಪ್ರಕಟಿಸಿದ್ದರು. ನಾನು ಆ ಸುದ್ದಿಯನ್ನು ‘ಎಕ್ಸ್’ನಲ್ಲಿ ರೀ-ಟ್ವೀಟ್ ಮಾಡಿದ್ದೆ. ಇದು ಗಂಭೀರ ಸಮಸ್ಯೆ. ವಕ್ಫ್ ಯಾವುದೇ ಆಧಾರ ಇಲ್ಲದೇ ರೈತರ ಜಮೀನು ಕಬಳಿಸುತ್ತಿದ್ದರೆ, ರೈತರು ಎಲ್ಲಿಗೆ ಹೋಗಬೇಕು. ಈ ರೀತಿ ಹಾವೇರಿಯಲ್ಲಿ ಆತ್ಮಹತ್ಯೆ ಆಗಿರುವುದು ಗಮನಕ್ಕೆ ಬಂದಿದೆ. ಸರ್ಕಾರ ಈಗಲಾದರೂ ಎಚ್ಚೆತ್ತುಕೊಳ್ಳಬೇಕೆಂದು ಬರೆದಿದ್ದೆ. ನನ್ನ ರೀ-ಟ್ವೀಟ್‌ಗೆ ಪ್ರತಿಕ್ರಿಯಿಸಿದ್ದ ಹಾವೇರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಖಾತೆದಾರರು, ಈ ರೀತಿ ಆಗಿಲ್ಲವೆಂದು ಹೇಳಿದ್ದರು’ ಎಂದು ಅವರು ವಿವರಿಸಿದರು.

ಮದ್ಯ ಮಾರಾಟ ಬಂದ್ ಕರೆ ವಾಪಸ್ ಇಲ್ಲ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನವೆಂಬರ್ 20ರಂದು ಕರೆ ನೀಡಿರುವ ಮದ್ಯ ಮಾರಾಟ ಬಂದ್‌ಗೆ ಬೆಂಬಲ ಇಲ್ಲವೆಂದು ಹೇಳಿಕೆ ನೀಡಿರುವ ಕರ್ನಾಟಕ ವೈನ್ ಮರ್ಚಂಟ್ಸ್‌ನ ಹೊನ್ನಗಿರಿ ಗೌಡ ಮತ್ತು ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚಂಟ್ಸ್ ಸೊಸೈಟಿ ಅಧ್ಯಕ್ಷ ಎಸ್. ಚಂದ್ರಶೇಖರ್ ಅವರು ನಮ್ಮ ಒಕ್ಕೂಟದ ಸದಸ್ಯರಲ್ಲ’ ಎಂದು ಫೆಡರೇಶನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಶನ್ ಕರ್ನಾಟಕ ಸ್ಪಷ್ಟಪಡಿಸಿದೆ.

ಈ ಕುರಿತು ಪತ್ರಿಕಾ ಹೇಳಿಕೆಯಲ್ಲಿ ಅಸೋಸಿಯೇಶನ್ ಪ್ರಧಾನ ಕಾರ್ಯದರ್ಶಿ ಬಿ.ಗೋವಿಂದರಾಜ್ ಹೆಗ್ಡೆ, ‘ಬೇಡಿಕೆ ಮತ್ತು ಸಮಸ್ಯೆಗಳ ಸಂಬಂಧ ಮೂರು ಸಾವಿರಕ್ಕೂ ಹೆಚ್ಚು ಸನ್ನದುದಾರರ ಸಭೆಯಲ್ಲಿ ಮದ್ಯ ಮಾರಾಟ ಬಂದ್ ತೀರ್ಮಾನ ಕೈಗೊಂಡು ಸರ್ಕಾರಕ್ಕೆ ಮಾಹಿತಿ ನೀಡಲಾಗಿದೆ. ಹೊನ್ನಗಿರಿ ಗೌಡ ಮತ್ತು ಎಸ್.ಚಂದ್ರಶೇಖರ್ ಅವರು ನಮ್ಮ ಹೋರಾಟ ಹಾಗೂ ತೀರ್ಮಾನಗಳಲ್ಲಿ ಭಾಗವಹಿಸಿದವರಲ್ಲ’ ಎಂದು ತಿಳಿಸಿದ್ದಾರೆ.

‘ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದಿದ್ದ ಸಭೆಯಲ್ಲಿ ಒಕ್ಕೂಟದ ಪದಾಧಿಕಾರಿಗಳೊಂದಿಗೆ ಸನ್ನದುದಾರರ ಬೇಡಿಕೆ ಮತ್ತು ಸಮಸ್ಯೆಗಳ ಕುರಿತು ವಿಸ್ತೃತ ಚರ್ಚೆ ನಡೆದಿದೆ. ಸಭೆಯಲ್ಲಿ ಅಬಕಾರಿ ಆಯುಕ್ತರು, ಕಾರ್ಯದರ್ಶಿಗಳು ಭಾಗವಹಿಸಿದ್ದರು. ಆದರೆ, ಬಂದ್ ಕರೆ ವಾಪಸ್ ಪಡೆದಿಲ್ಲ’ ಎಂದು ಹೇಳಿದ್ದಾರೆ.

ಅಬಕಾರಿ ಸಚಿವರ ಪರವಾಗಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿದ್ದ ಇಬ್ಬರು ಸನ್ನದುದಾರರು ಶುಕ್ರವಾರ ಮೈಸೂರಿನಲ್ಲಿ ಅಬಕಾರಿ ಸಚಿವ ಆರ್. ಬಿ.ತಿಮ್ಮಾಪುರ ಜೊತೆಗೆ ಹೋಟೆಲ್‌ನಲ್ಲಿ ಉಪಾಹಾರ ಸೇವಿಸುತ್ತಿರುವ ಫೋಟೊವನ್ನೂ ಅವರು ಬಿಡುಗಡೆ ಮಾಡಿದ್ದಾರೆ.



ರಾಜ್ಯ ವಿಶ್ವಕರ್ಮ ಮಹಾಒಕ್ಕೂಟದ ಮುಖಂಡರ ಸಭೆಯಲ್ಲಿ ಒಕ್ಕೂಟದ ಲಾಂಛನ ಅನಾವರಣಗೊಳಿಸಲಾಯಿತು

ವಿಶ್ವಕರ್ಮ ಮಹಾಒಕ್ಕೂಟ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚವೃತ್ತಿಗಳನ್ನು ಮಾಡುತ್ತಿರುವ ವಿಶ್ವಕರ್ಮ ಸಮುದಾಯವನ್ನು ಒಂದೇ ವೇದಿಕೆಯಡಿ ತಂದು ಸಂಘಟಿಸಲು ರಾಜ್ಯವಿಶ್ವಕರ್ಮಮಹಾಒಕ್ಕೂಟವನ್ನುಅಸ್ತಿತ್ವಕ್ಕೆ ತರಲಾಗಿದೆ. ನಾಮಫಲಕ ಮತ್ತು ಲಾಂಛನವನ್ನು ಇಲ್ಲಿ ಅನಾವರಣಗೊಳಿಸಲಾಯಿತು.


ಒಕ್ಕೂಟದ ರಾಜ್ಯ ಅಧ್ಯಕ್ಷರಾಗಿ ವಿಜಯಕುಮಾರ್ ಪತ್ತಾರ್, ಗೌರವಾಧ್ಯಕ್ಷರಾಗಿ ಸರ್ವೇಶಾಚಾರ್, ಪ್ರಧಾನ ಸಂಚಾಲಕರಾಗಿ ಹೊಸಕೋಟೆ ಈಶ್ವರಾಚಾರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ರಾಜ್ಯ ಅಂಗವಿಕಲರ ಕಾಯ್ದೆ ಮಾಜಿ ಆಯುಕ್ತ ಕೆ.ರಾಜಣ್ಣ ಲಾಂಛನ ಬಿಡುಗಡೆಗೊಳಿಸಿದರು.

‘ವಿವಿಧ ಸಂಘಟನೆಗಳಡಿ ಹಂಚಿ ಹೋಗಿರುವ ಸಮುದಾಯವನ್ನು ಒಂದು ತೆಕ್ಕೆಗೆ ತಂದು ರಚನಾತ್ಮಕ ಹೋರಾಟ ನಡೆಸಲು ಒಕ್ಕೂಟ ಅಸ್ತಿತ್ವಕ್ಕೆ ಬಂದಿದೆ. ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟಕ್ಕೆ ಸಂಘಟನೆಯನ್ನು ವಿಸ್ತರಿಸಲಾಗುವುದು’ ನೂತನ ಅಧ್ಯಕ್ಷ ವಿಜಯಕುಮಾರ್ ಪತ್ತಾರ್ ಹೇಳಿದರು.ಕೆ.ರಾಜಣ್ಣ, ಗಾಯಕ ರವೀಂದ್ರ ಯಾವಗಲ್, ರಥಶಿಲ್ಪಿ ಬಸವರಾಜ್ ಅವರನ್ನು ಸನ್ಮಾನಿಸಲಾಯಿತು.

ಮುಖಂಡರಾದ ಮೂಡುಬಿದಿರೆ ಸೀತಾರಾಮ ಆಚಾರ್ಯ, ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಸಿ.ಪಿ. ಮಾಯಾಚಾರ್ ಹಾಗೂ ದಕ್ಷಿಣ ಕನ್ನಡ ವಿಶ್ವಕರ್ಮ ಸಹಕಾರ ಬ್ಯಾಂಕ್ ಅಧ್ಯಕ್ಷ ಹರೀಶ್ ಆಚಾರ್, ದೇವೇಂದ್ರ ಪತ್ತಾರ್, ಕೆ.ಡಿ. ಬಡಿಗೇರ, ಹಣಮಂತಪ್ಪ ಹೊಲಗೇರಿ, ನಾಗೇಂದ್ರಾಚಾರ್, ಸತೀಶ್ ಆಚಾರ್, ಈರಣ್ಣ ಬಡಿಗೇರ, ಅಶೋಕ, ಶಿವಪ್ರಸಾದ್, ಕೆ.ಎಂ. ಮಂಜುನಾಥ್, ಶೇಖರ್, ಕಾಶೀನಾಥ್ ಇದ್ದರು.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ನಿಮಗೆ ಪೊಲೀಸರ ನೋಟಿಸ್ ಬಂತೆ?

ಅಂಜಲಿ ರಾಮಣ್ಣ

ಎರಡೂ ಕುಟುಂಬಗಳ ಒಪ್ಪಿಗೆ ಇಲ್ಲದೆ ಪ್ರೀತಿಸಿ ಮದುವೆಯಾಗಿದ್ದ ಪೂಜಾಳಿಗೆ ವರ್ಷದಲ್ಲೇ ತಿಳಿಯಿತು ಗಂಡ ಮಹಾನ್ ಸೋಮಾರಿಯೆಂದು. ತನ್ನ ವಿದ್ಯೆಯೂ ಎರಡನೆಯ ಪಿಯುಸಿಯಷ್ಟೇ. ಯಾರ ಬೆಂಬಲವೂ ಇಲ್ಲದೆ ಎಲ್ಲಿಂದಲೋ ಸಾಲ ತಂದು ಬಾಡಿಗೆ ಮನೆಯ ಕೋಣೆಯಲ್ಲಿಯೇ ಬ್ಯೂಟಿ ಪಾರ್ಲರ್ ತೆರೆದುಕೊಂಡು ಸಂಸಾರ ಸಾಕುತ್ತಿದ್ದಳು. ಇನ್ನು ಮೂರು ದಿನದಲ್ಲಿ ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಬರಬೇಕು ಎನ್ನುವ ಫೋನ್ ಕರೆ ಬಂದಾಗ, ವಿವರ ಕೇಳಿದರೂ ಸಿಗದಿದ್ದಾಗ ಕಂಗಾಲಾಗಿ ಹೋದಳು.

ಶ್ರೀಮತಿ ಮನೆಯಲ್ಲಿಯೇ ಸೀರೆ ವ್ಯಾಪಾರ ಮಾಡುತ್ತಿದ್ದಳು. ಸಗಟು ದರದಲ್ಲಿ ಸೀರೆ ಪೂರೈಕೆ ಮಾಡುತ್ತಿದ್ದ ಮಾರಾಟಗಾರನಿಗೂ ಈಕೆಗೂ ಹಣಕಾಸಿನ ವಿಷಯಕ್ಕೆ ವಾಗ್ವಾದವಾಗಿತ್ತು. ಅದಾದೊಂದೇ ವಾರದಲ್ಲಿ ಆತನ ಊರಿನ ಪೊಲೀಸ್ ಠಾಣೆಯಿಂದ 'ನಿಮ್ಮ ಮೇಲೆ ಎಫ್‌ಐಆರ್ ಆಗಿದೆ ನೀವು ಠಾಣೆಗೆ ಹಾಜರಾಗಬೇಕು' ಎಂದಷ್ಟೇ ಇದ್ದ ಪತ್ರವೊಂದು ಕೈಸೇರಿದಾಗ ಗಂಡ, ಅತ್ತೆ, ಮಾವ ಎಲ್ಲರೂ ಇವಳನ್ನೇ ನಿಂದಿಸಿ ಮತ್ತಷ್ಟು ಗಾಬರಿ, ಆತಂಕಕ್ಕೆ ದೂಡಿದರು.

ಹೀಗೆ ಅವರುಗಳು ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿರಬಹುದು, ಕಷ್ಟದಲ್ಲಿ ಕೈಸಾಲ ತೆಗೆದುಕೊಂಡಿರಬಹುದು, ಯಾರದ್ದೋ ಕಷ್ಟಕ್ಕೆ ಜಾಮೀನು ನಿಂತಿರಬಹುದು, ಮತ್ತ್ಯಾರದ್ದೋ ಬ್ಯಾಂಕ್ ಸಾಲಕ್ಕೆ ಶ್ಯೂರಿಟಿ ಹಾಕಿರಬಹುದು, ಅವರಿವರ ಜಗಳ ಬಿಡಿಸಲು, ರಾಜಿ ನ್ಯಾಯ ಮಾಡಲು ಹೋಗಿದ್ದಿರಬಹುದು, ಆಸ್ತಿ ಖರೀದಿಯ ವಿಷಯವೇ ಇರಬಹುದು, ಕುಟುಂಬದ ಆಸ್ತಿ ಪಾಲುದಾರಿಕೆಯ ವಿಷಯವೂ ಆಗಬಹುದು, ಕಾರಣಾಂತರಗಳಿಂದ ಕೊಟ್ಟ ಚೆಕ್ ಬೌನ್ಸ್ ಆಗಿರುವಾಗ, ಕೊಟ್ಟ ಸಾಲವನ್ನು ಹಿಂದಿರುಗಿ ಕೇಳಿರುವಾಗ, ಸಾಲ ತೀರಿಸಲು ಆಗದೆಯಿದ್ದಾಗ, ಉದ್ಯೋಗಸ್ಥ ಸ್ಥಳದಲ್ಲಿಯೋ ಮನೆ ಮಾಲೀಕರ ಜೊತೆಯಲ್ಲಿಯೋ ನಡೆದ ಜಗಳ ಇರಬಹುದು, ಗಾಡಿ ಓಡಿಸುತ್ತಿರುವಾಗ ರಸ್ತೆಯಲ್ಲಿ ಅಡ್ಡ ಬಂದವರ ಜೊತೆಗಾದ ವಾದದ ಕಾರಣವೇ ಇರಬಹುದು, ಯಾವುದೇ ವಿಷಯದಲ್ಲಿ ಒಬ್ಬ ವ್ಯಕ್ತಿಯ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾದಾಗ ಆ ವ್ಯಕ್ತಿಯನ್ನು ಆರೋಪಿ ಎಂದು ಪರಿಗಣಿಸಿ ಅಥವಾ ಪರಿಗಣಿಸುವ ಮುನ್ನ ಅಥವಾ ಯಾವುದೇ ಪ್ರಕರಣದಲ್ಲಿ ಆ ವ್ಯಕ್ತಿ ಸಾಕ್ಷಿ ಆಗಬಹುದು ಎಂದು ಪೋಲೀಸರಿಗೆ ಮನವರಿಕೆ ಆದಾಗ ಅಂತಹ ವ್ಯಕ್ತಿಯನ್ನು ವಿಚಾರಣೆ ನಡೆಸುವ, ವಿವರ ಪಡೆದುಕೊಳ್ಳುವ ಅಧಿಕಾರವನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಇದರ ಸೆಕ್ಷನ್ 35ರ ಅಡಿಯಲ್ಲಿ ಪೊಲೀಸರಿಗೆ ನೀಡಲಾಗಿದೆ.

ಹಾಗೆ ಪ್ರಕರಣದಲ್ಲಿ ಯಾವುದೇ ಕಾರಣಕ್ಕೆ ಅವಶ್ಯಕ ಇರುವ ವ್ಯಕ್ತಿಯನ್ನು ಒಂದು ಫೋನ್ ಕರೆಯ ಮೂಲಕ, ವಾಟ್ಸ್ ಆ್ಯಪ್ ಸಂದೇಶ, ಈಮೇಲ್ ಮೂಲಕ ಅಥವಾ ಪತ್ರ ಮುಖೇನ ಠಾಣೆಗೆ ವಿಚಾರಣೆಗಾಗಿ ಬರಬೇಕು ಎಂದು ಹೇಳುವಾಗ ಸಂಪೂರ್ಣ ವಿವರಣೆ ನೀಡದಿದ್ದರೆ ಕರೆ ಸ್ವೀಕರಿಸಿದ ವ್ಯಕ್ತಿಯು ಠಾಣೆಗೆ ಹೋಗುವುದನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಬಹುದು.

> ಪೊಲೀಸ್ ಎಂದರೆ ಹೆದರುವ ಕಾಲ ಇನ್ನೂ ಇರುವಾಗ ಅಪೂರ್ಣ ಮಾಹಿತಿಯ ಸಂವಹನ ಪೊಲೀಸರಿಂದ ಬಂದಾಗ ಆಕೆಯ ಮನೆಯವರೇ ಅವಳ ಮೇಲೆ ಅನುಮಾನ ಪಟ್ಟು ನಿಂದಿಸುವ ಸಾಧ್ಯತೆಯೇ ಹೆಚ್ಚು.

ವಿದ್ಯಾವಂತ ಹೆಂಗಸರೂ ಕೂಡ ಪೊಲೀಸ್ ಎಂದರೆ ಹೆದರುವ ಕಾಲ ಇನ್ನೂ ಇರುವಾಗ ಇಂತಹ ಅಪೂರ್ಣ ಮಾಹಿತಿಯ ಸಂವಹನ ಪೊಲೀಸರಿಂದ ಬಂದಾಗ ಆಕೆಯ ಮನೆಯವರೇ ಅವಳ ಮೇಲೆ ಅನುಮಾನ ಪಟ್ಟು ನಿಂದಿಸುವ ಸಾಧ್ಯತೆಯೇ ಹೆಚ್ಚು. ಇನ್ನು ಮುಂದೆ ಇಂತಹ ಅರ್ಧಂಬರ್ಧ ಮಾಹಿತಿ ಇರುವ ಪೊಲೀಸ್ ಪತ್ರ, ಕರೆ ಬಂದರೆ ಹೆದರುವ ಅವಶ್ಯಕತೆ ಇಲ್ಲ. ರಿಟ್ ದಾವೆ 15125/2024 ಇದರ ವಿಚಾರಣೆಯ ಸಂದರ್ಭದಲ್ಲಿ 19 ಜುಲೈ 2024ರಂದು ಕರ್ನಾಟಕ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳಾದ ಎಂ.ನಾಗಪ್ರಸನ್ನ ಅವರು ನೀಡಿರುವ ಆದೇಶದನ್ವಯ ಇನ್ನು ಮುಂದೆ ಯಾವುದೇ ಮಾಧ್ಯಮದ ಮೂಲಕ ಪೊಲೀಸರು ವ್ಯಕ್ತಿಯನ್ನು ವಿಚಾರಣೆಗೆ ಕರೆಯುವಾಗ ಯಾವ ಕಾರಣಕ್ಕಾಗಿ, ಯಾವ ಆರೋಪದ ಮೇರೆಗೆ ಅಥವಾ ಸಾಕ್ಷಿದಾರರಾಗಿ ಕರೆಯಲಾಗುತ್ತಿದೆ ಮತ್ತು ಆ ಘಟನೆ ಎಂದು ಎಲ್ಲಿ ನಡೆದಿದೆ, ದೂರುದಾರರು ಯಾರು, ಎಫ್‌ಐಆರ್ ಸಂಖ್ಯೆ ಮತ್ತು ದಿನಾಂಕ ಯಾವುದು, ಯಾವ ವ್ಯಾಪ್ತಿ ಪ್ರದೇಶದ ಠಾಣೆಯಲ್ಲಿ ದಾಖಲಾಗಿದೆ ಅದರ ವಿಳಾಸ ಏನು ಎನ್ನುವ ವಿವರಗಳನ್ನು ವ್ಯಕ್ತಿಗೆ ಒದಗಿಸಿಕೊಡಬೇಕು. ಎಫ್‌ಐಆರ್ ಪ್ರತಿಯನ್ನೂ ನೀಡಬೇಕು.

'ಪೊಲೀಸ್ ಠಾಣೆಗೆ ಹೋಗುವುದು ಎಂದರೆ ಯಾವುದೇ ವ್ಯಕ್ತಿಗೆ ಸಂತೋಷಕೂಟದ ಸ್ಥಳಕ್ಕೆ ಹೋದಂತೆ ಅಲ್ಲ. ಎಲ್ಲಾ ವಿವರಗಳಿಲ್ಲದಿದ್ದರೆ ಆ ವ್ಯಕ್ತಿಯು ಪೊಲೀಸರ ಆದೇಶವನ್ನು ಪಾಲಿಸಬೇಕು ಎನ್ನುವಂತಿಲ್ಲ. ಹಾಗೆ ನಿರ್ಲಕ್ಷಿಸಿದರೆ ಅದು ಅಪರಾಧವಲ್ಲ' ಎಂದಿದ್ದಾರೆ ನ್ಯಾಯಾಧೀಶರು.

ಸ್ಪಷ್ಟವಾದ ವಿವರಗಳನ್ನು ಹೊಂದಿರುವಂಥ ನಮೂನೆಯನ್ನು ರಾಜ್ಯ ಸರ್ಕಾರವು ತುರ್ತಾಗಿ ಪೊಲೀಸ್ ವಿಭಾಗಕ್ಕೆ ದೊರಕಿಸಿಕೊಡಬೇಕು ಎಂದೂ ಆದೇಶಿಸಲಾಗಿದೆ. ವಿವರಗಳು ಇದ್ದಾಗ್ಯೂ ಅಂಥ ನೋಟಿಸ್ ಅನ್ನು ಕಡೆಗಣಿಸಿದರೆ ಪೊಲೀಸರು ಆ ವ್ಯಕ್ತಿಯನ್ನು ಬಂಧಿಸುವ ಸಾಧ್ಯತೆಯೂ ಇರುತ್ತದೆ.

ಇಷ್ಟೆಲ್ಲಾ ಮಾಹಿತಿ ಇರುವಾಗ ಮಹಿಳೆಯರು ಪೊಲೀಸರು ಎಂದರೆ ಅನವಶ್ಯಕವಾಗಿ ಹೆದರದೆ ಅವರಿಂದ ತಮಗೆ ಬೇಕಾದ ವಿವರಗಳನ್ನು ಪಡೆದು ಗೊಂದಲವನ್ನು ಬಗೆಹರಿಸಿಕೊಳ್ಳಬೇಕು. ಯಾವುದೇ ಪ್ರಕರಣವನ್ನು ಪರಿಹರಿಸಿಕೊಳ್ಳಲು ಮುಂದಾಗದಿದ್ದರೆ ಅದು ಎಂದೂ ನೆತ್ತಿಯ ಮೇಲಿನ ತೂಗುಗತ್ತಿಯಂತೆಯೇ ಸರಿ.

ಲೇಖಕಿ, ಮಹಿಳೆ ಮತ್ತು ಮಕ್ಕಳ ಹಕ್ಕುಗಳ ವಕೀಲರು



ಐದಾರು ವರ್ಷದ ಮಗುವಿಗೆ ನೂರಾರು ತಿನಿಸುಗಳು

ಅಮೂಲ್ಯ ಬಿ.ಕೆ.

ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿರುವ ಮಕ್ಕಳು ದೇಶದ ಸಂಪತ್ತು. ಸತ್ವಯುತ ಹಾಗೂ ಪೌಷ್ಟಿಕಯುಕ್ತ ಆಹಾರ ನಮ್ಮ ಮಕ್ಕಳಿಗೆ ಸಿಗುತ್ತಿದೆಯೇ? ಎಂಬುದರ ಬಗ್ಗೆ ಪೋಷಕರು ಆಗಾಗ್ಗೆ ಯೋಚಿಸಬೇಕು. ಮಕ್ಕಳು ಇಷ್ಟಪಡುತ್ತಾರೆ ಎನ್ನುವ ಕಾರಣಕ್ಕೆ ಜಂಕ್‌ಫುಡ್‌ಗಳನ್ನು ನೀಡಬಾರದು. ಇದು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಹಾಗಾದರೆ ಆರು ತಿಂಗಳ ಮಗುವಿನಿಂದ ಆರು ವರ್ಷದ ಮಕ್ಕಳ ಊಟದ ತಟ್ಟೆಯಲ್ಲಿ ಕಡ್ಡಾಯವಾಗಿ ಏನೆಲ್ಲ ಇರಬೇಕು? ಎಂಬುದಕ್ಕೆ ಇಲ್ಲಿದೆ ಸರಳ ಉಪಾಯ.

ಹುಟ್ಟಿದ ದಿನದಿಂದ ಆರು ತಿಂಗಳವರೆಗೆ ಶಿಶುವಿಗೆ ತಾಯಿಯ ಎದೆಹಾಲನ್ನಷ್ಟೇ ನೀಡಬೇಕು. ನಂತರದ ಪೋಷಣೆಗೆ ಕೇವಲ ಎದೆಹಾಲು ಸಾಕಾಗುವುದಿಲ್ಲ. ಶಿಶುವಿನ ಬೆಳವಣಿಗೆಗೆ ಮತ್ತು ಪೋಷಣೆಗೆ ಹೆಚ್ಚಿನ ಪೌಷ್ಟಿಕಾಂಶಗಳ ಅಗತ್ಯವಿರುತ್ತದೆ ಇದನ್ನು ತಾಯಿ ಹಾಲಿನ ಜತೆಗೆ ವೀನಿಂಗ್ ಫುಡ್‌ಗಳನ್ನು(weaning foods)ನೀಡಬೇಕಾಗುತ್ತದೆ. ಇದನ್ನು ಪೂರಕ ಆಹಾರವೆಂದೂ ಕರೆಯಲಾಗುತ್ತದೆ

ನಿಮ್ಮ ಮಗು ಬೆಳೆದಂತೆ, ಅದರ ಪೌಷ್ಟಿಕಾಂಶದ ಅಗತ್ಯಗಳು ಹೆಚ್ಚುತ್ತವೆ. ಮೊದಲ ಎರಡು ವರ್ಷಗಳಲ್ಲಿ, ಪ್ರತಿ ಊಟದ ಶೇ 75ರಷ್ಟು ಮಗುವಿನ ಮಿದುಳಿನ ಬೆಳವಣಿಗೆಗೆ ಹೋಗುತ್ತದೆ. ಆರು ತಿಂಗಳು ತುಂಬಿದ ನಂತರ ಮಗುವಿಗೆ ಮೊದಲು ಮನೆಯಲ್ಲಿ ತಯಾರಿಸಿದ ದ್ರವ ಆಹಾರವನ್ನು ಪರಿಚಯಿಸಬೇಕು. ತದನಂತರ ಘನ ಆಹಾರವನ್ನು ಕೊಡಬೇಕು. ದ್ರವ ಆಹಾರಗಳು ಎಂದರೆ ಹಸುವಿನ ಹಾಲು, ಹಣ್ಣಿನ ರಸ, ತರಕಾರಿ ಮತ್ತು ಸೊಪ್ಪಿನ ಸೂಪ್‌ಗಳು. ಚಮಚದಿಂದ ಶುರು ಮಾಡಿ ಹಂತ ಹಂತವಾಗಿ ಅದರ ಪ್ರಮಾಣವನ್ನು ಸ್ವಲ್ಪ ಸ್ವಲ್ಪವೇ ಹೆಚ್ಚಿಸಬೇಕು. ನಂತರ ಘನ ಆಹಾರವನ್ನು ಅಂದರೆ ಮೃದುವಾದ, ಚೆನ್ನಾಗಿ ಹಿಸುಕಿದ ಆಹಾರಗಳಾದ ಗಂಜಿ, ಹಿಸುಕಿದ ಹಣ್ಣುಗಳು, ತರಕಾರಿಗಳನ್ನು ದಿನಕ್ಕೆ ಎರಡು ಬಾರಿ ಕೊಡಬಹುದು. ಮಗುವಿಗೆ 6ರಿಂದ 8 ತಿಂಗಳು ಎದೆ ಹಾಲಿನ ಜೊತೆಗೆ ಪೂರಕ ಆಹಾರಗಳನ್ನು ದಿನಕ್ಕೆ ಕನಿಷ್ಠ ಎರಡು ಬಾರಿ ನೀಡಬೇಕು. 9ರಿಂದ 24 ತಿಂಗಳುಗಳಲ್ಲಿ ದಿನಕ್ಕೆ ಕನಿಷ್ಠ ಮೂರು ಬಾರಿ ಆಹಾರವನ್ನು ಹೆಚ್ಚಿಸಬೇಕು.

ಎದೆ ಹಾಲು ನೀಡದವರು 6ರಿಂದ 24 ತಿಂಗಳ ವಯಸ್ಸಿನ ಮಗುವಿಗೆ ಹಸುವಿನ ಹಾಲಿನ ಜೊತೆಗೆ ಪೂರಕ ಆಹಾರಗಳನ್ನು ಕನಿಷ್ಠ 4-5 ಬಾರಿ ಕೊಡಬೇಕು. ಮಗುವಿನ ವಯಸ್ಸಿನ ಅನುಗುಣವಾಗಿ ಆಹಾರ ಪ್ರಮಾಣ ಮತ್ತು ಊಟವನ್ನು ಹೆಚ್ಚಿಸಬೇಕು. ಉದಾಹರಣೆಗೆ ಪ್ಯೂರೀಸ್ (ಹಣ್ಣುಗಳು, ಆಲೂಗಡ್ಡೆ, ತರಕಾರಿಗಳು, ಬಟಾಣಿ ಆಧಾರಿತ ಪ್ಯೂರಿಗಳು) ಮಾಲ್ಟ್‌ಗಳು (ರಾಗಿ, ಮಿಶ್ರ ಕಾಳುಗಳು) ಜತೆಗೆ ನಟ್ಸ್ ಅಂಡ್ ಸೀಡ್ಸ್ ಅಂದರೆ ಎಣ್ಣೆ ಬೀಜಗಳ ಪೇಸ್ಟ್, ಪುಡ್ಡಿಂಗ್‌ಗಳು (ಓಟ್ಸ್, ಮೊಟ್ಟೆ, ಅವಲಕ್ಕಿ ಆಧಾರಿತ ಪುಡ್ಡಿಂಗ್‌ಗಳು).

ಎಂಟು ತಿಂಗಳ ನಂತರ ಸಂಪೂರ್ಣವಾಗಿ ಚೆನ್ನಾಗಿ ಬೇಯಿಸಿದ ಪೂರ್ತಿ ಮೊಟ್ಟೆ, ಮಾಂಸ ಆಹಾರಗಳನ್ನು ಸಣ್ಣ ಸಣ್ಣ ಪ್ರಮಾಣದ ಶಿಶುಗಳಿಗೆ ಪರಿಚಯಿಸಬೇಕು. ಇದನ್ನು ಸೇವಿಸದವರು ಪೌಷ್ಟಿಕಾಂಶಗಳ ಅಗತ್ಯಗಳನ್ನು ಪೂರೈಸಲು ಸಾಕಷ್ಟು ಪ್ರಮಾಣದಲ್ಲಿ ಬೇಳೆಕಾಳುಗಳನ್ನು ಸೇರಿಸಬೇಕು. ಉದಾಹರಣೆಗೆ ಪೊಂಗಲ್, ಕಿಚಡಿ, ದಾಲ್ ರೈಸ್ ಮತ್ತು ಇತರೆ ಬೇಳೆ ತರಕಾರಿ ಆಧಾರಿತ ತಿಂಡಿಗಳು. ಊಟದಲ್ಲಿ ಕೇವಲ ಹಾಲನ್ನು ಮಾತ್ರ ಕೊಡುವುದರಿಂದ ಅದು ಮಗುವಿಗೆ ಸಾಕಾಗಲ್ಲ. ಇದರ ಜೊತೆಗೆ ಹಾಲಿನಿಂದ ತಯಾರಿಸಿದ ಆಹಾರಗಳು ಮತ್ತು ದಿನದಲ್ಲಿ ಒಂದು ಮಗುವಿಗೆ ಕನಿಷ್ಠ 300-500 ಎಂಎಲ್‌ನಷ್ಟು ಹಾಲು ಅಗತ್ಯವಿರುತ್ತದೆ.

2-6 ವರ್ಷದ ಮಕ್ಕಳಿಗೆ ಸಾಕಷ್ಟು ಆಹಾರಗಳನ್ನು ಒದಗಿಸಬೇಕಾಗುತ್ತದೆ. ಈ ಹಂತದಲ್ಲಿ ಮಕ್ಕಳಿಗೆ ಸಮತೋಲಿತ ಮತ್ತು ಪೌಷ್ಟಿಕ ಆಹಾರದ ಅಗತ್ಯತೆ ಹೆಚ್ಚು ಇರುತ್ತದೆ. ದೇಹದ ಬೆಳವಣಿಗೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಹಾಗೂ ದೈಹಿಕ ಚಟುವಟಿಕೆ ಹೆಚ್ಚು ಇರುವುದರಿಂದ ಸಮರ್ಪಕತೆಯನ್ನು ಕಾಯ್ದಿರಿಸಿಕೊಳ್ಳಬೇಕಾಗುತ್ತದೆ. ಇದರ ಜೊತೆಗೆ ಸೂಕ್ಷ್ಮ ಪೋಷಕಾಂಶಗಳಾದ ವಿಟಮಿನ್‌ಗಳು (ವಿಟಮಿನ್ ಸಿ) ಖನಿಜಗಳ (ಕಬ್ಬಿಣ, ಕ್ಯಾಲ್ಸಿಯಂ) ಅವಶ್ಯಕತೆಯಿರುತ್ತದೆ.

ಒಟ್ಟಾರೆ, 6 ತಿಂಗಳ ಮಗುವಿನಿಂದ ಆರು ವರ್ಷದ ಮಕ್ಕಳ ಆಹಾರವು ವಿವಿಧ ರೀತಿಯ ಆಹಾರಗಳಾದ ಸೊಪ್ಪು, ತರಕಾರಿ, ಪಿಷ್ಟ ಆಹಾರಗಳು, ಹಣ್ಣುಗಳು ಮತ್ತು ಹೆಚ್ಚು ಪ್ರೊಟೀನ್ ಇರುವ ಆಹಾರಗಳನ್ನು (ಮೊಟ್ಟೆ, ಮಾಂಸ, ಎಣ್ಣೆ ಬೀಜಗಳ, ಬೇಳೆ ಕಾಳುಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು) ಒಳಗೊಂಡಿರಬೇಕು. ಬಹಳ ಮುಖ್ಯವಾಗಿ 6 ತಿಂಗಳ ನಂತರ ಮಗುವಿಗೆ ಕಡ್ಡಾಯವಾಗಿ ವೀನಿಂಗ್ ಫುಡ್‌ಗಳನ್ನು ಕೊಡಬೇಕು. ಇಲ್ಲವಾದರೆ ಇದರಿಂದ ಮಗುವಿಗೆ ಅಪೌಷ್ಟಿಕತೆ ಮತ್ತು ಬೆಳವಣಿಗೆ ಕುಂಠಿತವಾಗಬಹುದು.

ಮಕ್ಕಳ ಆಹಾರದಲ್ಲಿ ಅಗತ್ಯಕ್ಕಿಂತ ಹೆಚ್ಚು ಉಪ್ಪು, ಸಕ್ಕರೆಯ ಬಳಕೆಯನ್ನು ಕಡಿಮೆ ಮಾಡಬೇಕು ಮತ್ತು ಸಂಸ್ಕರಿಸಿದ ಆಹಾರಗಳಾದ ಬಿಸ್ಕೆಟ್, ಚಿಪ್ಸ್, ಕೇಕ್, ಫ್ರೋಜನ್ ಫ್ರೂಟ್ಸ್, ಜ್ಯೂಸ್, ಬೇಕರಿ ಪದಾರ್ಥಗಳು, ಕುರುಕಲು ತಿಂಡಿಗಳನ್ನು ಅಭ್ಯಾಸ ಮಾಡಿಸದೇ ಮನೆಯಲ್ಲೇ ಮಾಡಿದ ರುಚಿಕರವಾದ, ಸತ್ವಯುತವಾದ ಪೌಷ್ಟಿಕ ತಿಂಡಿಗಳನ್ನು ಮಾಡಿಕೊಡುವುದು ಹೆಚ್ಚು ಸೂಕ್ತ.

ಲೇಖಕಿ, ಕ್ಲಿನಿಕಲ್ ನ್ಯೂಟ್ರಿಷಿಯನಿಸ್ಟ್

ಆರೋಗ್ಯ, ರುಚಿ ಹೆಚ್ಚಿಸುವ ನುಗ್ಗೆಸೊಪ್ಪಿನ ಖಾದ್ಯ



ರಸಾಸ್ವಾದ

ವೇದಾವತಿ ಎಚ್. ಎಸ್

ಹಿತ್ತಲಿನಲ್ಲಿ ಬೆಳೆಯುವ ನುಗ್ಗೆಸೊಪ್ಪಿನಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಗುಣಗಳಿವೆ. ಇಂಥ ವಿಶಿಷ್ಟ ಎನಿಸುವ ನುಗ್ಗೆಸೊಪ್ಪಿನ ರೆಸಿಪಿಗಳು ಹೀಗಿವೆ.

ನುಗ್ಗೆಸೊಪ್ಪಿನ ಅಕ್ಕಿ ರೊಟ್ಟಿ

ಬೇಕಾಗುವ ಸಾಮಗ್ರಿಗಳು: ಹುರಿದು ಸಿಪ್ಪೆ ಬಿಡಿಸಿದ ಶೇಂಗಾ 3 ಟೇಬಲ್ ಚಮಚ, 3 ಟೇಬಲ್ ಚಮಚ ಹುರಿಗಡಲೆ, 3 ಕಪ್ (ಮುಕ್ಕಾಲು ಲೀಟರ್) ನೀರು, ಜೀರಿಗೆ 1 ಟೀ ಚಮಚ, ಚಿಕ್ಕದಾಗಿ ಕತ್ತರಿಸಿದ ಈರುಳ್ಳಿ 2, ನುಗ್ಗೆಸೊಪ್ಪು 1 ಕಪ್ (150 ಗ್ರಾಂ), ತೆಂಗಿನತುರಿ 4 ಟೇಬಲ್ ಚಮಚ, ಹಸಿಮೆಣಸಿನಕಾಯಿ ಚಿಕ್ಕದಾಗಿ ಹೆಚ್ಚಿದ್ದು 2, ಹಸಿಶುಂಠಿ ಚಿಕ್ಕದಾಗಿ ಕತ್ತರಿಸಿದ್ದು 1 ಇಂಚು, ಅಕ್ಕಿಹಿಟ್ಟು 3 ಕಪ್ (500 ಗ್ರಾಂ), ಎಣ್ಣೆ ಅಥವಾ ತುಪ್ಪ ಬೇಯಿಸಲು.

ತಯಾರಿಸುವ ವಿಧಾನ: ಶೇಂಗಾ ಮತ್ತು ಹುರಿಗಡಲೆಯನ್ನು ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಬಾಣಲೆಗೆ ನೀರನ್ನು ಹಾಕಿ ಕುದಿ ಬರಿಸಿ. ಒಲೆಯನ್ನು ಆರಿಸಿ ತಿಳಿಸಿರುವ ಎಲ್ಲಾ ಸಾಮಗ್ರಿಗಳನ್ನು ಬಿಸಿ ನೀರಿಗೆ ಸೇರಿಸಿ ಹಿಟ್ಟು ಗಂಟಾಗದ ರೀತಿ ಮಿಶ್ರಣ ಮಾಡಿ. ಬಳಿಕ ಒಂದೇ ರೀತಿಯಲ್ಲಿ ಹಿಟ್ಟನಿಂದ ಉಂಡೆಗಳನ್ನು ಕಟ್ಟಿಕೊಳ್ಳಿ. ತಯಾರಿಸಿದ ಹಿಟ್ಟಿನ ಉಂಡೆಗಳನ್ನು ತವಾಕ್ಕೆ ತುಪ್ಪವನ್ನು ಹಾಕಿ ಕೈಯಲ್ಲಿ ತೆಳುವಾಗಿ ತಟ್ಟಿಕೊಳ್ಳಿ. ಬಾಳೆಎಲೆ ಅಥವಾ ಬೈಂಡಿಂಗ್ ಪೇಪರಿನಲ್ಲೂ ತಟ್ಟಿ ಕೊಳ್ಳಬಹುದು. ಬಳಿಕ ಬೇಯಿಸುವಾಗ ರೊಟ್ಟಿಯ ಮೇಲೆ ತುಪ್ಪ ಅಥವಾ ಎಣ್ಣೆಯನ್ನು ಹಾಕಿ ಎರಡೂ ಬದಿಯನ್ನು ಚೆನ್ನಾಗಿ ಬೇಯಿಸಿಕೊಳ್ಳಿ.



ಪುಲಾವ್

ಬೇಕಾಗುವ ಸಾಮಗ್ರಿಗಳು: ತುಪ್ಪ 2 ಟೇಬಲ್ ಚಮಚ, ಜೀರಿಗೆ 1 ಟೀ ಚಮಚ, ಪುಲಾವ್‌ಎಲೆ 1, ಚಕ್ಕೆ 1 ಇಂಚು, ಲವಂಗ 4, ಏಲಕ್ಕಿ 2, ಕಾಳುಮೆಣಸು 10, ಕತ್ತರಿಸಿದ ಹಸಿಮೆಣಸಿನಕಾಯಿ 2, ಈರುಳ್ಳಿ ಚಿಕ್ಕದಾಗಿ ಕತ್ತರಿಸಿದ್ದು 2, ಶುಂಠಿಬೆಳ್ಳುಳ್ಳಿ ಪೇಸ್ಟ್ 1 ಟೀ ಚಮಚ, ಟೊಮೆಟೊ 2 ಚಿಕ್ಕದಾಗಿ ಕತ್ತರಿಸಿಕೊಳ್ಳಿ, ಅರಿಶಿಣ 1/2 ಟೀ ಚಮಚ, ಅಚ್ಚಖಾರದಪುಡಿ 1/2 ಟೀ ಚಮಚ, ಧನಿಯಾಪುಡಿ 1/2 ಟೀ ಚಮಚ, ಜೀರಿಗೆ ಪುಡಿ 1/2 ಟೀ ಚಮಚ, ಗರಂಮಸಾಲೆ 1/2 ಟೀ ಚಮಚ, ನುಗ್ಗೆಸೊಪ್ಪು 200ಗ್ರಾಂ, ಬಟಾಣಿ 100ಗ್ರಾಂ, ಬಾಸುಮತಿ ಅಕ್ಕಿ 1 ಕಪ್, ತೆಂಗಿನ ಹಾಲು 1 ಕಪ್, ನೀರು 1 ಕಪ್, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಕುಕ್ಕರಿಗೆ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಬಳಿಕ ಜೀರಿಗೆ, ಪುಲಾವ್ ಎಲೆ, ಚಕ್ಕೆ, ಲವಂಗ, ಏಲಕ್ಕಿ, ಕಾಳುಮೆಣಸು ಹಾಕಿ ಕೆಲವು ಸೆಕೆಂಡುಗಳ ಕಾಲ ಹುರಿಯಿರಿ. ನಂತರ ಈರುಳ್ಳಿ ಮತ್ತು ಹಸಿಮೆಣಸಿಕಾಯಿ ಹಾಕಿ ಬಾಡಿಸಿ. ಈಗ ಶುಂಠಿಬೆಳ್ಳುಳ್ಳಿ ಪೇಸ್ಟ್ ಹಾಕಿ ಹಸಿ ವಾಸನೆ ಹೋಗುವವರೆಗೆ ಹುರಿಯಿರಿ. ನಂತರ ಟೊಮೆಟೊ ಸೇರಿಸಿ ಮೆತ್ತಗಾಗುವರೆಗೆ ಹುರಿಯಿರಿ. ಬಳಿಕ ತಿಳಿಸಿರುವ ಮಸಾಲ ಸಾಮಗ್ರಿಗಳನ್ನು ಸೇರಿಸಿ ಮಿಶ್ರಣ ಮಾಡಿ. ಈಗ ನುಗ್ಗೆಸೊಪ್ಪು ಸೇರಿಸಿ ಕೆಲವು ಸೆಕೆಂಡುಗಳ ಕಾಲ ಹುರಿಯಿರಿ. ಬಟಾಣಿ ಸೇರಿಸಿ ಮಿಶ್ರಣ ಮಾಡಿ. ನಂತರ ತೊಳೆದು 20 ನಿಮಿಷ ಹಾಗೇ ಇಟ್ಟಿರುವ ಬಾಸುಮತಿ ಅಕ್ಕಿಯನ್ನು ಸೇರಿಸಿ ಮಿಶ್ರಣ ಮಾಡಿ. ಈಗ ನೀರು, ತೆಂಗಿನಹಾಲು, ಉಪ್ಪನ್ನು ಸೇರಿಸಿ ಮಿಶ್ರಣ ಮಾಡಿ. ಕುಕ್ಕರಿನ ಮುಚ್ಚಳ ಮುಚ್ಚಿ ಮೂರು ವಿಷಲ್ ಬರುವವರೆಗೆ ಬೇಯಿಸಿ. ರುಚಿಕರವಾದ ನುಗ್ಗೆಸೊಪ್ಪಿನ ಪುಲಾವ್ ಅನ್ನು ರಾಯಿತದೊಂದಿಗೆ ಸವಿಯಿರಿ.

ಸೊಪ್ಪಿನ ದಾಲ್

ಬೇಕಾಗುವ ಸಾಮಗ್ರಿಗಳು: ಹೆಸರುಬೇಳೆ 1/2 ಕಪ್, ತೊಗರಿಬೇಳೆ 1/2 ಕಪ್, ಕಡಲೆಬೇಳೆ 1/2 ಕಪ್, ಈರುಳ್ಳಿ ಚಿಕ್ಕದಾಗಿ ಕತ್ತರಿಸಿದ್ದು 1, ಟೊಮೆಟೊ 1, ಅರಿಶಿಣಪುಡಿ 1/2 ಟೀ ಚಮಚ, ಎಣ್ಣೆ, ನೀರು 5 ಕಪ್, ತುಪ್ಪ 2 ಟೇಬಲ್ ಚಮಚ, ಸಾಸಿವೆ 1 ಟೀ ಚಮಚ, ಜೀರಿಗೆ 1 ಟೀ ಚಮಚ, ಇಂಗು 1/4 ಟೀ ಚಮಚ, 2 ತುಂಡು ಮಾಡಿದ ಒಣಮೆಣಸಿನಕಾಯಿ, ಕರಿಬೇವು 10, ಬೆಳ್ಳುಳ್ಳಿ 10 ರಿಂದ 15, ಶುಂಠಿ 1 ಇಂಚು, ಹಸಿಮೆಣಸಿನಕಾಯಿ ಐದಾರು, ಸಾಂಬಾರ್ ಈರುಳ್ಳಿ 1 ಕಪ್, ನುಗ್ಗೆಸೊಪ್ಪು 200ಗ್ರಾಂ, ನಿಂಬೆ ಗಾತ್ರದ ಹುಣಸೆಹಣ್ಣು, ರುಚಿಗೆ ತಕ್ಕಷ್ಟು ಉಪ್ಪು, ತೆಂಗಿನ ತುರಿ 2 ಟೇಬಲ್ ಚಮಚ.

ತಯಾರಿಸುವ ವಿಧಾನ: ತಿಳಿಸಿರುವ ಬೇಳೆಗಳನ್ನು ತೊಳೆದು ಅರ್ಧ ಗಂಟೆ ನೀರಿನಲ್ಲಿ ನೆನೆಸಿಡಿ. ಬಳಿಕ ನೀರನ್ನು ಸೋಸಿಕೊಂಡು ಕುಕ್ಕರಿಗೆ ಹಾಕಿ. ಜೊತೆಗೆ ಕತ್ತರಿಸಿದ ಈರುಳ್ಳಿ, ಟೊಮೆಟೊ, ಅರಿಶಿನಪುಡಿ, 1 ಟೀ ಚಮಚ ಎಣ್ಣೆ, ಮೂರು ಕಪ್ ನೀರು ಸೇರಿಸಿ ಕುಕ್ಕರಿನ ಮುಚ್ಚಳ ಮುಚ್ಚಿ 5 ವಿಷಲ್ ಬರುವವರೆಗೆ ಬೇಯಿಸಿ. ಬಾಣಲೆಗೆ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಳ್ಳಿ. ಸಾಸಿವೆ, ಜೀರಿಗೆ, ಇಂಗು, ಒಣಮೆಣಸಿನಕಾಯಿ, ಕರಿಬೇವು, ಬೆಳ್ಳುಳ್ಳಿ, ಶುಂಠಿ, ಹಸಿಮೆಣಸಿನಕಾಯಿ ಹಾಕಿ ಬಣ್ಣ ಬದಲಾಗುವವರೆಗೆ ಹುರಿಯಿರಿ. ಬಳಿಕ ಸಾಂಬಾರ್ ಈರುಳ್ಳಿಯನ್ನು ಸೇರಿಸಿ ಸಣ್ಣ ಉರಿಯಲ್ಲಿ 5 ನಿಮಿಷ ಹುರಿಯಿರಿ. ಈಗ ನುಗ್ಗೆಸೊಪ್ಪನ್ನು ಸೇರಿಸಿ 2 ನಿಮಿಷ ಬಾಡಿಸಿ. ನಂತರ ಹುಣಸೆಹಣ್ಣಿನ ರಸವನ್ನು ತಯಾರಿಸಿ ಮಿಶ್ರಣಕ್ಕೆ ಸೇರಿಸಿ. ಬಳಿಕ ಕುಕ್ಕರಿನಲ್ಲಿ ಬೇಯಿಸಿದ ಬೇಳೆಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈಗ 2 ಕಪ್ ನೀರನ್ನು ಸೇರಿಸಿ ಮಿಶ್ರಣಕ್ಕೆ ಸೇರಿಸಿ ಮಿಶ್ರಣ ಮಾಡಿ. ನಂತರ ರುಚಿಗೆ ತಕ್ಕಷ್ಟು ಉಪ್ಪನ್ನು ಸೇರಿಸಿ ಮಿಶ್ರಣ ಮಾಡಿ 5 ನಿಮಿಷ ಮುಚ್ಚಳ ಮುಚ್ಚಿ ಬೇಯಿಸಿ. ಕುದಿ ಬಂದ ಬಳಿಕ ಮುಚ್ಚಳ ತೆಗೆದು ತೆಂಗಿನತುರಿ ಸೇರಿಸಿ ಒಲೆಯಿಂದ ಇಳಿಸಿ. ರುಚಿಕರವಾದ ನುಗ್ಗೆಸೊಪ್ಪಿನ ದಾಲ್ ಸವಿಯಲು ಸಿದ್ಧ.



ಮಕ್ಕಳಲ್ಲಿ ಪುಸ್ತಕ ಸಂಸ್ಕೃತಿ ಬಿತ್ತುವುದು ಹೇಗೆ?

ಅಂತರಂಗ



ಅಕ್ಷರ ದಾಮ್ಲೆ

ಟಿ.ವಿ, ಮೊಬೈಲ್, ಗ್ಯಾಜೆಟ್ ಹಾವಳಿಗಳ ನಡುವೆಯೂ ಮಕ್ಕಳಲ್ಲಿ ಪುಸ್ತಕ ಸಂಸ್ಕೃತಿಯನ್ನು ಬಿತ್ತುವುದು ಹೇಗೆ?

ಇತ್ತೀಚೆಗೆ ಆಸ್ಟ್ರೇಲಿಯಾದ ಪ್ರಧಾನಿ ಆಂಟನಿ ಅಲ್ಬನಿಸ್ ಅವರು 16 ವರ್ಷಗಳಿಗಿಂತ ಕೆಳಗಿನ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಲು ಕಾನೂನನ್ನು ತರುವುದಾಗಿ ಘೋಷಿಸಿದ್ದಾರೆ. ಒಂದು ರಾಷ್ಟ್ರದ ಸರ್ಕಾರ ಕಾನೂನು ಮಾಡುವಷ್ಟರ ಮಟ್ಟಿಗೆ ಆಲೋಚನೆ ಮಾಡುತ್ತಿದೆ ಅಂದರೆ, ಈ ಸಮಸ್ಯೆಯ ತೀವ್ರತೆ ಎಷ್ಟಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಈ ರೀತಿಯ ನಿಷೇಧ ಫ್ರಾನ್ಸ್ ಮತ್ತು ಅಮೆರಿಕದಲ್ಲಿ ಈಗಾಗಲೇ ಇದೆ. ಫ್ರಾನ್ಸ್‌ನಲ್ಲಿ 15 ವರ್ಷದಿಂದ ಕೆಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ನಿಷೇಧವಿದೆ, ಆದರೆ ಅವರುಗಳು ತಮ್ಮ ಹೆತ್ತವರ ಅನುಮತಿ ಪಡೆದುಕೊಂಡು ಬಳಸಬಹುದು. ಅಮೆರಿಕದಲ್ಲಿ 13 ವರ್ಷಗಳಿಗಿಂತ ಕಡಿಮೆಯ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ನಿಷಿದ್ಧವಿದೆ. ಇದರರ್ಥ ಈ ಎಲ್ಲಾ ದೇಶಗಳಲ್ಲೂ ಗ್ಯಾಜೆಟ್‌ಗಳ ಹಾವಳಿಗಳನ್ನು ಮತ್ತು ಅದರಿಂದಾಗುತ್ತಿರುವ ದುಷ್ಪರಿಣಾಮಗಳನ್ನು ಕಂಡುಕೊಂಡಿದ್ದಾರೆ. ಹಾಗಾದರೆ, ನಮ್ಮ ದೇಶದಲ್ಲೂ ಇಂಥ ಕಾನೂನಿನ ಅಗತ್ಯವಿದೆಯೇ ಎಂಬ ಒಂದು ತರ್ಕ ನಮ್ಮ ಮನದಲ್ಲಿ ಮೂಡುತ್ತಿದೆ. ಬಹುಶಃ ಇನ್ನು ಕೆಲವೇ ವರ್ಷಗಳಲ್ಲಿ ಈ ಕಾನೂನು ಬರಬಹುದು.

ಕಾನೂನು ಬರಲಿ, ಬಾರದೇ ಇರಲಿ, ಹೆತ್ತವರಾಗಿ ಮಕ್ಕಳನ್ನು ಗ್ಯಾಜೆಟ್‌ಗಳಿಂದ ದೂರವಿಡುವುದು ನಮ್ಮ ಕರ್ತವ್ಯ. ಯಾಕೆಂದರೆ, ಮನಃಶ್ಶಾಸ್ತ್ರೀಯ ಅಧ್ಯಯನಗಳ ಪ್ರಕಾರ, ಕನಿಷ್ಠ 12 ವರ್ಷಗಳವರೆಗೆ ಮಕ್ಕಳಿಗೆ ಯಾವುದೇ ರೀತಿಯ ಗ್ಯಾಜೆಟ್‌ಗಳ ಅವಕಾಶ ಸಿಗದಿದ್ದರೆ ಒಳ್ಳೆಯದು. ಅಂದರೆ, ಮಕ್ಕಳನ್ನು ಸಂಪೂರ್ಣವಾಗಿ ಗ್ಯಾಜೆಟ್‌ಗಳಿಂದ ದೂರ ಇಡಬೇಕು. ಆದರೆ ನಮ್ಮ ಪ್ರಸ್ತುತ ಪರಿಸ್ಥಿತಿಯಲ್ಲಿ ಅದು ಕಷ್ಟ ಸಾಧ್ಯ. ಯಾಕೆಂದರೆ ನಾವೆಲ್ಲರೂ ಗ್ಯಾಜೆಟ್‌ಗಳಿಗೆ ಅಧೀನರಾಗಿ ಬಿಟ್ಟಿದ್ದೇವೆ. ಗ್ಯಾಜೆಟ್‌ಗಳು ಇಲ್ಲ ಎಂದರೆ ನಮ್ಮ ಜೀವನವೇ ನಡೆಯುವುದಿಲ್ಲವೇನೋ ಎಂಬ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಆದರೂ ಮಕ್ಕಳನ್ನು ಗ್ಯಾಜೆಟ್‌ಗಳಿಂದ ವಿಮುಖರಾಗುವಂತೆ ಮಾಡಬಹುದು.


ಮೊದಲನೆಯದಾಗಿ ಮಕ್ಕಳಿಗೆ ಎಳವೆಯಿಂದಲೇ ಮೊಬೈಲ್ ಅನ್ನು ಲಭ್ಯವಾಗದಂತೆ ನೋಡಿಕೊಳ್ಳಬೇಕು. ಊಟ ಮಾಡಲು ಮಗು ಒಲ್ಲೆ ಎಂದರೆ, ಹಿಂದಿನ ಕಾಲದ ಹಾಗೆ ಚಂದಮಾಮನನ್ನು ಅಥವಾ ಇನ್ಯಾವುದೋ ಹಕ್ಕಿಯನ್ನು ತೋರಿಸಿ ಉಣಿಸಬೇಕು. ಮಕ್ಕಳ ಜೊತೆಗಿರುವಾಗ ಸಾಧ್ಯವಾದಷ್ಟು ಮೊಬೈಲ್ ಅನ್ನು ದೂರ ಇಡಬೇಕು.

ಆದರೆ ಈಗಾಗಲೇ ಬೆಳೆದಿರುವ ಮಕ್ಕಳಿಗೆ ಏನು ಮಾಡುವುದು ಎಂಬುದು ಪ್ರಶ್ನೆ. ಯಾಕೆಂದರೆ ಅವರುಗಳೆಲ್ಲರೂ ಈಗಾಗಲೇ ಗ್ಯಾಜೆಟ್ ಲೋಕದಲ್ಲಿ ಮುಳುಗಿ ಹೋಗಿದ್ದಾರೆ. ಅಂತಹ ಸಂದರ್ಭದಲ್ಲಿ ಮನೆಗಳಲ್ಲಿ ಸಾಮೂಹಿಕವಾಗಿ ಗ್ಯಾಜೆಟ್‌ಗಳನ್ನು ದೂರ ಮಾಡುವ ಸಾಂಸ್ಕೃತಿಕ ಬದಲಾವಣೆ ನಡೆಯಬೇಕು. ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಇರಬೇಕೆಂದರೆ, ಅದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿ ಮಾಡಬೇಕು.

ಹೇಗೆ ನಮ್ಮ ಪರಿಸರ ಮನಸ್ಸಿನ ಮೇಲೆ ಪ್ರಭಾವ ಬೀರುತ್ತದೆ ಎನ್ನುವುದಕ್ಕೆ ಉದಾಹರಣೆಯನ್ನು ಕೊಡುವುದಾದರೆ, ನನ್ನ ತಂದೆ - ತಾಯಿ ನಿರಂತರವಾಗಿ ಒಂದಿಲ್ಲಾ ಒಂದು ಪುಸ್ತಕವನ್ನು ಓದುತ್ತಾರೆ. ಟಿ.ವಿ ಕೇವಲ ವಾರ್ತೆಯನ್ನು ನೋಡುವುದಕ್ಕಷ್ಟೇ ಸೀಮಿತವಾಗಿರುತ್ತದೆ. ಕರೆ ಬಂದರೆ ಫೋನ್, ಇಲ್ಲದಿದ್ದರೆ ಅದು ಬದಿಯಲ್ಲೆಲ್ಲಾದರೂ ತನ್ನ ಪಾಡಿಗೆ ಮಿಣುಕುತ್ತಾ ಕೂತಿರುತ್ತದೆ. ಹಾಗಾಗಿ ನಾನು ಅವರ ಜೊತೆಗೆ ಸಮಯ ಕಳೆಯುವುದಕ್ಕೆ ಹೋದಾಗಲೆಲ್ಲಾ ನನ್ನ ಪುಸ್ತಕದ ಓದಿನ ವೇಗವೂ ಹೆಚ್ಚುತ್ತದೆ. ಮಾತ್ರವಲ್ಲ ಓದಿದ ಪುಸ್ತಕದ ಕುರಿತು ನಮ್ಮ ಹೊಳಹುಗಳ ಚರ್ಚೆ ಆಗುತ್ತದೆ. ತರ್ಕಗಳು ಮೂಡುತ್ತವೆ. ಮತ್ತು ಹೊಸ ಕಾಣ್ಕೆಗಳೂ ಕಾಣಿಸುತ್ತವೆ. ಮಾತ್ರವಲ್ಲ ಅಂತಹ ಸಂದರ್ಭದಲ್ಲಿ ಗ್ಯಾಜೆಟ್ ಯಾವತ್ತೂ ನಮ್ಮನ್ನು ಸೆಳೆಯುವುದೇ ಇಲ್ಲ.

ಗ್ಯಾಜೆಟ್‌ಗಳಿಂದ ನಾನೂ ಮುಕ್ತನೇನಲ್ಲ. ನನ್ನ ಹಲವಾರು ಕೆಲಸಗಳಿಗೆ ಗ್ಯಾಜೆಟ್‌ಗಳ ಮೇಲಿನ ಅವಲಂಬನೆ ಬಹಳವಾಗಿಯೇ ಇದೆ. ಈ ಲೇಖನವನ್ನು ಬರೆಯುವುದಕ್ಕೂ ನಾನು ನನ್ನ ಕಂಪ್ಯೂಟರನ್ನೇ ಬಳಸುತ್ತಿದ್ದೇನೆ. ಆದರೆ, ಒಂದು ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ವಿಚಾರವೇನೆಂದರೆ, ನಾವು ಗ್ಯಾಜೆಟ್‌ಗಳ ಅಧೀನಕ್ಕೊಳಗಾಗಬಾರದು. ಅದಕ್ಕೆ ಮನಸ್ಸಿನ ಹತೋಟಿ ನಮ್ಮ ಕೈಯಲ್ಲೇ ಇರಬೇಕು.

ಇದಲ್ಲದೇ ಇತ್ತೀಚೆಗೆ ಅನೇಕ ಪಟ್ಟಣಗಳಲ್ಲಿ ಬುಕ್ ಕ್ಲಬ್ ಎಂಬಂತಹ ಹೊಸ ಪ್ರಯೋಗಗಳು ನಡೆಯುತ್ತಿವೆ. ವಾರಕ್ಕೊಮ್ಮೆ ಒಂದಷ್ಟು ಜನ ಒಟ್ಟು ಸೇರಿ ಪುಸ್ತಕಗಳನ್ನು ಓದುವ ಪರಿಪಾಠವನ್ನು ನಿರ್ಮಿಸಲಾಗುತ್ತಿದೆ. ಇಂತಹ ಜಾಗಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಿ. ಆರಂಭದಲ್ಲಿ ಮಕ್ಕಳು ಅದಕ್ಕೆ ಒಗ್ಗಿಕೊಳ್ಳದೇ ಇರಬಹುದು. ಆದರೆ, ನಿಧಾನವಾಗಿ ಅದು ಇಷ್ಟವಾಗುದಕ್ಕೆ ಆರಂಭವಾಗುತ್ತದೆ. ಮತ್ತು ಪುಸ್ತಕ ಪ್ರೀತಿ ಹುಟ್ಟುತ್ತದೆ. ಗ್ಯಾಜೆಟ್‌ಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ.



3ನೇ ದಿನವೂ ಗದ್ದಲ, ಎಳೆದಾಟ


ಬಿಜೆಪಿ ಶಾಸಕರನ್ನು ಮಾರ್ಷಲ್‌ಗಳು ಸದನದಿಂದ ಶುಕ್ರವಾರ ಹೊರಹಾಕಿದರು –ಪಿಟಿಐ ಚಿತ್ರ

ಒಂದನೇ ಪುಟದಿಂದ...

ತಕ್ಷಣವೇ, ವಿರೋಧ ಪಕ್ಷಗಳಾದ ಬಿಜೆಪಿ, ಪೀಪಲ್ಸ್ ಕಾನ್ಫರೆನ್ಸ್, ಪಿಡಿಪಿ ಹಾಗೂ ಎಐಪಿ ಪಕ್ಷಗಳ ಸದಸ್ಯರು ಘೋಷಣೆಗಳನ್ನು ಕೂಗಲು ಆರಂಭಿಸಿದರು. ಬಿಜೆಪಿ ಶಾಸಕರು ಸ್ಪೀಕರ್ ಪೀಠದ ಮುಂಭಾಗ ಪ್ರತಿಭಟನೆ ನಡೆಸಿದರು. 'ಪಾಕಿಸ್ತಾನಿ ಅಜೆಂಡಾ ನಹೀ ಚಲೇಗಿ' (ಪಾಕಿಸ್ತಾನದ ಅಜೆಂಡಾವು ಇಲ್ಲಿ ನಡೆಯುವುದಿಲ್ಲ) ಎಂಬ ಘೋಷಣೆ ಕೂಗಿದರು.

ಗದ್ದಲವು ನಿಯಂತ್ರಣಕ್ಕೆ ಬಾರದಿದ್ದಾಗ, ಸ್ಪೀಕರ್ ರಾಥರ್ ಅವರು ಬಿಜೆಪಿಯ 12 ಶಾಸಕರನ್ನು ಸದನದಿಂದ ಹೊರಹಾಕಲು ಮಾರ್ಷಲ್‌ಗಳಿಗೆ ಆದೇಶಿಸಿದರು. ಈ ಬಳಿಕ, ಬಿಜೆಪಿಯ ಉಳಿದ 11 ಶಾಸಕರು ಸದನದಿಂದ ಹೊರನಡೆದರು.

ಒಬ್ಬರನ್ನೊಬ್ಬರು ಎಳೆದಾಡಿಕೊಂಡ ಶಾಸಕರು: ಶಾಸಕ ಖುರ್ಷೀದ್ ಅವರು, '370 ಹಾಗೂ 35ಎ ವಿಧಿಯನ್ನು ಮರುಸ್ಥಾಪಿಸಲು ಆಗ್ರಹಿಸುತ್ತೇವೆ. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ' ಎಂಬ ಬರಹವಿದ್ದ ಬ್ಯಾನರ್ ಅನ್ನು ಪ್ರದರ್ಶಿಸಿದರು. ಇದರಿಂದ ಪ್ರಚೋದನೆಗೊಂಡ ಬಿಜೆಪಿ ಶಾಸಕರು, ಖುರ್ಷೀದ್ ಅವರನ್ನು ಎಳೆದಾಡಿದರು. ಬಳಿಕ ಖುರ್ಷೀದ್ ಅವರನ್ನು ಸದನದಿಂದ ಹೊರಹಾಕಲಾಯಿತು.

370ನೇ ವಿಧಿಯಡಿ ವಿಶೇಷ ಸ್ಥಾನವನ್ನು ಮರುಸ್ಥಾಪಿಸುವ ನಿರ್ಣಯವನ್ನು ವಿಧಾನಸಭೆಯು ಧ್ವನಿ ಮತದ ಮೂಲಕ ಬುಧವಾರವೇ ಅಂಗೀಕರಿಸಿದೆ.

ಅನಿರ್ದಿಷ್ಟಾವಧಿ ಮುಂದೂಡಿಕೆ: ಲೆಫ್ಟಿನೆಂಟ್ ಗವರ್ನರ್ ಅವರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಶುಕ್ರವಾರ ಅಂಗೀಕರಿಸಲಾಯಿತು. ಇದಾದ ಬಳಿಕ ವಿಧಾನಸಭೆ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ಸೋಮವಾರ ಆರಂಭಗೊಂಡಿದ್ದ ಅಧಿವೇಶನವು ಗದ್ದಲದಲ್ಲಿಯೇ ಮುಕ್ತಾಯವಾಯಿತು.

ಬಿಜೆಪಿ ಶಾಸಕರ ಅಣಕು ಕಲಾಪ

ಮಾರ್ಷಲ್‌ಗಳು ಬಿಜೆಪಿಯ ಕೆಲವು ಶಾಸಕರನ್ನು ಸದನದಿಂದ ಹೊರಹಾಕಿದ ಬಳಿಕ, ಬಿಜೆಪಿಯ ಉಳಿದ ಶಾಸಕರು ಸದನದಿಂದ ಹೊರ ನಡೆದರು. ಈ ಬಳಿಕ ಎಲ್ಲ ಬಿಜೆಪಿ ಶಾಸಕರು ವಿಧಾನಸಭೆ ಕಟ್ಟಡ ಮುಂಭಾಗ ಅಣಕು ಕಲಾಪ ನಡೆಸಿದರು.

ಈ ವೇಳೆ ಮಾತನಾಡಿದ ಬಿಜೆಪಿ ಶಾಸಕರು, 'ವಿಶೇಷ ಸ್ಥಾನವನ್ನು ಮರಳಿ ಸ್ಥಾಪಿಸುವ ಕುರಿತ ನಿರ್ಣಯವು ಕಾನೂನು ಬಾಹಿರ ಹಾಗೂ ಅಸಾಂವಿಧಾನಿಕವಾಗಿದೆ. ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಸದನವನ್ನು ಹೈಜಾಕ್ ಮಾಡಿದೆ. ಇದನ್ನು ವಿರೋಧಿಸಿ ಈ ಅಣಕು ಕಲಾಪವನ್ನು ನಡೆಸಲಾಗುತ್ತಿದೆ' ಎಂದರು.

ಕಾಶ್ಮೀರಕ್ಕೆ ಮತ್ತೆ ವಿಶೇಷ ಸ್ಥಾನ ಅಸಾಧ್ಯ

ಒಂದನೇ ಪುಟದಿಂದ...

ಎಂವಿಎ ಭಾಗವಾಗಿರುವ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ), ವಿಶೇಷ ಸ್ಥಾನಮಾನ ರದ್ದುಗೊಳಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಬೆಂಬಲಿಸಿತ್ತು.

'ವಿಶೇಷ ಸ್ಥಾನಮಾನ ಮರುಸ್ಥಾಪಿಸಲು ಯಾರಿಗೂ ಸಾಧ್ಯವಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರ ಸಂವಿಧಾನವನ್ನು ಮಾತ್ರ ಅನುಸರಿಸಲಾಗುತ್ತದೆ ಎಂಬ ಭರವಸೆಯನ್ನು ನಿಮಗೆ ನೀಡುತ್ತಿದ್ದೇನೆ' ಎಂದು ಮಹಾರಾಷ್ಟ್ರದ ಧುಳೆ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮೋದಿ ಹೇಳಿದರು.

'ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ಮತ್ತೆ ನೀಡುವಂತೆ ಆಗ್ರಹಿಸಿ ಅಲ್ಲಿನ ವಿಧಾನ ಸಭೆಯಲ್ಲಿ ನಿರ್ಣಯವನ್ನು ಹೇಗೆ ಮಂಡಿಸಲಾಗಿದೆ ಹಾಗೂ ಅದನ್ನು ವಿರೋಧಿಸಿದ ಬಿಜೆಪಿ ಶಾಸಕರನ್ನು ಯಾವ ರೀತಿ ಸದನದಿಂದ ಹೊರಹಾಕಲಾಯಿತು ಎಂಬುದನ್ನು ನೀವು ಟಿ.ವಿಯಲ್ಲಿ ನೋಡಿದ್ದೀರಿ.

ಅಲ್ಲಿ ನಡೆದ ಬೆಳವಣಿಗೆಯನ್ನು ದೇಶದ ಮತ್ತು ಮಹಾರಾಷ್ಟ್ರದ ಜನರು ಅರ್ಥಮಾಡಿಕೊಳ್ಳಬೇಕು' ಎಂದರು.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳ 'ಪಾಕಿಸ್ತಾನದ ಕಾರ್ಯಸೂಚಿ'ಯನ್ನು ಪ್ರೋತ್ಸಾಹಿಸಬಾರದು ಮತ್ತು ಪ್ರತ್ಯೇಕತಾವಾದಿಗಳ ಭಾಷೆಯಲ್ಲಿ ಮಾತನಾಡಬಾರದು. ಜನರ ಆಶೀರ್ವಾದ ಇರುವವರೆಗೂ ಕಾಂಗ್ರೆಸ್‌ನ ಈ ಕಾರ್ಯಸೂಚಿ ಯಶಸ್ವಿಯಾಗದು ಎಂದು ನುಡಿದರು.

ಸಾಂಗ್ಲಿಯಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಶಾ, 'ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಎಂದಿಗೂ ಪುನಃಸ್ಥಾಪಿಸುವುದಿಲ್ಲ' ಎಂದು ಪುನರುಚ್ಚರಿಸಿದರು.

'ಛತ್ರಪತಿ ಶಿವಾಜಿ ಮಹಾರಾಜರ ನಾಡಿನಿಂದ ನಾನು ರಾಹುಲ್ ಗಾಂಧಿ ಅವರಿಗೆ ಈ ಮಾತು ಹೇಳುತ್ತಿದ್ದೇನೆ. ವಿಶೇಷ ಸ್ಥಾನಮಾನ ಮರುಸ್ಥಾಪಿಸಲು ನಿಮಗೆ ಸಾಧ್ಯವಿಲ್ಲ. ದೇಶದ ಪ್ರತಿಯೊಂದು ಮಗುವೂ ಕಾಶ್ಮೀರಕ್ಕಾಗಿ ಹೋರಾಡಲು ಸಿದ್ಧವಾಗಿದೆ' ಎಂದು ಹೇಳಿದರು.

ಜನಪ್ರಿಯ ಚಿತ್ರಗಳು ಚಿತ್ರೀಕರಣಗೊಂಡ ತಾಣಕ್ಕೆ ಪ್ರವಾಸ

ಸಿನಿಮಾ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರತ್ಯೇಕ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶ–ವಿದೇಶಗಳ ಚಲನಚಿತ್ರ ನಿರ್ಮಾಪಕರನ್ನು ಕರ್ನಾಟಕದ ಕಡೆಗೆ ಸೆಳೆಯಲು ಮತ್ತು ರಾಜ್ಯ ವ್ಯಾಪಿ ಸಿನಿಮಾ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಪ್ರತ್ಯೇಕ ನೀತಿಯೊಂದನ್ನು ರೂಪಿಸಲು ಸರ್ಕಾರ ಚಿಂತನೆ ನಡೆಸಿದೆ.

ಕರ್ನಾಟಕದಲ್ಲಿ ಸಿನಿಮಾ ಪ್ರವಾಸೋದ್ಯಮದ ಬೆಳವಣಿಗೆಗೆ ವಿಫುಲ ಅವಕಾಶಗಳು ಇರುವುದರಿಂದ ಪ್ರತ್ಯೇಕ ನೀತಿ ಮತ್ತು ಕಾರ್ಯಸೂಚಿಗಳನ್ನು ರೂಪಿಸುವ ಅಗತ್ಯವಿದೆ. 'ಇದಕ್ಕಾಗಿ ರಾಜ್ಯ ವ್ಯಾಪ್ತಿ ಸಿನಿಮಾ ಚಿತ್ರೀಕರಣಕ್ಕೆ ಪೂರಕವಾದ ತಾಣಗಳನ್ನು ಗುರುತಿಸಿ, ಉತ್ತೇಜನ ನೀಡಲು ಕಾರ್ಯತಂತ್ರ ರೂಪಿಸಲು ಉದ್ದೇಶಿಸಲಾಗಿದೆ.

ಜನಪ್ರಿಯ ಚಲನಚಿತ್ರಗಳು ಚಿತ್ರೀಕರಣಗೊಂಡ ವಿಭಿನ್ನ ತಾಣಗಳ ವೀಕ್ಷಣೆಗೆ ಪ್ರವಾಸಿಗರು ಬರುವಂತೆ ಮಾಡಲಾಗುವುದು. ಇದಕ್ಕಾಗಿ ಪ್ಯಾಕೇಜ್ ಮಾದರಿಯಲ್ಲಿ ಚಿತ್ರೀಕರಣಗೊಂಡ ತಾಣಗಳಿಗೆ ಪ್ರವಾಸ ಕೈಗೊಳ್ಳಲು ಅವಕಾಶ ನೀಡಲಾಗುವುದು.

ಕವಿಗೋಷ್ಠಿ, ಪುಸ್ತಕೋತ್ಸವಕ್ಕೂ ಪ್ರವಾಸ

ಸಾರಸ್ವತ ಲೋಕವನ್ನೂ ಪ್ರವಾಸೋದ್ಯಮದ ತೆಕ್ಕೆಗೆ ತರುವ ಕುರಿತು ಪ್ರವಾಸೋದ್ಯಮ ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ.

'ಇದರ ಅನ್ವಯ ಹೆಸರಾಂತ ಲೇಖಕರು, ಕವಿಗಳಿಗೆ ಸಂಬಂಧಿಸಿದ ಊರುಗಳಿಗೆ ಪ್ರವಾಸ ಏರ್ಪಡಿಸಲಾಗುವುದು. ಐತಿಹಾಸಿಕ ತಾಣಗಳು, ಜನಸ್ನೇಹಿ ಮತ್ತು ಸಾಹಿತಿಗಳ ಮನೆಗಳಿಗೆ ಕರೆದೊಯ್ಯಲಾಗುವುದು.

ಅಲ್ಲದೆ, ಕವಿಗೋಷ್ಠಿ, ಸಾಹಿತ್ಯೋತ್ಸವ ಮತ್ತು ಪುಸ್ತಕೋತ್ಸವ ನಡೆಯುವ ಕಡೆಗಳಿಗೆ ಪ್ರವಾಸಿಗರನ್ನು ಒಯ್ಯುವ ಮೂಲಕ ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟದಲ್ಲಿ ಬಿಂಬಿಸಲು ಪ್ರಯತ್ನಿಸುವುದು ಸರ್ಕಾರದ ಉದ್ದೇಶ.



ಎಲ್ಲ ಬಗೆಯ ಚಲನಚಿತ್ರಗಳು ಅಂದರೆ ಕಮರ್ಷಿಯಲ್, ಪ್ರಾದೇಶಿಕ, ಸಾಕ್ಷ್ಯಚಿತ್ರ, ಟಿ.ವಿ ಪ್ರೊಡಕ್ಷನ್, ಒಟಿಟಿ ಮತ್ತು ಚಲನಚಿತ್ರಕ್ಕೆ ಸಂಬಂಧಿಸಿದ ಇತರ ಪ್ಲಾಟ್‌ಫಾರಂಗಳನ್ನೂ ಚಲನಚಿತ್ರ ಪ್ರವಾಸೋದ್ಯಮದ ವ್ಯಾಪ್ತಿಗೆ ಒಳಪಡಿಸಲಾಗುವುದು.

ವಿವಿಧ ತಾಣಗಳಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕಾಗಿ ಅನುಮತಿ ಪಡೆಯಲು ಆನ್‌ಲೈನ್ ಏಕಗವಾಕ್ಷಿ ವ್ಯವಸ್ಥೆಯನ್ನು ಸರ್ಕಾರದ ಇತರ ಏಜೆನ್ಸಿಗಳ ಜತೆ ಸೇರಿ ರೂಪಿಸಬೇಕು. ಚಿತ್ರೀಕರಣಕ್ಕೆ ಅನುಕೂಲಕರ ಮತ್ತು ಆಕರ್ಷಕ ವಾತಾವರಣವನ್ನು ಸೃಷ್ಟಿಸಬೇಕಾಗಿದೆ ಎಂದು ಹೊಸ ಪ್ರವಾಸೋದ್ಯಮ ನೀತಿ ಪ್ರತಿಪಾದಿಸಿದೆ.

ಇದಕ್ಕಾಗಿ ವಾರ್ತಾ ಇಲಾಖೆ, ಕರ್ನಾಟಕ ಚಲನಚಿತ್ರ ಅಕಾಡೆಮಿ ಜತೆ ಸೇರಿ ಚಲನಚಿತ್ರ ಪ್ರವಾಸೋದ್ಯಮ ಅಭಿವೃದ್ಧಿಪಡಿಸಬೇಕಾಗಿದೆ ಎಂದೂ ಹೇಳಿದೆ.

‘ನನಗೊಂದು ಅವಕಾಶ ನೀಡಿ ಪರೀಕ್ಷಿಸಲಿ’

ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮನವಿ

ದೇವೇಗೌಡರ ಕುಟುಂಬದ ಮೂರನೇ ತಲೆಮಾರಿನ ನಾಯಕ ನಿಖಿಲ್ ಕುಮಾರಸ್ವಾಮಿ ಅವರು ಬದಲಾದ ರಾಜಕೀಯ ಸ್ಥಿತಿಯಲ್ಲಿ ಚನ್ನಪಟ್ಟಣ ಉಪ ಚುನಾವಣೆಯ ಅಭ್ಯರ್ಥಿಯಾಗಿದ್ದಾರೆ. ಸತತ ಎರಡು ಚುನಾವಣೆಗಳಲ್ಲಿ ಸೋತಿರುವ ಅವರೀಗ, ತಂದೆಯಿಂದ ತೆರವಾಗಿರುವ ಕ್ಷೇತ್ರದಲ್ಲಿ ಮೂರನೇ ಬಾರಿಗೆ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಬಿಡುವಿಲ್ಲದ ಪ್ರಚಾರ ಕಾರ್ಯಕ್ರಮಗಳ ಮಧ್ಯೆ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

● ಉಪ ಚುನಾವಣೆ ಸ್ಪರ್ಧೆ ನಿಮಗೆ ಅನಿವಾರ್ಯವಾಗಿತ್ತೇ?
ಆರಂಭದಿಂದಲೂ ನಾನು ಸ್ಪರ್ಧೆಯಿಂದ ದೂರವಿದ್ದೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಮೈತ್ರಿ ಪಕ್ಷದ ನಾಯಕರು ಹಾಗೂ ಸ್ಥಳೀಯ ಕಾರ್ಯಕರ್ತರ ಒತ್ತಡದಿಂದಾಗಿ ನಿಲ್ಲಬೇಕಾಯಿತು. ಈ ಚುನಾವಣೆ ನಿಖಿಲ್ ಭವಿಷ್ಯ ನಿರ್ಧರಿಸಲಿದೆ ಎಂಬುದೇ ಬಹುತೇಕರ ಅಭಿಪ್ರಾಯ. ಆದರೆ, ನನ್ನ ಭವಿಷ್ಯಕ್ಕಿಂತ ಕಾರ್ಯಕರ್ತರ ಭಾವನೆಗೆ ಬೆಲೆ ಕೊಡಬೇಕು ಎಂಬುದು ನನ್ನ ನಿಲುವು.

● ಉಪ ಚುನಾವಣೆಯಲ್ಲಿ ಬಿಜೆಪಿ ದೋಸ್ತಿಯು ನಿಮಗೆ ಪ್ಲಸ್ ಆಗಲಿದೆಯೇ?
ಬಿಜೆಪಿ, ಜನತಾದಳ ಸೇರಿದಂತೆ ಹಲವು ಪಕ್ಷಗಳು ಸ್ಥಾಪನೆಯಾಗಿರುವುದೇ ಕಾಂಗ್ರೆಸ್ ವಿರುದ್ಧ. ಅಂದಮೇಲೆ ಕಾಂಗ್ರೆಸ್ ವಿರೋಧಿ ಮತಗಳು ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಜೊತೆಗಿರಲಿವೆ. ಕ್ಷೇತ್ರವು ಜೆಡಿಎಸ್‌ನ ಭದ್ರಕೋಟೆಯಾಗಿದೆ. ಬಿಜೆಪಿಯೂ ತನ್ನದೇ ಮತಬ್ಯಾಂಕ್ ಹೊಂದಿದೆ. ಎರಡೂ ಪಕ್ಷಗಳ ನಾಯಕರು ಗೆಲುವಿಗೆ ಪಣ ತೊಟ್ಟು ಪ್ರಚಾರ ನಡೆಸುತ್ತಿದ್ದಾರೆ. ಬಿಜೆಪಿ ಜೊತೆಗಿನ ಮೈತ್ರಿ ನಮ್ಮ ಶಕ್ತಿಯನ್ನು ಹೆಚ್ಚಿಸಿದೆ.


ನಿಖಿಲ್ ಕುಮಾರಸ್ವಾಮಿ

‘ಜೊತೆಯಲ್ಲಿದ್ದೇ ಕಾಂಗ್ರೆಸ್‌ನವರು ಬೆನ್ನಿಗೆ ಚೂರಿ ಹಾಕಿದರು’

● ಜನ ನಿಮಗೆ ಯಾಕೆ ಮತ ಹಾಕಬೇಕು?
ಈ ಚುನಾವಣೆ ನಾನು ಬಯಸಿದ್ದಲ್ಲ. ಹಿಂದಿನ ಎರಡು ಚುನಾವಣೆಗಳ ಪೈಕಿ ಮಂಡ್ಯದಲ್ಲಿ ಕಾಂಗ್ರೆಸ್‌ನವರು ಜತೆಯಲ್ಲಿದ್ದುಕೊಂಡೇ ಬೆನ್ನಿಗೆ ಚೂರಿ ಹಾಕಿದರು. ರಾಮನಗರದಲ್ಲಿ ಗಿಫ್ಟ್ ಕೂಪನ್ ಹಂಚಿ ಷಡ್ಯಂತ್ರ ಮಾಡಿ ಸೋಲಿಸಿದರು. ಈ ಚುನಾವಣೆ ಹಿಂದಿನಂತಿಲ್ಲ. ಕ್ಷೇತ್ರದ ಜನ ಈಗಾಗಲೇ ಯೋಗೇಶ್ವರ್ ಅವರಿಗೆ ಹಲವು ಅವಕಾಶಗಳನ್ನು ನೀಡಿದ್ದಾರೆ. ಸದ್ಯ ಉಳಿದಿರುವುದು ಮೂರೂವರೆ ವರ್ಷವಷ್ಟೆ. ನನಗೂ ಒಂದು ಅವಕಾಶ ಕೊಟ್ಟು, ಕಾರ್ಯವೈಖರಿ ಪರೀಕ್ಷಿಸಲಿ. ಆ ಪರೀಕ್ಷೆಯಲ್ಲಿ ಪಾಸಾದರೆ, 2028ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರಿಚ್ಛೆಯಂತೆ ನಡೆಯಲಿ. ಆ ಪರೀಕ್ಷೆಗಾದರೂ ಜನ ನನಗೆ ಮತ ಹಾಕಬೇಕು ಎಂದು ಕೋರುವೆ.

● ಬಿಜೆಪಿ ಸಖ್ಯದ ಕಾರಣಕ್ಕೆ ಮುಸ್ಲಿಂ ಮತಗಳು ದೂರವಾಗುವ ಮಾತುಗಳು ಕೇಳಿ ಬರುತ್ತಿವೆಯಲ್ಲಾ?
ಮುಸ್ಲಿಂ ಸಮುದಾಯಕ್ಕೆ ರಾಜ್ಯದಲ್ಲಿ ಮೀಸಲಾತಿ ಕೊಡುವ ಕ್ರಾಂತಿಕಾರಕ ಹೆಜ್ಜೆ ಇಟ್ಟಿದ್ದು ಮಾಜಿ ಪ್ರಧಾನಿ ದೇವೇಗೌಡರು. ಜಿಲ್ಲೆಯಲ್ಲಿ ಕೋಮುಸೌಹಾರ್ದ ಕಾಪಾಡುವಲ್ಲಿ ಕುಮಾರಸ್ವಾಮಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ಇದೇ ಕಾರಣಕ್ಕೆ ಅಲ್ಪಸಂಖ್ಯಾತರು ನಮ್ಮ ಜೊತೆಗಿದ್ದಾರೆ. ಕ್ಷೇತ್ರದಲ್ಲಿ ತಂದೆ ಸತತವಾಗಿ ಎರಡು ಸಲ ಗೆಲ್ಲುವುದರಲ್ಲಿ ಅವರ ಕಾಣಿಕೆಯೂ ಇದೆ. ಉಪ ಚುನಾವಣೆಯಲ್ಲೂ ಅದು ಮುಂದುವರಿಯಲಿದೆ ಎಂಬ ವಿಶ್ವಾಸವಿದೆ.

● ನೀವು ‘ಹೊರಗಿನವರು’ ಎಂಬುದನ್ನೇ ಎದುರಾಳಿಗಳು ಚುನಾವಣಾ ಅಸ್ತ್ರ ಮಾಡಿಕೊಂಡಿದ್ದಾರಲ್ಲ?
ಈ ಚುನಾವಣೆಯು ‘ಸ್ಥಳೀಯರು’ ಮತ್ತು ‘ಹೊರಗಿನವರು’ ಎಂಬುದರ ಮೇಲೆ ನಡೆಯುತ್ತಿಲ್ಲ. ಹಾಗಿದ್ದರೆ ನಮ್ಮ ತಂದೆಯವರು ಎದುರಾಳಿ ಸಿ.ಪಿ. ಯೋಗೇಶ್ವರ್ ವಿರುದ್ಧ ಸತತ ಎರಡು ಸಲ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ಸ್ಥಳೀಯ ಅಸ್ಮಿತೆ ಮೇಲೆ ಜನರನ್ನು ವಿಭಜಿಸಿ ಮತಲಾಭ ಪಡೆಯಲು ಕಾಂಗ್ರೆಸ್‌ನವರು ಯತ್ನಿಸುತ್ತಿದ್ದಾರೆ.

● ನಿಮ್ಮ ಎದುರಾಳಿ ನೀರಾವರಿ ಕ್ರೆಡಿಟ್ ಮೇಲೆ ಪ್ರಚಾರ ಮಾಡುತ್ತಿದ್ದಾರೆ, ಇದಕ್ಕೇನಂತೀರಿ?
ತಾಲ್ಲೂಕಿನ 17 ಕೆರೆಗಳನ್ನು ನಾನೇ ತುಂಬಿಸಿದೆ ಎನ್ನುವ ಯೋಗೇಶ್ವರ್ ಅವರೇನಾದರೂ ಮುಖ್ಯಮಂತ್ರಿ ಅಥವಾ ನೀರಾವರಿ ಸಚಿವರಾಗಿದ್ದರೇ? ಆದರೂ, ನಾನೇ ಕೆರೆಗಳನ್ನು ತುಂಬಿಸಿದ ಭಗೀರಥ ಎಂದು ಫ್ಲೆಕ್ಸ್ ಹಾಕಿಸಿಕೊಂಡು ಪ್ರಚಾರ ಪಡೆದರು. ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಡಿ.ವಿ.ಸದಾನಂದಗೌಡರು, ಹಣ ಬಿಡುಗಡೆ ಮಾಡಿ ಕೆರೆಗಳನ್ನು ತುಂಬಿಸಿದರು. ನೀರಾವರಿ ದೂರದೃಷ್ಟಿಯೊಂದಿಗೆ ದೇವೇಗೌಡರು ಇಗ್ಗಲೂರು ಬ್ಯಾರೇಜ್ ನಿರ್ಮಿಸಿದ್ದರಿಂದ ಇದು ಸಾಧ್ಯವಾಯಿತು.

● ನಿಮ್ಮ ಅಭಿವೃದ್ಧಿ ಅಜೆಂಡಾ ಏನು?
ಕ್ಷೇತ್ರದ ಮತ್ತಷ್ಟು ಕೆರೆಗಳಿಗೆ ನೀರು ತುಂಬಿಸಿ ರೈತರಿಗೆ ನೀರಾವರಿ ಕಲ್ಪಿಸಲಾಗುವುದು. ಅಭಿವೃದ್ಧಿ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗುವ ಜತೆಗೆ ಮೂಲಸೌಕರ್ಯಕ್ಕೆ ಒತ್ತು ನೀಡುವೆ. ತಂದೆ ಕೈಗಾರಿಕಾ ಸಚಿವರಾಗಿರುವುದರಿಂದ ಈ ಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ, ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವುದಕ್ಕೆ ಆದ್ಯತೆ ನೀಡುವೆ.

ಪ್ರಜಾವಾಣಿ ಸಂದರ್ಶನ
ಓದೇಶ ಸಕಲೇಶಪುರ

‘ಬಲೆ ಹೆಣೆದರು; ಅವರೇ ಸಿಲುಕಿದರು’

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ವ್ಯಾಖ್ಯಾನ

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ‘ಮೈತ್ರಿ’ ಟಿಕೆಟ್‌ನ ಪ್ರಬಲ ಆಕಾಂಕ್ಷಿಯಾಗಿದ್ದ ಸಿ.ಪಿ.ಯೋಗೇಶ್ವರ್ ಅವರು, ಕಡೆ ಗಳಿಗೆಯಲ್ಲಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ತಮ್ಮ ಈ ನಿರ್ಧಾರದ ಹಿಂದಿನ ರಾಜಕೀಯ, ಸ್ಪರ್ಧೆ ಅನಿವಾರ್ಯತೆ ಹಾಗೂ ಪ್ರಚಾರದಲ್ಲಿ ಅನುರಣಿಸುತ್ತಿರುವ ವಿಷಯಗಳ ಕುರಿತು ಅವರು ವಿವರಣೆ ನೀಡಿದ್ದಾರೆ.

● ಈ ಉಪ ಚುನಾವಣೆ ನಿಮ್ಮ ಅಳಿವು–ಉಳಿವಿನ ಪ್ರಶ್ನೆಯೇ?
ಹಾಗೇನಿಲ್ಲ. ಹಿಂದೆ ನಾನು ಸೋತರೂ ವಿಧಾನ ಪರಿಷತ್ ಸದಸ್ಯನಾಗಿ, ಸಚಿವನಾಗಿ ಕೆಲಸ ಮಾಡಿದ್ದೇನೆ. ಉಪ ಚುನಾವಣೆಯು ನನ್ನ ಅಳಿವು–ಉಳಿವು ನಿರ್ಧರಿಸುವುದಿಲ್ಲ. ನಾನೆಂದೂ ಕ್ಷೇತ್ರ ಬಿಟ್ಟು ರಾಜಕೀಯ ಮಾಡಿದವನಲ್ಲ. ಉಪ ಚುನಾವಣೆ ರಾಜಕೀಯ ಸ್ಥಿತಿ ನನಗೆ ಪೂರಕವಾದ್ದರಿಂದ ಸ್ಪರ್ಧೆಗೆ ಮನಸ್ಸು ಮಾಡಿದೆ. ನನ್ನನ್ನು ತುಳಿಯಲು ಯತ್ನಿಸಿದಾಗ ಸೆಟೆದು ನಿಲ್ಲಲೇಬೇಕಾಯಿತು.

● ಸ್ಪರ್ಧಿಸಲು ಪಕ್ಷಾಂತರ ಅನಿವಾರ್ಯವಾಗಿತ್ತೇ?
ಪಕ್ಷ ಬದಲಿಸುವ ಆಲೋಚನೆ ನನಗಿರಲಿಲ್ಲ. ಟಿಕೆಟ್ ವಿಷಯದಲ್ಲಿ ಆರಂಭದಿಂದಲೂ ಭರವಸೆ ಹುಟ್ಟಿಸುತ್ತಲೇ ಬಂದ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ, ನನ್ನನ್ನು ಅತಂತ್ರ ಮಾಡಲು ಬಲೆ ಹೆಣೆದಿದ್ದರು. ಕೊನೆವರೆಗೆ ಟಿಕೆಟ್ ವಿಷಯ ಎಳೆಯುತ್ತಾ ಬಂದು, ಅವರೇ ಆ ಬಲೆಯಲ್ಲಿ ಸಿಲುಕಿದರು. ರಾಜಕೀಯ ಬದುಕು ಅತಂತ್ರವಾಗಬಾರದೆಂದು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಬೇಕಾಯಿತು.

● ನೀವು ಬಿಜೆಪಿ ಟಿಕೆಟ್ ನಿರಾಕರಿಸಿದ್ದೀರಿ ಎಂದು ಆ ಪಕ್ಷದ ನಾಯಕರು ಹೇಳುತ್ತಾರಲ್ಲ?
ಟಿಕೆಟ್ ಕೊಡುವ ಇಚ್ಛೆ ಇದ್ದಿದ್ದರೆ ಬಿಜೆಪಿಯವರು ಹೆಸರು ಘೋಷಿಸಬೇಕಿತ್ತು. ಪ್ರಬಲ ಆಕಾಂಕ್ಷಿ ಎಂದು ಗೊತ್ತಿದ್ದರೂ ನಾಮಪತ್ರ ಸಲ್ಲಿಸುವುದಕ್ಕೆ ಎರಡು ದಿನ ಇರುವವರೆಗೆ ಹೆಸರು ಅಂತಿಮಗೊಳಿಸದೆ ನಾಟಕವಾಡಿದರು. ನಡು ನೀರಲ್ಲಿ ಕೈ ಬಿಡಲು ಯತ್ನಿಸಿದರು.

● ನಿಮ್ಮ ಪಕ್ಷಾಂತರವೇ ಎದುರಾಳಿಗಳಿಗೆ ಚುನಾವಣಾ ಅಸ್ತ್ರವಾಗಿದೆ. ಇದಕ್ಕೆ ಏನಂತೀರಿ?
ಸಂದರ್ಭ ಬಂದಾಗಲೆಲ್ಲಾ ಪಕ್ಷ ಬದಲಿಸಿರುವ ನಾನು ಪಕ್ಷಾಂತರಿ ನಿಜ. ಆದರೆ, ಪರಿಸ್ಥಿತಿಯನ್ನು ಬೆಂಬಲಿಗರಿಗೆ ಮನವರಿಕೆ ಮಾಡಿಯೇ ಮುಂದಿನ ಹೆಜ್ಜೆ ಇಟ್ಟಿದ್ದೇನೆ. ಅಭಿವೃದ್ಧಿಗಾಗಿ ಮಾಡಿರುವ ಪಕ್ಷಾಂತರವನ್ನು ಜನ ಒಪ್ಪಿ ಬೆಂಬಲಿಸುತ್ತಾ ಬಂದಿದ್ದಾರೆ.

● ಡಿ.ಕೆ ಸಹೋದರರ ವಿರುದ್ಧ ಕಿಡಿಕಾರುತ್ತಿದ್ದ ನೀವು, ಈಗ ಅವರೊಂದಿಗೆ ರಾಜಕಾರಣ ಮಾಡಬೇಕಾದ ಸ್ಥಿತಿ ಬಂದಿದೆಯಲ್ಲಾ?
ಜನರ ಹಿತಾಸಕ್ತಿಗಾಗಿ ರಾಜಕಾರಣ ಮಾಡುತ್ತೇವೆಯೇ ಹೊರತು, ವೈಯಕ್ತಿಕ ಹಿತಾಸಕ್ತಿಗಲ್ಲ. ಜನರಿಗೆ ಒಳ್ಳೆಯದಾಗಬೇಕು ಎಂದರೆ ಶತ್ರು ಜತೆಗೂ ಕೈ ಜೋಡಿಸಬೇಕಾಗುತ್ತದೆ. ಸರ್ಕಾರದಲ್ಲಿ ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದು, ಅಭಿವೃದ್ಧಿಯ ಬದ್ಧತೆ ಹೊಂದಿದ್ದಾರೆ. ಅವರೊಂದಿಗೆ ಕೈ ಜೋಡಿಸಿದರೆ ಕ್ಷೇತ್ರದ ಅಭಿವೃದ್ಧಿಯಾಗುತ್ತದೆ ಎಂದು ಕಾಂಗ್ರೆಸ್ ಸೇರಿದ್ದೇನೆ.

● ಕ್ಷೇತ್ರದ ಅಭಿವೃದ್ಧಿಗೆ ನಿಮ್ಮ ಕೊಡುಗೆ ಶೂನ್ಯ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರಲ್ಲ?
ಕುಮಾರಸ್ವಾಮಿ ಅವರು ಈ ಕ್ಷೇತ್ರ ಕಂಡ ಅಸಮರ್ಥ ಶಾಸಕ. ಮುಖ್ಯಮಂತ್ರಿ ಹುದ್ದೆ ಅವರ ಸಾಮರ್ಥ್ಯದ ಮೇಲೆ ಅವರ ಬಳಿಗೆ ಬರಲಿಲ್ಲ. ರಾಜಕೀಯ ಹೊಂದಾಣಿಕೆ ಸ್ಥಿತ್ಯಂತರಿಂದಾಗಿ ಎರಡು ಸಲ ಆಕಸ್ಮಿಕವಾಗಿ ಮುಖ್ಯಮಂತ್ರಿಯಾದರು. ಕ್ಷೇತ್ರದ ಬಗ್ಗೆ ಅವರಿಗೆ ಎಷ್ಟು ನಿರ್ಲಕ್ಷ್ಯವಿತ್ತು ಎಂಬುದನ್ನು ತಾಲ್ಲೂಕಿನ ಸ್ಥಿತಿ ಗಮನಿಸಿದರೆ ಗೊತ್ತಾಗುತ್ತದೆ.

● ನಿಮ್ಮ ಅಭಿವೃದ್ಧಿ ಅಜೆಂಡಾ ಏನು?
ಕುಮಾರಸ್ವಾಮಿ ಬಂದ ನಂತರ ಕ್ಷೇತ್ರದಲ್ಲಿ ಸ್ಥಗಿತಗೊಂಡಿರುವ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವೆ. ನೀರಾವರಿ ಯೋಜನೆಗಳಿಗೆ ಪುನಶ್ಚೇತನ ನೀಡಿ, ಮತ್ತಷ್ಟು ಕೆರೆಗಳಿಗೆ ನೀರು ಹರಿಸಲು ಯೋಜನೆ ರೂಪಿಸುವೆ.

‘ದೇವೇಗೌಡರಿಗೂ ತಾಲ್ಲೂಕಿನ ನೀರಾವರಿಗೂ ಸಂಬಂಧವಿಲ್ಲ’

● ನೀವು ಮಾತಲ್ಲಷ್ಟೇ ಭಗೀರಥ ಎಂಬ ದೇವೇಗೌಡರ ವಾಗ್ದಾಳಿಗೆ ನಿಮ್ಮ ಪ್ರತಿಕ್ರಿಯೆ ಏನು?
ನಾನೆಲ್ಲೂ ಭಗೀರಥ ಎಂದು ಹೇಳಿಕೊಂಡಿಲ್ಲ. ಜನ ಅಭಿಮಾನದಿಂದ ಕರೆಯುತ್ತಾರಷ್ಟೆ. ಇಷ್ಟಕ್ಕೂ ದೇವೇಗೌಡರಿಗೆ ತಾಲ್ಲೂಕಿನ ನೀರಾವರಿಗೂ ಸಂಬಂಧವಿಲ್ಲ. ಪ್ರಧಾನಿಯಾದಾಗ ಅವರ ಮೇಲಿನ ಅಭಿಮಾನದಿಂದ ಆಗ ಶಾಸಕರಾಗಿದ್ದ ವರದೇಗೌಡರು ಇಗ್ಗಲೂರು ಬ್ಯಾರೇಜ್‌ಗೆ ಅವರ ಹೆಸರಿಟ್ಟು ಉದ್ಘಾಟನೆ ಮಾಡಿಸಿದರು. ಅದರಲ್ಲಿ ದೇವೇಗೌಡರ ಪಾತ್ರವಿಲ್ಲ. ಈ ಕುರಿತು ದಾಖಲೆಗಳಿವೆ. ದೇವೇಗೌಡರಿಗೆ ಅಂತಹ ಇಚ್ಛಾಶಕ್ತಿ ಇದ್ದಿದ್ದರೆ ಚನ್ನಪಟ್ಟಣ ಸೇರಿದಂತೆ ಇಡೀ ಜಿಲ್ಲೆಗೆ ನೀರಾವರಿ ಮಾಡಬಹುದಿತ್ತಲ್ಲವೇ? ಅವರ ಪುತ್ರ ಕುಮಾರಸ್ವಾಮಿ ಮಾಡಬಹುದಿತ್ತಲ್ಲವೇ? ಅವರು ಕ್ಷೇತ್ರಕ್ಕೆ ಬರುವುದಕ್ಕೆ ಮುಂಚೆಯೇ ಕೆರೆಗಳು ತುಂಬಿದ್ದವು. ಯಶಸ್ಸಿಗೆ ನಾನೇ ವಾರಸುದಾರ ಎಂದು ಹಲವರು ಬರುತ್ತಾರೆ. ಸೋತಾಗ ಯಾರೂ ಬರುವುದಿಲ್ಲ.


ಸಿ.ಪಿ. ಯೋಗೇಶ್ವರ್

ಯೋಗೇಶ್ವರ್ ಪರ ಡಿಸಿಎಂ, ನಿಖಿಲ್ ಪರ ತಂದೆ–ತಾತ ಪ್ರಚಾರ

ನಿಖಿಲ್ ಸೋತಿದ್ದೇಕೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ಎಚ್.ಡಿ. ಕುಮಾರಸ್ವಾಮಿ ರಾಮನಗರದಲ್ಲಿ ಶಾಸಕರಾಗಿ, ಮುಖ್ಯಮಂತ್ರಿಯೂ ಆಗಿದ್ದರು. ನಂತರ, ಅವರ ಪತ್ನಿ ಅನಿತಾ ಅವರೂ ಶಾಸಕಿಯಾಗಿದ್ದರು. ಆದರೂ, ರಾಮನಗರದಲ್ಲಿ ನಿಖಿಲ್ ಕುಮಾರಸ್ವಾಮಿ ಯಾಕೆ ಸೋತರು? ಅಪ್ಪ ಸರಿಯಾಗಿ ಕೆಲಸ ಮಾಡಿದ್ದರೆ ಜನ ಸೋಲಿಸುತ್ತಿದ್ರಾ?’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ಉಪ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರವಾಗಿ ಶುಕ್ರವಾರ ತಾಲ್ಲೂಕಿನ ಚಕ್ಕೆರೆ, ಹೊನ್ನನಾಯಕನ ಹಳ್ಳಿ ಸೇರಿ ವಿವಿಧೆಡೆ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಅಧಿಕಾರವಿದ್ದಾಗ ಜನಸೇವೆ ಮಾಡದ ಕುಮಾರಸ್ವಾಮಿ ಐದು ವರ್ಷಕ್ಕೊಮ್ಮೆ ಬಂದು ಮತ ನೀಡಿ ಎಂದರೆ ಹೇಗೆ? ಮತದಾರರೇನು ಕೂಲಿ ಕಾರ್ಮಿಕರೇ? ಮತದಾನ ಹಕ್ಕು ಸ್ವಾಭಿಮಾನದ ಪ್ರತೀಕ. ಅದನ್ನು ಯಾರೂ ಮಾರಿಕೊಳ್ಳುವುದಿಲ್ಲ’ ಎಂದರು.

‘ಇಡೀ ಸರ್ಕಾರ ಯೋಗೇಶ್ವರ್ ಬೆನ್ನಿಗಿದೆ. ಜೆಡಿಎಸ್ ನವರು ಅತ್ತರೆ ಅಳಲಿ, ಕುಣಿದರೆ ಕುಣಿಯಲಿ, ಏನಾದರೂ ಮಾಡಿಕೊಳ್ಳಲಿ. ನಿಮ್ಮ ಕಷ್ಟ ಸುಖಕ್ಕೆ ಆಗುವವರು ನಾವು. ನಿಮ್ಮನ್ನು ಹಾಗೂ ಈ ಜಿಲ್ಲೆ ಬಿಟ್ಟು ಹೋಗುವುದಿಲ್ಲ. ನಾನು ದೊಡ್ಡಾಲಹಳ್ಳಿಯಲ್ಲಿ, ಯೋಗೇಶ್ವರ್ ಚಕ್ಕರೆಯಲ್ಲಿ ಮಣ್ಣಾಗುತ್ತೇವೆಯೇ ಹೊರತು, ಬೇರೆಲ್ಲೋ ಅಲ್ಲ. ನಮ್ಮೂರ ಮಗನನ್ನು ಗೆಲ್ಲಿಸಿ’ ಎಂದು ಮನವಿ ಮಾಡಿದರು.


ಪ್ರಚಾರಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಅವರಿಗೆ ‘ನೀವು ಕಾಂಗ್ರೆಸ್ ಬಿಟ್ಟು ಹೋಗಬಾರದು’ ಎಂದು ಕೂಗಿದ ಮಹಿಳೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವೇದಿಕೆಗೆ ಕರೆದು ಹಾರ ಹಾಕಿ ಸನ್ಮಾನಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಮಾಜಿ ಶಾಸಕ ಎಂ.ಸಿ.ಅಶ್ವಥ್ ಭಾಗವಹಿಸಿದ್ದರು

ಸಭೆಯಲ್ಲಿ ಬಿಜೆಪಿ ಶಾಸಕ: ಚಕ್ಕರೆಯಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಕಾಣಿಸಿಕೊಂಡು ಅಚ್ಚರಿ ಮೂಡಿಸಿದರು. ವೇದಿಕೆ ಮುಂಭಾಗದಲ್ಲಿ ಸಚಿವ ರಾಮಲಿಂಗಾ ರೆಡ್ಡಿ ಅವರೊಂದಿಗೆ ಕುಳಿತಿದ್ದ ಅವರು ಸಭೆ ಮುಗಿಯುವವರೆಗೆ ಇದ್ದರು.

ಎಚ್‌ಡಿಕೆ ಭಾವುಕ: ತಮ್ಮ ಪುತ್ರ ನಿಖಿಲ್ ಪರವಾಗಿ ಸೊಸೆ ರೇವತಿ ಅವರ ಅಜ್ಜಿ ಊರಾದ ಸಾಮಂದಿಪುರದಲ್ಲಿ ಪ್ರಚಾರ ನಡೆಸಿದ ಕುಮಾರಸ್ವಾಮಿ, ‘ನಮಗೂ ಈ ಗ್ರಾಮಕ್ಕೂ ಬಾಂಧವ್ಯ ಇದೆ’ ಎಂದು ಭಾವುಕರಾದರು.

ಮೊಮ್ಮಗನ ಪರ ದೇವೇಗೌಡರು ಗ್ರಾಮಗಳಲ್ಲಿ ಪ್ರಚಾರ ನಡೆಸಿದರು. ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಸೇರಿದಂತೆ ಮೈತ್ರಿ ನಾಯಕರು ಸಾಥ್ ನೀಡಿದರು.

‘ನಿಖಿಲ್ ಕಟ್ಟಿ ಹಾಕಲು ಸಾಧ್ಯವಿಲ್ಲ’

‘ನಿಖಿಲ್ ಅವರನ್ನು ಕಟ್ಟಿ ಹಾಕಲು ಚನ್ನಪಟ್ಟಣಕ್ಕೆ ಸರ್ಕಾರದ ಉಪ ಮುಖ್ಯಮಂತ್ರಿ ಸೇರಿದಂತೆ 15ಕ್ಕೂ ಹೆಚ್ಚು ಸಚಿವರು ಮತ್ತು 30ಕ್ಕೂ ಹೆಚ್ಚು ಶಾಸಕರ ದಂಡೇ ಬಂದಿದೆ. ಅವರು ಎಷ್ಟೇ ತಿಪ್ಪರಲಾಗ ಹಾಕಿದರೂ ನಿಖಿಲ್ ಅವರನ್ನು ಕಟ್ಟಿ ಹಾಕಲು ಸಾಧ್ಯವಿಲ್ಲ’ ಎಂದು ತಾಲ್ಲೂಕಿನ ಕಲ್ಲಾಪುರದಲ್ಲಿ ಪುತ್ರ ನಿಖಿಲ್ ಪರ ಪ್ರಚಾರದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

15 ದಿನದಲ್ಲಿ ಸಿ.ಎಂ ರಾಜೀನಾಮೆ: ಬಿಎಸ್‌ವೈ

ಸಂಡೂರಿನಲ್ಲಿ ಬಿ.ಎಸ್. ಯಡಿಯೂರಪ್ಪ ಪ್ರಚಾರ ● ಸಿದ್ದರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ): ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮುಡಾ ಹಗರಣದಲ್ಲಿ ಸಿಲುಕಿದ್ದು, ಅಧಿಕಾರದಲ್ಲಿ ಮುಂದುವರಿಯಲು ಅವರು ಅರ್ಹರಲ್ಲ. 15 ರಿಂದ 20 ದಿನಗಳಲ್ಲಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಹೇಳಿದರು.

ಸಂಡೂರು ಕ್ಷೇತ್ರದ ಬೊಮ್ಮಘಟ್ಟ, ಚೋರನೂರು ಗ್ರಾಮಗಳಲ್ಲಿ ಪ್ರಚಾರ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು,‘ ಮುಡಾ ಹಗರಣ ಆರೋಪ ಸಾಬೀತಾಗುತ್ತದೆ. ಇ.ಡಿ, ಸಿಬಿಐ ವಿರುದ್ಧ ಸಿದ್ದರಾಮಯ್ಯ ವಿನಾ ಕಾರಣ ಅಪಪ್ರಚಾರ ಮಾಡುತ್ತಾರೆ. ನಮಗೆ ಲೋಕಾಯುಕ್ತ ಮೇಲೆ ನಂಬಿಕೆಯಿಲ್ಲ. ಸಿಬಿಐ ತನಿಖೆ ನಡೆಸಲಿ’ ಎಂದರು.

ಕಾಂಗ್ರೆಸ್ ಗೆದ್ದರೆ ಪ್ರತಿ ಮನೆ ವಕ್ಫ್ ಆಸ್ತಿ: ‘ಕಾಂಗ್ರೆಸ್‌ಗೆ ಈ ಉಪಚುನಾವಣೆಯಲ್ಲಿ ಸೋಲಿಸದಿದ್ದರೆ, ರಾಜ್ಯದ ಪ್ರತಿ ಮನೆಯು ವಕ್ಫ್ ಆಸ್ತಿಯಾಗಲಿದೆ. ವಕ್ಫ್ ಮೂಲಕ ಹೊಸ ಜಿಹಾದಿ ಆರಂಭವಾಗಿದೆ. ಇದು ಶುದ್ಧ ದುರುಳತನ. ಕಾಂಗ್ರೆಸ್ ಗೊತ್ತಿದ್ದೇ ಇದನ್ನು ಮಾಡುತ್ತಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

‘ನಾವು ವಕ್ಫ್ ಆಸ್ತಿ ಉಳಿಸುವುದಾಗಿ ಹೇಳಿದ್ದೆವು. ಅನ್ವರ್ ಮಾನಪ್ಪಾಡಿ ವರದಿ ಅದಕ್ಕೆ ಆಧಾರವಾಗಿತ್ತು. ವಕ್ಫ್ ಆಸ್ತಿಯನ್ನು ಕಬಳಿಸಲಾಗಿದೆ ಎಂದು ಆ ವರದಿಯಲ್ಲಿ ಹೇಳಲಾಗಿತ್ತು. ಕಾಂಗ್ರೆಸ್ ನಾಯಕರಾದ ರೆಹಮಾನ್ ಖಾನ್, ಸಿಎಂ ಇಬ್ರಾಹಿಂ, ಹ್ಯಾರಿಸ್ ಸೇರಿದಂತೆ ಹಲವರು ಹೆಸರು ಅದರಲ್ಲಿತ್ತು’ ಎಂದರು.

ಈಗೇನು ಮಾಡುವಿರಿ?: ಶಾಸಕ ಜನಾರ್ದನ ರೆಡ್ಡಿ ಮಾತನಾಡಿ, ‘ನಾನು ₹1 ಲಕ್ಷ ಕೋಟಿ ದೋಚಿದ್ದು, ಅದನ್ನು ವಸೂಲಿ ಮಾಡಿ ಬಡವರಿಗೆ ಮನೆ ಕಟ್ಟಿಸಿಕೊಡುವುದಾಗಿ ಸಿದ್ದರಾಮಯ್ಯ ಹೇಳಿದ್ದರು. ಅವರು ಐದು ವರ್ಷ ಅಧಿಕಾರದಲ್ಲಿ ಇದ್ದರೂ ಏನು ಮಾಡಿದರು? ಅವರದ್ದೇ ಯುಪಿಎ ಸರ್ಕಾರ ಇದ್ದರೂ ಏನು ಮಾಡಲಿಲ್ಲ. ನನ್ನನ್ನು ಜೈಲಿಗಟ್ಟಿದರು. ಅಂದು ಏನನ್ನೂ ಮಾಡಲಾಗದವರು, ಈಗ ಏನು ಮಾಡುವರು’ ಎಂದು ಪ್ರಶ್ನಿಸಿದರು.

‘ತಾಯಿ ಚಾಮುಂಡೇಶ್ವರಿ ಮುಡಾ ಹಗರಣದ ವಿಚಾರದಲ್ಲಿ ಸಿಎಂ ಕುಟುಂಬ ಸಿಲುಕುವಂತೆ ಮಾಡಿದ್ದಾಳೆ. ಮೈಸೂರಿನಿಂದ ಚಾಮುಂಡಿಯೇ ಅವರನ್ನು ಹೊರಗೆ ಹಾಕುತ್ತಾಳೆ. ನವೆಂಬರ್ 13ರ ಬಳಿಕ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವುದು ಗ್ಯಾರಂಟಿ’ ಎಂದು ಹೇಳಿದರು.


ಸಂಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚೋರನೂರು ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಪಕ್ಷದ ಅಭ್ಯರ್ಥಿ ಬಂಗಾರು ಹನುಮಂತ ಪರವಾಗಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ ಯಡಿಯೂರಪ್ಪ ಶುಕ್ರವಾರ ಪ್ರಚಾರ ನಡೆಸಿದರು. ಶಾಸಕ ಜನಾರ್ದನ ರೆಡ್ಡಿ, ಮಾಜಿ ಸಚಿವ ಬಿ. ಶ್ರೀರಾಮುಲು ಮತ್ತಿತರರು ಭಾಗವಹಿಸಿದ್ದರು

ಗ್ಯಾರಂಟಿ ತಡೆಯಲು ಅನುದಾನ ನಿರಾಕರಣೆ: ಸಿದ್ದರಾಮಯ್ಯ

‘ಅನುದಾನ ಕೊಡದೇ ಹೋದರೆ ಗ್ಯಾರಂಟಿಗಳು ನಿಲ್ಲುತ್ತವೆ ಎಂಬ ದುರುದ್ದೇಶದಿಂದ ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಬೇಕಾದ ಬಾಕಿ, ಅನುದಾನ ನೀಡದೇ ವಂಚಿಸುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಸಂಡೂರು ವಿಧಾನಸಭಾ ಕ್ಷೇತ್ರದ ಬನ್ನಿಹಟ್ಟಿ, ಏಳುಬೆಂಚಿ, ಕುಡುತಿನಿಯಲ್ಲಿ ಶುಕ್ರವಾರ ಅವರು ಪ್ರಚಾರ ನಡೆಸಿದ ಅವರು,‘ದುಡ್ಡು ಕೊಡದಿದ್ದರೆ, ಗ್ಯಾರಂಟಿಗಳನ್ನು ನಿಲ್ಲಿಸಿಬಿಡುತ್ತಾರೆ ಎಂದು ರಾಜ್ಯಕ್ಕೆ ನ್ಯಾಯವಾಗಿ ಬರಬೇಕಾದ ಅನುದಾನ ನಿರಾಕರಿಸಲಾಗುತ್ತಿದೆ. ₹11,495 ಕೋಟಿ ಕೇಂದ್ರದಿಂದ ನಮಗೆ ಬರಬೇಕಿತ್ತು. ಇದು ನಮ್ಮದೇ ಪಾಲಿನ ಹಣ. ಇದನ್ನು ರಾಜ್ಯಕ್ಕೆ ಕೊಡದೆ ವಂಚಿಸಿದ್ದಾರೆ. ಇದೂ ಸೇರಿ ಒಟ್ಟು ₹17 ಸಾವಿರ ಕೋಟಿ ನಮಗೆ ಕೇಂದ್ರ ಸರ್ಕಾರದಿಂದ ವಂಚನೆಯಾಗಿದೆ’ ಎಂದರು.

‘ನಮ್ಮ ಬಳಿ ಸಂಬಳ ಕೊಡೋಕೆ ಹಣವಿಲ್ಲ ಎಂದು ಮೋದಿ ಹೇಳುತ್ತಾರೆ. ಹಾಗಿದ್ದರೆ ಗ್ಯಾರಂಟಿಗಳಿಗೆ ನೀಡಿದ ₹56 ಸಾವಿರ ಕೋಟಿ ಎಲ್ಲಿಯದ್ದು? ಅಭಿವೃದ್ಧಿ ಕಾರ್ಯಗಳಿಗೆ ನೀಡಿದ ₹1.20 ಲಕ್ಷ ಕೋಟಿ ಎಲ್ಲಿಯದ್ದು? ಇದೆಲ್ಲಾ ಎಲ್ಲಿಂದ ಬಂತು ಮಿಸ್ಟರ್ ಮೋದಿ’ ಎಂದು ಪ್ರಶ್ನಿಸಿದರು

ರೆಡ್ಡಿ ವಿರುದ್ಧ ವಾಗ್ದಾಳಿ: ಚುನಾವಣಾ ಪ್ರಚಾರದ ಪ್ರತಿ ಬಹಿರಂಗ ಸಭೆಯಲ್ಲೂ ಸಿದ್ದರಾಮಯ್ಯ ಅಕ್ರಮ ಗಣಿಗಾರಿಕೆಯ ಕಾಲದ ಘಟನಾವಳಿ ಗಳನ್ನು ನೆನಪಿಸಿದರು. ‘ಹಿಂದಿನ ಕಹಿ ಘಟನೆಗಳು ಮರುಕಳಿಸಬಾರದು ಎಂದಾದರೆ, ಬಳ್ಳಾರಿ ಶಾಂತವಾಗಿರಬೇಕಿದ್ದರೆ ಕಾಂಗ್ರೆಸ್ ಬೆಂಬಲಿಸಬೇಕು’ ಎಂದು ಅವರು ಮನವಿ ಮಾಡಿದರು.

ಭೂ ಸಂತ್ರಸ್ತರನ್ನು ಭೇಟಿಯಾದ ಸಿಎಂ

ಕುಡತಿನಿ (ಬಳ್ಳಾರಿ ಜಿಲ್ಲೆ): ಕುಡತಿನಿ ಭೂ ಸಂತ್ರಸ್ತ ಹೋರಾಟಗಾರರ ಪ್ರತಿಭಟನಾ ಸ್ಥಳಕ್ಕೆ ಶುಕ್ರವಾರ ಸಂಜೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಸ್ಯೆ ಪರಿಹರಿಸುವ ಬಗ್ಗೆ ಭರವಸೆ ನೀಡಿದರು.

‘ಕೈಗಾರಿಕೆ ಆರಂಭಿಸುವ ಉದ್ದೇಶಕ್ಕೆ ವಶಕ್ಕೆ ಪಡೆಯಲಾದ 11 ಸಾವಿರ ಎಕರೆ ಭೂಮಿಗೆ ನ್ಯಾಯಯುತ ಪರಿಹಾರ ನೀಡಬೇಕು. ಕೈಗಾರಿಕೆ ಆರಂಭಿಸಿ ಉದ್ಯೋಗ ನೀಡಬೇಕು ಇಲ್ಲವೇ ಭೂಮಿ ಹಿಂದಿರುಗಿಸಬೇಕು’ ಎಂದು ಆಗ್ರಹಿಸಿ ರೈತರು 692 ದಿನದಿಂದ ಕುಡುತಿನಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದ್ದಾರೆ.

‘ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ 17 ಪ್ರಕರಣ’

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯಾಸೀರ ಅಹ್ಮದ್ ಖಾನ್ ಪಠಾಣ ವಿರುದ್ಧ 17 ಪ್ರಕರಣಗಳಿವೆ. ಪೈಲ್ವಾನ್ ಪಠಾಣನನ್ನು ಚುನಾವಣೆಗೆ ನಿಲ್ಲಿಸಿರುವುದಾಗಿ ಕಾಂಗ್ರೆಸ್ಸಿಗರು ಹೇಳುತ್ತಾರೆ. ಇದು ಪ್ರಜಾಪ್ರಭುತ್ವದ ಚುನಾವಣೆ. ಕುಸ್ತಿ ಕಣವಲ್ಲ. ನಾವೇನು ಪಠಾಣ ಜೊತೆ ಕುಸ್ತಿ ಹಿಡಿಯಬೇಕಾ’ ಎಂದು ಶಾಸಕ ಬಸನಗೌಡ ಪಾ ಟೀಲ ಯತ್ನಾಳ ವಾಗ್ದಾಳಿ ನಡೆಸಿದರು.

ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರ ಶುಕ್ರವಾರ ಪ್ರಚಾರ ನಡೆಸಿದ ಅವರು, ‘ಹಿಂದೂಗಳೆಲ್ಲ ಒಗ್ಗಟ್ಟಾಗಬೇಕು. ಜಾತಿ ಆಧಾರದಲ್ಲಿ ಬೇರೆ ಬೇರೆಯಾದರೆ, ನಿಮ್ಮೆಲ್ಲರ ಆಸ್ತಿ ಮುಂದೆ ವಕ್ಫ್‌ಗೆ ಸೇರುತ್ತದೆ. ಈ ಸಲ ಬಿಜೆಪಿಗೆ ಮತ ನೀಡಿ, ವಕ್ಫ್ ಆಸ್ತಿ ಮಾಡಲು ಹೊರಟ ಸರ್ಕಾರಕ್ಕೆ ಕಠಿಣ ಸಂದೇಶ ರವಾನಿಸಿ’ ಎಂದರು. ‘ಪಂಚಮಸಾಲಿ ಮುಖಂಡರು ತಮ್ಮ ಸಮುದಾಯಕ್ಕೆ 2ಎ ಮೀಸಲಾತಿ ನೀಡುವಂತೆ ಕೋರಿದರೆ, ನೀತಿ ಸಂಹಿತೆ ಇರುವುದಾಗಿ ಮುಖ್ಯಮಂತ್ರಿ ಹೇಳುತ್ತಾರೆ. ಆದರೆ, ಒಳಮೀಸಲಾತಿಗೆ ಆಯೋಗ ಮಾಡಿದ್ದಾರೆ. ಅದಕ್ಕೆ ನೀತಿ ಸಂಹಿತೆ ಅಡ್ಡಿಯಾಗಲಿಲ್ಲವೇ’ ಎಂದು ಅವರು ಪ್ರಶ್ನಿಸಿದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ‘ನಾಲ್ಕು ದಿನದ ಜಾತ್ರೆ ಮಾಡಲು ಕಾಂಗ್ರೆಸ್ ಸರ್ಕಾರದ ಸಚಿವರು ಮತ್ತು ಶಾಸಕರು ಕ್ಷೇತ್ರಕ್ಕೆ ಬಂದಿದ್ದಾರೆ. ನಾನು ಮಾಡಿಸಿರುವ ರಸ್ತೆಯಲ್ಲೇ ಕಾಂಗ್ರೆಸ್ ನಾಯಕರು ಓಡಾಡುತ್ತಿದ್ದಾರೆ’ ಎಂದರು.

> **ಬಿಜೆಪಿಯ ಸುಳ್ಳು ಹಾಗೂ ಕಾಂಗ್ರೆಸ್‌ನ ಸತ್ಯದ ನಡುವೆ ಚುನಾವಣೆ ನಡೆದಿದೆ. ಮತ ಕೇಳುವ ನೈತಿಕತೆ ಬಿಜೆಪಿಗಿಲ್ಲ. ಗ್ಯಾರಂಟಿ ಯೋಜನೆಗಳು ಕೈ ಹಿಡಿಯಲಿವೆ**
> **ಸಲೀಂ ಅಹ್ಮದ್,** ವಿಧಾನಪರಿಷತ್ ಸದಸ್ಯ

ಪ್ರಚಾರಕ್ಕೆ ಆಹ್ವಾನ ಬಂದಿಲ್ಲ: ಸುಮಲತಾ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಬಿಜೆಪಿಯಿಂದ ಸೂಚನೆ ಬಂದರೆ ಉಪಚುನಾವಣೆ ಪ್ರಚಾರಕ್ಕೆ ಹೋಗುತ್ತೇನೆ. ಚನ್ನಪಟ್ಟಣದಲ್ಲಿ ಬಿಜೆಪಿ ಅಭ್ಯರ್ಥಿ ಇದ್ದಿದ್ದರೆ ಪ್ರಚಾರಕ್ಕೆ ಕರೆಯುತ್ತಿದ್ದರು. ಮೈತ್ರಿ ಅಭ್ಯರ್ಥಿ ಇರುವುದರಿಂದ ಕರೆದಿಲ್ಲವೆನಿಸುತ್ತೆ. ನಮಗೆ ಯಾರ ಬಗ್ಗೆಯೂ ದ್ವೇಷವಿಲ್ಲ’ ಎಂದು ಮಾಜಿ ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿ, ‘ಬಿಜೆಪಿ ನನ್ನನ್ನು ಕಡೆಗಣಿಸಿಲ್ಲ. ಅಗತ್ಯವಿದ್ದಾಗ ಪಕ್ಷದ ಕೆಲಸಕ್ಕೆ ಬಳಸಿಕೊಂಡಿದ್ದಾರೆ. ಮಂಡ್ಯದಲ್ಲಿ ಬಿಜೆಪಿ ಬಲಪಡಿಸಬೇಕೆಂದು ಹೈಕಮಾಂಡ್‌ಗೆ ತಿಳಿಸಿದ್ದೇನೆ. ನಾನು ಯಾವುದೇ ನಿರೀಕ್ಷೆಯೊಂದಿಗೆ ಪಕ್ಷಕ್ಕೆ ಬಂದಿಲ್ಲ. ಜನವರಿ ನಂತರ ಸಂಘಟನೆ ಕಾರ್ಯದಲ್ಲಿ ಸಕ್ರಿಯವಾಗುವೆ’ ಎಂದರು.

‘ಕಳೆದ ಚುನಾವಣೆಯಲ್ಲಿ ಪ್ರಧಾನಿ ಮೋದಿ ಮಾತಿಗೆ ಬೆಲೆ ಕೊಟ್ಟು ಕ್ಷೇತ್ರ ಬಿಟ್ಟುಕೊಟ್ಟೆ. ಐದು ವರ್ಷಗಳಲ್ಲಿ ಸ್ವಂತ ಕೆಲಸಗಳಿಗೆ ಸಮಯ ಸಿಕ್ಕಿರಲಿಲ್ಲ. ಕಾಲಿನ ಸಮಸ್ಯೆಗೆ ಚಿಕಿತ್ಸೆ ಪಡೆಯಲಷ್ಟೇ ಸಮಯ ತೆಗೆದುಕೊಂಡಿದ್ದೆ. ನನಗೆ ಅಧಿಕಾರ ಸಿಗಲೆಂದು ಬೆಂಬಲಿಗರು ಅಪೇಕ್ಷಿಸುವುದರಲ್ಲಿ ತಪ್ಪಿಲ್ಲ. 3–4 ತಿಂಗಳಲ್ಲೇ ಎಲ್ಲವೂ ಆಗಿಬಿಡಬೇಕೆಂದೇನಿಲ್ಲ. ನಮಗೂ ಸಮಯ ಬೇಕು, ಅವರಿಗೂ ಸಮಯ ಬೇಕು. ಹೀಗಾಗಿ ನಾನು ಯಾವುದನ್ನೂ ನೆಗೆಟಿವ್ ಆಗಿ ನೋಡುವುದಿಲ್ಲ’ ಎಂದರು.

‘ಯಾವತ್ತಿಗೂ ದರ್ಶನ್ ನನ್ನ ಮಗನೇ’



‘ನಟ ದರ್ಶನ್ ಪತ್ನಿ ನನ್ನ ಸಂಪರ್ಕದಲ್ಲಿದ್ದಾರೆ. ದರ್ಶನ್ ಆರೋಗ್ಯ ಸುಧಾರಿಸಬೇಕು. ಅವರಿಗೆ ಸಾಕಷ್ಟು ಸವಾಲುಗಳಿವೆ. ಆರೋಪಮುಕ್ತವಾಗಿ ಹೊರ ಬರುವ ನಂಬಿಕೆ ಇದೆ. ನಮ್ಮ ಸಂಬಂಧ ಹಾಗೇ ಇದೆ. ನನ್ನ ಜೀವ ಇರೋವರೆಗೂ ದರ್ಶನ್ ನನ್ನ ಮಗನೇ, ಎಲ್ಲಾ ಒಳ್ಳೆದಾಗಬೇಕು ಎಂದುಕೊಳ್ಳುವೆ’ ಎಂದು ತಿಳಿಸಿದರು.

ಸರ್ಕಾರ ತೆಗೆಯುವವರೆಗೂ ವಿರಮಿಸಲಾರೆ: ಎಚ್.ಡಿ ದೇವೇಗೌಡ

ಪ್ರಜಾವಾಣಿ ವಾರ್ತೆ

ಪಾಂಡವಪುರ: ‘ನನ್ನ 62 ವರ್ಷಗಳ ರಾಜಕೀಯ ಜೀವನದಲ್ಲಿ ಇಂಥ ರಾಜ್ಯ ಸರ್ಕಾರವನ್ನು ನೋಡಿಲ್ಲ. ರಾಜ್ಯದ ಉಳಿವಿಗಾಗಿ ಶಕ್ತಿಮೀರಿ ಹೋರಾಡುವೆ. ಈ ಸರ್ಕಾರವನ್ನು ತೆಗೆಯುವವರೆಗೂ ವಿರಮಿಸುವ ಪ್ರಶ್ನೆಯೇ ಇಲ್ಲ’ ಎಂದು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಹೇಳಿದರು.

‘ಕೊನೆಯುಸಿರು ಇರುವವರೆಗೂ ರಾಜಕೀಯ ಹೋರಾಟ ಮಾಡುತ್ತೇನೆ. ಇದು ದೇವೇಗೌಡನ ಹುಟ್ಟುಗುಣ. ರಾಜಕೀಯ ನಿವೃತ್ತಿ ಪಡೆಯುತ್ತೇನೆ ಅಂತ ಎಂದಿಗೂ ಹೇಳಿಲ್ಲ. ಈಗ ನಿಖಿಲ್ ಗೆಲುವಿಗಾಗಿ ಹೋರಾಟ ಮಾಡ್ತಿದ್ದೀನಿ’ ಎಂದು ಹೇಳಿದರು. ತಾಲ್ಲೂಕಿನ ಎಲೆಕೆರೆಯಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಒಡೆತನದ ಎಸ್.ಟಿ.ಜಿ. ಶಿಕ್ಷಣ ಸಂಸ್ಥೆಯ ಪದವಿ ಪೂರ್ವ ಕಾಲೇಜಿನ ವಸತಿ ನಿಲಯವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ದೇವೇಗೌಡ, ಕುಮಾರಸ್ವಾಮಿ ಮತ್ತು ನಿಖಿಲ್ ಕಣ್ಣೀರು ಹಾಕುತ್ತಾರೆ. ದೇಶಕ್ಕೆ ಅನ್ನ ಕೊಡುವ ರೈತನಿಗೆ ನೋವಾದಾಗ ಹೃದಯ ಮರುಗುತ್ತೆ. ಆಗ ಕಣ್ಣೀರು ಬರುತ್ತೆ. ನಮ್ಮ ವಂಶವೇ ಕಣ್ಣೀರು ಹಾಕುತ್ತದೆ’ ಎಂದರು.

‘ಕೊತ್ವಾಲ್ ರಾಮಚಂದ್ರನ ಬಳಿ ನೂರು ರೂಪಾಯಿಗೆ ಕೆಲಸ ಪ್ರಾರಂಭಿಸಿದ ಡಿ.ಕೆ.ಶಿವಕುಮಾರ್ ಅವರು ರೈತರು ಮತ್ತು ನಾಡಿನ ಜನತೆಗಾಗಿ ಯಾವತ್ತಾದರೂ ಕಣ್ಣೀರು ಹಾಕಿದ್ದನ್ನು ನೋಡಿದ್ದೀರಾ? ನೆಹರು, ಇಂದಿರಾ ಗಾಂಧಿ ಅಧ್ಯಕ್ಷರಾಗಿದ್ದ ಪಕ್ಷದಲ್ಲಿ ಅಧ್ಯಕ್ಷರಾಗಿರುವ ಅವರು ಕಣ್ಣೀರು ಹಾಕ್ತಾರಾ’ ಎಂದು ಕೇಳಿದರು.

‘ಡಿ.ಕೆ.ಶಿವಕುಮಾರ್ ಮತ್ತು ಎಚ್.ಡಿ.ಕುಮಾರಸ್ವಾಮಿ ವ್ಯಕ್ತಿತ್ವವನ್ನು ಹೋಲಿಸುವುದು ಬೇಡ. ರಾಮನಗರವನ್ನು ಕುಮಾರಸ್ವಾಮಿ ಜಿಲ್ಲೆಯನ್ನಾಗಿ ಘೋಷಿಸಿದರು. ಈಗ ಅದನ್ನು ಬೆಂಗಳೂರಿಗೆ ಸೇರಿಸಿದರೆ ಅನುಕೂಲವಾಗುತ್ತದೆ ಎಂದು ಶಿವಕುಮಾರ್ ಹೇಳುತ್ತಿದ್ದಾರೆ. ಅವರ ತಲೆಯಲ್ಲಿ ಏನೇನು ಇದೆಯೋ’ ಎಂದರು.

ಬಿಜೆಪಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪ

‘ಧರ್ಮದ ಆಧಾರದಲ್ಲಿ ದೇಶ ವಿಭಜನೆ ಯತ್ನ’

ಲೊಹರ್‌ದಗಾ, ಸಿಮ್‌ಡೆಗಾ, ಜಾರ್ಖಂಡ್ (ಪಿಟಿಐ): ‘ಬಿಜೆಪಿ ಪಕ್ಷವು ಮಣಿಪುರವನ್ನು ಹೊತ್ತಿ ಉರಿಯುವಂತೆ ಮಾಡಿದೆ. ಧರ್ಮದ ಆಧಾರದಲ್ಲಿ ಇಡೀ ದೇಶದಲ್ಲಿ ಜನರನ್ನು ವಿಭಜಿಸುವ ಯತ್ನ ಮಾಡುತ್ತಿದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಜಾರ್ಖಂಡ್ ವಿಧಾನಸಭಾ ಚುನಾವಣೆ ಸಂಬಂಧ ಲೊಹರ್‌ದಗಾದಲ್ಲಿ ಶುಕ್ರವಾರ ನಡೆದ ಬೃಹತ್ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ದೇಶದ ಶೇಕಡ 90ರಷ್ಟು ಜನರಿಗೆ ಸಿಗಬೇಕಿದ್ದ ಹಕ್ಕು ಹಾಗೂ ಸೌಲಭ್ಯಗಳಿಂದ ಬಿಜೆಪಿಯು ವಂಚಿತರನ್ನಾಗಿ ಮಾಡಿದೆ. ಹಿಂದೂ, ಮುಸಲ್ಮಾನರು, ಕ್ರೈಸ್ತರು ಹಾಗೂ ಸಿಖ್ ಸಮುದಾಯವರನ್ನು ಪರಸ್ಪರ ಎತ್ತಿ ಕಟ್ಟುತ್ತಿದ್ದಾರೆ. ಇತ್ತೀಚಿಗೆ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಜಾಟ್ ಹಾಗೂ ಜಾಟೇತರ ಸಮುದಾಯದವರನ್ನು ಎತ್ತಿ ಕಟ್ಟಿದರು. ಇದುವೇ ಬಿಜೆಪಿಯ ನಿಜವಾದ ಗುಣವಾಗಿದೆ’ ಎಂದು ತಿಳಿಸಿದರು.

‘ದೇಶದಲ್ಲಿ ಪ್ರೀತಿಯ ಸಂದೇಶವನ್ನು ಸಾರಲು ಕನ್ಯಾಕುಮಾರಿಯಿಂದ ಕಾಶ್ಮೀರದ ತನಕ 4 ಸಾವಿರ ಕಿ.ಮೀ ಪಾದಯಾತ್ರೆ ನಡೆಸಿದ್ದನ್ನು ನೆನಪಿಸಿಕೊಂಡ ರಾಹುಲ್ ಗಾಂಧಿ, ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯುವ ಪ್ರಯತ್ನ ನಡೆಸಿದ್ದೆನು’ ಎಂದು ಹೇಳಿದರು.

‘ನಾನು ಬುಡಕಟ್ಟು ಸಮುದಾಯ, ದಲಿತರ ವಿಚಾರವಾಗಿ ಮಾತನಾಡಿದ ತಕ್ಷಣ, ದೇಶವನ್ನು ಇಬ್ಭಾಗ ಮಾಡುತ್ತಿದ್ದೇನೆ ಎಂದು ಬಿಜೆಪಿ ಆರೋಪಿಸುತ್ತಿದೆ. ನಾನು ದೇಶವನ್ನು ಒಗ್ಗೂಡಿಸಿ, ಬಲಪಡಿಸಲು ಇಲ್ಲಿ ನಿಂತಿದ್ದೇನೆ. ನಾನು ದೇಶದ ಶೇಕಡ 90ರಷ್ಟು ಜನರ ವಿಚಾರವಾಗಿ ಮಾತನಾಡುತ್ತಿದ್ದೇನೆ. ಈ ಕೆಲಸವನ್ನು ಮುಂದುವರಿಸುತ್ತೇನೆ’ ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

‘ಉದ್ಯಮಿಗಳ ಸಾಲಮನ್ನಾ’



‘ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು 25 ಉದ್ಯಮಿಗಳ ₹16 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಆದರೆ, ರೈತರಿಗೆ ನೆರವಾಗುವ ಉದ್ದೇಶದಿಂದ ಯುಪಿಎ ಅವಧಿಯಲ್ಲಿ ಮಾಡಿದ್ದ ₹72 ಸಾವಿರ ಕೋಟಿ ಸಾಲಮನ್ನಾದ ಕುರಿತು ಆರೋಪ ಮಾಡುತ್ತಿದೆ’ ಎಂದು ಆರೋಪಿಸಿದರು. ಜಾರ್ಖಂಡ್‌ನಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ರೈತರ ಸಾಲಮನ್ನಾ ಮಾಡಿದೆಯಾ..? ಮಾಡಿಲ್ಲ. ಏಕೆಂದರೆ ನೀವೆಲ್ಲರೂ, ಬುಡಕಟ್ಟು, ದಲಿತ ಹಾಗೂ ಹಿಂದುಳಿದ ಸಮುದಾಯದವರು. ಬಿಜೆಪಿ ಎಂದಿಗೂ ನಿಮ್ಮ ಸಾಲಮನ್ನಾ ಮಾಡುವುದಿಲ್ಲ’ ಎಂದರು.


ಸಿಮ್‌ಡೆಗಾದಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, ‘ರಾಜ್ಯದ ಬುಡಕಟ್ಟು ಸಮುದಾಯದಿಂದ ಬಿಜೆಪಿಯು ಜಲ್, ಜಂಗಲ್, ಜಮೀನು (ನೀರು, ಅರಣ್ಯ, ಭೂಮಿ) ಕಿತ್ತುಕೊಳ್ಳಲಿದೆ’ ಎಂದು ದೂರಿದರು.

ಈ ಚುನಾವಣೆಯು ಇಂಡಿಯಾ ಒಕ್ಕೂಟ ಹಾಗೂ ಬಿಜೆಪಿ–ಆರ್‌ಎಸ್‌ಎಸ್ ಸಿದ್ಧಾಂತದ ನಡುವಿನ ಚುನಾವಣೆಯಾಗಿದೆ ಎಂದು ಪ್ರತಿಪಾದಿಸಿದರು.

ಶಿಗ್ಗಾವಿ: 294 ಜನರಿಂದ ಮತದಾನ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಶಿಗ್ಗಾವಿ ಕ್ಷೇತ್ರದ ಮತದಾನ ಪ್ರಕ್ರಿಯೆ ಶುರುವಾಗಿದೆ. 85 ವರ್ಷ ಮೇಲ್ಪಟ್ಟ ಹಿರಿಯರು ಮತ್ತು ಅಂಗವಿಕಲರು ಸೇರಿ 294 ಮಂದಿ ಈಗಾಗಲೇ ಮತದಾನ ಮಾಡಿದ್ದಾರೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.



‘ಆಯೋಗದ ಸೂಚನೆಯಂತೆ ಮನೆಯಿಂದ ಮತದಾನ ಮಾಡಲು ನವೆಂಬರ್ 6 ಹಾಗೂ 7ರಂದು ಅವಕಾಶ ನೀಡಲಾಗಿತ್ತು. 203 ಹಿರಿಯ ನಾಗರಿಕರು ಮತ್ತು 91 ಅಂಗವಿಕಲರು ಮತದಾನ ಮಾಡಿದ್ದಾರೆ. ಮನೆ ಮನೆ ಮತದಾನ ಕಾರ್ಯಕ್ಕೆ 12 ತಂಡರ ರಚಿಸಲಾಗಿತ್ತು’ ಎಂದು ಅವರು ತಿಳಿಸಿದ್ದಾರೆ.

ಸಾಕ್ಷ್ಯ ಒದಗಿಸಿ: 'ಸುಪ್ರೀಂ'

ಮಣಿಪುರ ಹಿಂಸಾಚಾರದಲ್ಲಿ ಸಿ.ಎಂ ಬಿರೇನ್ ಪಾತ್ರ: ಕುಕಿ ಸಂಘಟನೆ ಆರೋಪ

ಪ್ರಜಾವಾಣಿ ವಾರ್ತೆ



ನವದೆಹಲಿ: 'ಸುಪ್ರೀಂ ಕೋರ್ಟ್‌ಗೆ ಸಾಂವಿಧಾನಿಕ ಹೊಣೆಗಾರಿಕೆ ಇದೆ. ಹೀಗಾಗಿ, ಮಣಿಪುರದಲ್ಲಿನ ಹಿಂಸಾಚಾರಕ್ಕೆ ಸಂಬಂಧಿಸಿದ ಯಾವುದೇ ವಿಚಾರಗಳನ್ನು ಮರೆಮಾಚುವ ಪ್ರಯತ್ನಗಳನ್ನು ತಾನು ಮೆಚ್ಚುವುದಿಲ್ಲ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ರಾಜ್ಯದಲ್ಲಿ ಕಂಡುಬಂದ ಹಿಂಸಾಚಾರದಲ್ಲಿ ಮಣಿಪುರ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರ ಪಾತ್ರವಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ವಿಡಿಯೊಗಳ ಸತ್ಯಾಸತ್ಯತೆ ಪರಿಶೀಲನೆಗೆ ಒಪ್ಪಿಗೆ ನೀಡಿದ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ಅಲ್ಲದೇ, ಮುಖ್ಯಮಂತ್ರಿ ವಿರುದ್ಧದ ಆರೋಪಕ್ಕೆ ಸಂಬಂಧಿಸಿದ ವಿಡಿಯೊ ತುಣುಕನ್ನು ದೃಢೀಕರಿಸುವ ಸಾಕ್ಷ್ಯಗಳನ್ನು ಒದಗಿಸುವಂತೆ 'ಕುಕಿ ಆರ್ಗನೈಸೇಷನ್ ಫಾರ್ ಹ್ಯೂಮನ್ ರೈಟ್ಸ್ ಟ್ರಸ್ಟ್'ಗೆ ನ್ಯಾಯಪೀಠ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಈ ಕುರಿತ ಅರ್ಜಿ ವಿಚಾರಣೆ ನಡೆಸಿತು. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರೂ ಪೀಠದಲ್ಲಿದ್ದಾರೆ.

'ನ್ಯಾಯಮೂರ್ತಿಗಳು ದಂತಗೋಪುರದಲ್ಲಿ ಕುಳಿತಿರುವುದಿಲ್ಲ. ಈ ಕಾರಣಕ್ಕಾಗಿಯೇ, ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದ ಅರ್ಜಿಯನ್ನು ಅವರು ವಜಾಗೊಳಿಸಿಲ್ಲ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಉದ್ದೇಶಿಸಿ ಸಿಜೆಐ ಚಂದ್ರಚೂಡ್ ಹೇಳಿದರು.

ಇದಕ್ಕೂ ಮುನ್ನ ವಿಚಾರಣೆ ವೇಳೆ, 'ಕುಕಿ ಆರ್ಗನೈಸೇಷನ್ ಫಾರ್ ಹ್ಯೂಮನ್ ರೈಟ್ಸ್ ಟ್ರಸ್ಟ್' ಪರ ಹಾಜರಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್, ಮುಖ್ಯಮಂತ್ರಿ ಸಿಂಗ್ ವಿರುದ್ಧದ ಆರೋಪಕ್ಕೆ ಸಂಬಂಧಿಸಿ 'ವಿಷಲ್ ಬ್ಲೋವರ್'ವೊಬ್ಬರು ಒದಗಿಸಿದ್ದ ವಿಡಿಯೊ ಕುರಿತು ಪ್ರಸ್ತಾಪಿಸಿದರು.

ಮುಖ್ಯಾಂಶಗಳು
- ಎಫ್‌ಎಸ್‌ಎಲ್‌ನಿಂದ ದೃಢೀಕರಣ ಸಾಧ್ಯ: ಪ್ರಶಾಂತ ಭೂಷಣ್
- 'ವಿಷಲ್ ಬ್ಲೋವರ್' ಒದಗಿಸಿದ್ದ ವಿಡಿಯೊ ಕುರಿತು ಪ್ರಸ್ತಾಪ
- ವಿಡಿಯೊದ ಸ್ವರೂಪ ಮತ್ತು ಸತ್ಯಾಸತ್ಯತೆ ಪರಿಶೀಲನೆಗೆ ಆದ್ಯತೆ: ಪೀಠ

'ದಂಗೆಗೆ ನಾನೇ ಪ್ರಚೋದನೆ ನೀಡಿದ್ದು' ಎಂಬುದಾಗಿ ಸಿ.ಎಂ ಬಿರೇನ್ ಸಿಂಗ್ ಹೇಳುತ್ತಿರುವಂತಹ ದೃಶ್ಯಗಳು ವಿಡಿಯೊದಲ್ಲಿವೆ. ಸಿಂಗ್ ಅವರೇ ಶಸ್ತ್ರಾಸ್ತ್ರಗಳ ಲೂಟಿಗೆ ಅನುಮತಿ ನೀಡಿದ್ದು ಹಾಗೂ ಅವುಗಳನ್ನು ಲೂಟಿ ಮಾಡಿದವರನ್ನು ರಕ್ಷಿಸಿದ್ದು' ಎಂದು ಪೀಠಕ್ಕೆ ತಿಳಿಸಿದರು.

ಮಣಿಪುರ ಸರ್ಕಾರ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ವಿಷಯ ಕುರಿತು ತನಿಖೆ ನಡೆಯುತ್ತಿದೆ' ಎಂದರು.

'ಮಣಿಪುರ ಸರ್ಕಾರ ನಡೆಸುತ್ತಿರುವ ತನಿಖೆಯೇ ಪ್ರಶ್ನಾರ್ಹವಾಗಿದೆ. 'ವಿಷಲ್ ಬ್ಲೋವರ್' ಸ್ವತಃ ಈ ವಿಡಿಯೊ ತುಣುಕುಗಳನ್ನು ರಾಜ್ಯ ಸರ್ಕಾರ ನೇಮಿಸಿದ ನ್ಯಾಯಮೂರ್ತಿ ಲಂಬಾ ಆಯೋಗಕ್ಕೆ ಜುಲೈನಲ್ಲಿ ನೀಡಿದ್ದಾರೆ. ಈ ವರೆಗೆ ಯಾವುದೇ ಕ್ರಮವಾಗಿಲ್ಲ' ಎಂದು ಪ್ರಶಾಂತ್ ಭೂಷಣ್ ಹೇಳಿದರು.

ಆಗ, 'ಅರ್ಜಿದಾರರು ಸುಪ್ರೀಂ ಕೋರ್ಟ್ ಬದಲಾಗಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕಿತ್ತು' ಎಂದು ಮೆಹ್ತಾ ವಾದಿಸಿದರು.

'ಇದು ವಿಶೇಷ ಪ್ರಕರಣ. ಈ ಪ್ರಕರಣ ಕುರಿತು ಸುಪ್ರೀಂ ಕೋರ್ಟ್ ಈಗಾಗಲೇ ಒಂದು ಸಮಿತಿಯನ್ನು ನೇಮಕ ಮಾಡಿದೆ' ಎಂದು ಭೂಷಣ್ ಹೇಳಿದರು.

ಆಗ, ವಿಡಿಯೊದಲ್ಲಿನ ದೃಶ್ಯಗಳನ್ನು ದೃಢೀಕರಿಸುವ ಸಾಕ್ಷ್ಯಗಳನ್ನು ಸಲ್ಲಿಸುವಂತೆ ಪ್ರಶಾಂತ್ ಭೂಷಣ್ ಅವರಿಗೆ ಪೀಠ ಸೂಚಿಸಿತು.

ಮಣಿಪುರ: ಮಹಿಳೆ ಮೇಲೆ ಅತ್ಯಾಚಾರ, ಬೆಂಕಿ ಹಚ್ಚಿ ಹತ್ಯೆ

ಪ್ರಜಾವಾಣಿ ವಾರ್ತೆ



ಗುವಾಹಟಿ: ಮಣಿಪುರದ ಸಂಘರ್ಷ ಪೀಡಿತ ಜಿರೀಬಾಮ್ ಜಿಲ್ಲೆಯಲ್ಲಿ ಗುರುವಾರ ರಾತ್ರಿ ಶಸ್ತ್ರಸಜ್ಜಿತ ವ್ಯಕ್ತಿಗಳು ಹಮಾರ್ ಸಮುದಾಯಕ್ಕೆ ಸೇರಿದ ಶಿಕ್ಷಕಿಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ನಂತರ ಆಕೆಗೆ ಬೆಂಕಿ ಹಚ್ಚಿ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಹತ್ಯೆಯಾದವರನ್ನು ಝೊಸಾಂಗ್ ಕಿಮ್ ಎಂದು ಗುರುತಿಸಲಾಗಿದ್ದು, ಅವರಿಗೆ ಮೂವರು ಮಕ್ಕಳಿದ್ದಾರೆ.

'ಗುರುವಾರ ರಾತ್ರಿ ಅಪರಿಚಿತ ವ್ಯಕ್ತಿಗಳು ಜೈರೋನ್ ಹ್ಮಾರ್ ಗ್ರಾಮಕ್ಕೆ ಗುಂಡಿನ ದಾಳಿ ನಡೆಸಿದ್ದಲ್ಲದೇ, ಹಲವು ಮನೆಗಳಿಗೆ ಬೆಂಕಿಯನ್ನೂ ಹಚ್ಚಿದ್ದಾರೆ. ಸುಟ್ಟು ಕರಕಲಾಗಿದ್ದ 31 ವರ್ಷ ವಯಸ್ಸಿನ ಮಹಿಳೆಯ ದೇಹವನ್ನು ಸ್ಥಳೀಯ ಸಂಘಟನೆಗಳು ಹೊರತೆಗೆದಿವೆ' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹಮಾರ್ ಸಮುದಾಯವು ಜೋಮಿ-ಕುಕಿ ಬುಡಕಟ್ಟು ಸಮುದಾಯದೊಂದಿಗೆ ಗುರುತಿಸಿಕೊಂಡಿದೆ.

ಮಹಿಳೆಯ ಪತಿ ಪೊಲೀಸರಿಗೆ ದೂರು ನೀಡಿದ್ದು, 'ಗುರುವಾರ ರಾತ್ರಿ 9 ಗಂಟೆ ಸುಮಾರಿಗೆ ಗ್ರಾಮಕ್ಕೆ ನುಗ್ಗಿದ ಸಂಪೂರ್ಣ ಶಸ್ತ್ರಸಜ್ಜಿತ ಮೈತೇಯಿ ಉಗ್ರರ ಗುಂಪು ನನ್ನ ಮನೆಯನ್ನು ಲೂಟಿ ಮಾಡಿದೆ. ಉಗ್ರರು ಪತ್ನಿಯ ಮೇಲೆ ಅತ್ಯಾಚಾರ ಎಸಗಿ, ಸಜೀವವಾಗಿ ದಹಿಸಿದರು. ಮನೆಗೂ ಬೆಂಕಿ ಹಾಕಿದ್ದಾರೆ' ಎಂದು ತಿಳಿಸಿದ್ದಾರೆ.

'ಮೈತೇಯಿ ಸಮುದಾಯಕ್ಕೆ ಸೇರಿದ ಶಸ್ತ್ರಸಜ್ಜಿತ ಜನರ ಗುಂಪು ಜಿರೀಬಾಮ್ ಜಿಲ್ಲೆಯ ಝೈರಾನ್ ಗ್ರಾಮಕ್ಕೆ ನುಗ್ಗಿ ಮನೆಗಳಿಗೆ ಬೆಂಕಿ ಹಚ್ಚಿ ಗುಂಡಿನ ದಾಳಿ ನಡೆಸಿದೆ' ಎಂದು ಕುಕಿ-ಝೋ ಸಮುದಾಯದ ಸಂಘಟನೆಯಾದ ಸ್ಥಳೀಯ ಬುಡಕಟ್ಟು ಮುಖಂಡರ ವೇದಿಕೆ (ಐಟಿಎಲ್‌ಎಫ್) ಹೇಳಿಕೆಯಲ್ಲಿ ತಿಳಿಸಿದೆ.

'ದಾಳಿ ನಡೆಸಿದ ಸಂದರ್ಭದಲ್ಲಿ ಗುಂಡು ಮಹಿಳೆಯ ತೊಡೆಗೆ ತಾಗಿತ್ತು. ಆಕೆಯ ಪತಿ ಪೋಷಕರು ಹಾಗೂ ಮೂವರು ಮಕ್ಕಳೊಂದಿಗೆ ಅಲ್ಲಿಂದ ಓಡಿ ಹೋದರು. ಆದರೆ, ದಾಳಿಕೋರರು ಆಕೆಯನ್ನು ಹಿಡಿದರು' ಎಂದು ಆಕೆಯ ಪತಿ ಮಾಹಿತಿ ನೀಡಿರುವುದಾಗಿ ಸಂಘಟನೆ ತಿಳಿಸಿದೆ.

ಆದರೆ, ಈ ಘಟನೆ ಬಗ್ಗೆ ಮಣಿಪುರ ಪೊಲೀಸರು ಈವರೆಗೆ ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ, ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಸಿಲ್ಚರ್‌ನ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಕಳುಹಿಸಲು ಅನುಮತಿ ಕೋರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಪತ್ರ ಬರೆದಿದ್ದಾರೆ.

ಮಣಿಪುರ ರಾಜ್ಯದಲ್ಲಿ ಕಳೆದ ವರ್ಷದ ಮೇ ತಿಂಗಳಲ್ಲಿ ಆರಂಭವಾಗಿರುವ ಮೈತೇಯಿ-ಕುಕಿ ಸಮುದಾಯಗಳ ನಡುವಿನ ಸಂಘರ್ಷ ಇನ್ನೂ ಮುಂದುವರಿದಿದೆ. ಸಂಘರ್ಷದಲ್ಲಿ 240 ಮಂದಿ ಮೃತಪಟ್ಟಿದ್ದು, 60 ಸಾವಿರಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ.

ಅಂಗವಿಕಲರಿಗೆ ಸೌಲಭ್ಯ: 'ಸುಪ್ರೀಂ' ಗಡುವು

ನವದೆಹಲಿ(ಪಿಟಿಐ): ಸಾರ್ವಜನಿಕ ಸ್ಥಳಗಳಿಗೆ ಅಂಗವಿಕಲರು ಸುಲಭವಾಗಿ ಪ್ರವೇಶಿಸುವಂತಾಗಬೇಕು. ಈ ಉದ್ದೇಶಕ್ಕಾಗಿ ರೂಪಿಸಿರುವ 'ಕಡ್ಡಾಯ ಮಾನದಂಡ'ಗಳನ್ನು ಮೂರು ತಿಂಗಳ ಒಳಗಾಗಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಈ ಮಾನದಂಡಗಳನ್ನು ಜಾರಿಗೊಳಿಸುವಂತೆ 2017ರ ಡಿಸೆಂಬರ್ 15ರಂದು ತೀರ್ಪು ನೀಡಿದ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ, ಅನುಷ್ಠಾನವು ನಿಧಾನಗತಿಯಲ್ಲಿ ಆಗುತ್ತಿದೆ ಎಂಬ ಕಾರಣಕ್ಕೆ ಸುಪ್ರೀಂ ಕೋರ್ಟ್ ಮತ್ತೊಮ್ಮೆ ನಿರ್ದೇಶನ ನೀಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ ಅರ್ಜಿ ವಿಚಾರಣೆ ನಡೆಸಿತು. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರು ಪೀಠದಲ್ಲಿದ್ದರು.

ಈ ಸಂಬಂಧ ರಾಜೀವ್ ರತೂರಿ ಎಂಬುವವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಪೀಠವು ಮುಂದಿನ ಮಾರ್ಚ್ 7ಕ್ಕೆ ಮುಂದೂಡಿತು.

ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ

ಕಟಕ್(ಪಿಟಿಐ): ಒಡಿಶಾದ ಕಟಕ್ ಜಿಲ್ಲೆಯಲ್ಲಿ ಕಾಲೇಜು ವಿದ್ಯಾರ್ಥಿನಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಮತ್ತು ಅಶ್ಲೀಲ ವಿಡಿಯೊ ಮಾಡಿದ ಆರೋಪದಡಿ 6 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

'ತನ್ನ ಪ್ರಿಯಕರ ಸೇರಿದಂತೆ ಆರು ಮಂದಿ ತನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ವಿದ್ಯಾರ್ಥಿನಿಯು ಬಾದಾಂಬಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ' ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಅಲಿಗಢ ಮುಸ್ಲಿಂ ವಿ.ವಿ 'ಅಲ್ಪಸಂಖ್ಯಾತ ಸ್ಥಾನ' ಅಬಾಧಿತ

ಒಂದನೇ ಪುಟದಿಂದ...

ಪೀಠದಲ್ಲಿದ್ದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಪರವಾಗಿ ಸಿಜೆಐ ಚಂದ್ರಚೂಡ್ ಅವರು ಬಹುಮತದ ತೀರ್ಪು ಬರೆದಿದ್ದಾರೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ, ದೀಪಂಕರ್ ದತ್ತ ಅವರು ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿ, ತೀರ್ಪು ನೀಡಿದ್ದಾರೆ. ನ್ಯಾಯಮೂರ್ತಿ ಸತೀಶ್ಚಂದ್ರ ಶರ್ಮಾ ಕೂಡ ಪ್ರತ್ಯೇಕ ತೀರ್ಪು ನೀಡಿದ್ದು, ಬಹುಮತದ ತೀರ್ಪನ್ನು ಅನುಮೋದಿಸಿಯೂ ಇಲ್ಲ ಅಥವಾ ಅದಕ್ಕೆ ಅಸಮ್ಮತಿಯನ್ನೂ ಸೂಚಿಸಿಲ್ಲ.

'ಎಎಂಯು ಕೇಂದ್ರೀಯ ವಿಶ್ವವಿದ್ಯಾಲಯವಾಗಿದೆ. ಹೀಗಾಗಿ ಇದನ್ನು ಅಲ್ಪಸಂಖ್ಯಾತ ಸಂಸ್ಥೆ ಎಂಬುದಾಗಿ ಪರಿಗಣಿಸಲು ಸಾಧ್ಯವಿಲ್ಲ' ಎಂದು ಅಜೀಜ್ ಬಾಷಾ ವರ್ಸಸ್ ಕೇಂದ್ರ ಸರ್ಕಾರ ಪ್ರಕರಣದಲ್ಲಿ 1967ರಲ್ಲಿ ಐವರು ಸದಸ್ಯರ ಸಂವಿಧಾನಪೀಠವು ತೀರ್ಪು ನೀಡಿತ್ತು.

'ಇದೇ ವಿಚಾರವಾಗಿ ಅಲಹಾಬಾದ್ ಹೈಕೋರ್ಟ್ 2006ರಲ್ಲಿ ನೀಡಿದ್ದ ತೀರ್ಪು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಕೂಡ ಸಾಮಾನ್ಯ ಪೀಠ ನಡೆಸುವುದು. ಹೀಗಾಗಿ, ಈ ವಿಚಾರಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಾಮಾನ್ಯ ಪೀಠದ ಮುಂದೆ ಮಂಡಿಸಬೇಕು' ಎಂದು ಸಿಜೆಐ ಸೂಚಿಸಿದರು.

ಅಲ್ಪಸಂಖ್ಯಾತ ವಿ.ವಿಯಲ್ಲ ನ್ಯಾ. ದೀಪಾಂಕರ್ ದತ್ತ

ನ್ಯಾಯಮೂರ್ತಿ ದೀಪಾಂಕರ್ ದತ್ತ ಅವರು ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಅಲ್ಪಸಂಖ್ಯಾತ ಸಂಸ್ಥೆಯ ಸ್ಥಾನಮಾನ ನೀಡುವುದನ್ನು ವಿರೋಧಿಸಿ ತಮ್ಮ ತೀರ್ಪು ಬರೆದಿದ್ದಾರೆ.

'ಅಲಿಗಢ ವಿಶ್ವವಿದ್ಯಾಲಯಕ್ಕೆ ಅಲ್ಪಸಂಖ್ಯಾತ ಸಂಸ್ಥೆ ಎನ್ನುವ ಸ್ಥಾನ ನೀಡಲು ಸಾಧ್ಯವಿಲ್ಲ. ಈ ವಿಶ್ವವಿದ್ಯಾಲಯವನ್ನು ಯಾವುದೇ ಧರ್ಮದ ಜನರು ಸ್ಥಾಪಿಸಿಲ್ಲ ಅಥವಾ ಯಾವುದೇ ಅಲ್ಪಸಂಖ್ಯಾತ ಧರ್ಮದ ಜನರೂ ಈ ವಿಶ್ವವಿದ್ಯಾಲಯದ ಆಡಳಿತ ನಡೆಸುತ್ತಿಲ್ಲ' ಎಂದರು.

'ಸಂವಿಧಾನದ 30(1) ವಿಧಿ ಅಡಿಯಲ್ಲಿ ರಕ್ಷಣೆ ಪಡೆಯಲು ಬಯಸುತ್ತಿರುವ ಮೇಲ್ಮನವಿದಾರರ ಬಳಿ ತಮ್ಮ ವಾದವನ್ನು ಪುಷ್ಠೀಕರಿಸಲು ನೆರವಾಗುವ ಯಾವುದೇ ಐತಿಹಾಸಿಕ, ಕಾನೂನಾತ್ಮಕ ಅಥವಾ ತಾತ್ವಿಕ ಆಧಾರಗಳಿಲ್ಲ' ಎಂದರು.

'30ನೇ ವಿಧಿಯು ಅಲ್ಪಸಂಖ್ಯಾತರ ಕೇರಿ ನಿರ್ಮಾಣಕ್ಕೆ ಇರುವುದಲ್ಲ'

ಸಂವಿಧಾನದ 30ನೇ ವಿಧಿಯ ಅಡಿಯಲ್ಲಿ ಅಲ್ಪಸಂಖ್ಯಾತ ಸಮುದಾಯವು ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತ ನಿರ್ವಹಣೆ ಹಕ್ಕನ್ನು ಪ್ರತಿಪಾದಿಸಬೇಕಾದರೆ, ಆ ಸಂಸ್ಥೆಯನ್ನು ಸಮುದಾಯವೇ ಸ್ಥಾಪಿಸಿರಬೇಕು ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಶುಕ್ರವಾರ ಅಭಿಪ್ರಾಯ ಪಟ್ಟಿದ್ದಾರೆ.

ಸಂವಿಧಾನದ 30ನೇ ವಿಧಿಯು ಅಲ್ಪಸಂಖ್ಯಾತರಿಗಾಗಿಯೇ ಪ್ರತ್ಯೇಕ ಪ್ರದೇಶವನ್ನು (ಕೇರಿ) ನಿರ್ಮಿಸುವುದಕ್ಕಾಗಿ ಇರುವುದಲ್ಲ ಎಂದು ಪ್ರತಿಪಾದಿಸಿರುವ ಅವರು, 'ಮುಸ್ಲಿಮರಿಗೆ ಶಿಕ್ಷಣ ಮತ್ತು ಜ್ಞಾನ ಸಂಪಾದನೆಗಾಗಿ ಈ ದೇಶದಲ್ಲಿ 'ಸುರಕ್ಷಿತ ಜಾಗ'ದ ಅಗತ್ಯವಿದೆ ಎಂದು ಭಾವಿಸುವುದು ಸಂಪೂರ್ಣ ತಪ್ಪು' ಎಂದು ಅವರು ಹೇಳಿದ್ದಾರೆ.

'ರಾಷ್ಟ್ರೀಯ ಮಹತ್ವದ ಸಂಸ್ಥೆಗಳು ಯಾವಾಗಲೂ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡುತ್ತವೆ ಮತ್ತು ಇವುಗಳು ಕಲಿಕೆಯ ವೈವಿಧ್ಯಮಯ ಕೇಂದ್ರಗಳಾಗಿವೆ' ಎಂದು ಶರ್ಮಾ ಅವರು 193 ಪುಟಗಳ ತಮ್ಮ ಪ್ರತ್ಯೇಕ ಆದೇಶದಲ್ಲಿ ತಿಳಿಸಿದ್ದಾರೆ.

'ಸಿಜೆಐ ಇಲ್ಲದೇ ಇದ್ದ ಇಬ್ಬರು ನ್ಯಾಯಮೂರ್ತಿಗಳ ಪೀಠವು ಈ ವಿಚಾರವನ್ನು ನೇರವಾಗಿ ಏಳು ಸದಸ್ಯರ ಪೀಠಕ್ಕೆ ಶಿಫಾರಸು ಮಾಡಬಾರದಿತ್ತು' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಪೀಠ ಹೇಳಿದ್ದೇನು
- ಎಎಂಯು ಅನ್ನು ಸಂಸತ್‌ನ ಕಾಯ್ದೆ ಮೂಲಕ ಸ್ಥಾಪಿಸಲಾಗಿದೆ ಎಂದ ಮಾತ್ರಕ್ಕೆ ಅದರ ಅಲ್ಪಸಂಖ್ಯಾತ ಗುಣಲಕ್ಷಣಕ್ಕೆ/ಸ್ಥಾನಮಾನಕ್ಕೆ ಧಕ್ಕೆ ಆಗುವುದಿಲ್ಲ. ವಿ.ವಿಯ ಸ್ಥಾಪನೆ ಕುರಿತಾದ ಇತರ ಸಂಗತಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ
- ಕಾಲೇಜೊಂದನ್ನು ವಿಶ್ವವಿದ್ಯಾಲಯವಾಗಿ ಪರಿವರ್ತನೆ ಮಾಡಿದ ಸಂದರ್ಭದಲ್ಲಿ, ಆ ಸಂಸ್ಥೆ ಹೊಂದಿದ್ದ ಅಲ್ಪಸಂಖ್ಯಾತ ಸ್ಥಾನಮಾನವನ್ನು ತೆಗೆದು ಹಾಕಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು
- ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಆಡಳಿತ ಅಲ್ಪಸಂಖ್ಯಾತ ಸಮುದಾಯದ ಬಳಿಯೇ ಇರಬೇಕು ಎಂದೇನಿಲ್ಲ. ಇದೇ ವೇಳೆ, ಸಂಸ್ಥೆಯು ಅಲ್ಪಸಂಖ್ಯಾತ ಗುಣಲಕ್ಷಣ ಕಳೆದುಕೊಂಡಿದೆಯೇ ಹಾಗೂ ಅದು ಕೇವಲ ಅಲ್ಪಸಂಖ್ಯಾತರ ಹಿತಾಸಕ್ತಿ ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯಾಚರಿಸುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು
- ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯು ಜಾತ್ಯತೀತ ಶಿಕ್ಷಣಕ್ಕೆ ಒತ್ತು ನೀಡಬಹುದು. ಈ ಉದ್ದೇಶ ಈಡೇರಿಕೆಗಾಗಿ ಆಡಳಿತದಲ್ಲಿ ಅಲ್ಪಸಂಖ್ಯಾತ ಸಮುದಾಯದವರೇ ಇರುವ ಅಗತ್ಯವಿಲ್ಲ
- ಸಂವಿಧಾನದ 30(1) ವಿಧಿಯಲ್ಲಿ ಉಲ್ಲೇಖಿಸಿರುವಂತೆ, ಸಮುದಾಯದ ಶಿಕ್ಷಣಕ್ಕಾಗಿ ಸ್ಥಾಪಿಸಿರುವ ಅಲ್ಪಸಂಖ್ಯಾತ ಶೈಕ್ಷಣಿಕ ಸಂಸ್ಥೆ ಎಂಬುದನ್ನು ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತರು ಸಾಬೀತುಪಡಿಸಬೇಕು. ಈ ವಿಧಿಯಡಿ ಖಾತ್ರಿಪಡಿಸಲಾಗಿರುವ ಹಕ್ಕು ಸಂವಿಧಾನ ಜಾರಿಗೆ ಬರುವ ಮುನ್ನ ಸ್ಥಾಪಿಸಲಾಗಿರುವ ವಿಶ್ವವಿದ್ಯಾಲಯಗಳಿಗೆ ಅನ್ವಯವಾಗುತ್ತದೆ

ದ್ವಿಸದಸ್ಯ ಪೀಠದ ಆದೇಶ ತಪ್ಪು: ನ್ಯಾ. ಸೂರ್ಯಕಾಂತ

ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಅಲ್ಪಸಂಖ್ಯಾತರ ಸಂಸ್ಥೆ ಸ್ಥಾನಮಾನ ನೀಡುವ ಪ್ರಕರಣಕ್ಕೆ ಸಂಬಂಧಿಸಿದಂತೆ 1981ರಲ್ಲಿ ಸುಪ್ರೀಂ ಕೋರ್ಟ್‌ನ ಇಬ್ಬರು ನ್ಯಾಯಮೂರ್ತಿಗಳ ಪೀಠವು ನೀಡಿದ್ದ ಆದೇಶವು 'ಕಾನೂನಿನ ದೃಷ್ಟಿಯಲ್ಲಿ ತಪ್ಪು' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಸೂರ್ಯಕಾಂತ ಹೇಳಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ 1967ರಲ್ಲಿ ನೀಡಿದ್ದ ತೀರ್ಪನ್ನು ಇಬ್ಬರು ನ್ಯಾಯಮೂರ್ತಿಗಳ ಪೀಠವು 1981ರಲ್ಲಿ ಪ್ರಶ್ನಿಸಿತ್ತು. ಮಾತ್ರವಲ್ಲ, ಈ ಪ್ರಕರಣವನ್ನು ಏಳು ಸದಸ್ಯರನ್ನೊಳಗೊಂಡ ಪೀಠಕ್ಕೆ ವರ್ಗಾಯಿಸಿತ್ತು.

'ದ್ವಿಸದಸ್ಯ ಪೀಠವು ತನಗಿಂತ ದೊಡ್ಡ ಪೀಠದ (ಐವರು ಸದಸ್ಯರ) ತೀರ್ಪನ್ನು ಅನುಮಾನಿಸಲು ಅಥವಾ ಒಪ್ಪದಿರಲು ಯಾವುದೇ ಅಧಿಕಾರವನ್ನು ಹೊಂದಿಲ್ಲ' ಎಂದು ತಮ್ಮ 102 ಪುಟಗಳ ಪ್ರತ್ಯೇಕ ತೀರ್ಪಿನಲ್ಲಿ ಅವರು ತಿಳಿಸಿದ್ದಾರೆ.

'ಎಸ್. ಅಜೀಜ್ ಬಾಷಾ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪನ್ನು ಮರುಪರಿಶೀಲಿಸುವ ಪೀಠವು ಏಳು ನ್ಯಾಯಮೂರ್ತಿಗಳನ್ನು ಒಳಗೊಂಡಿರಬೇಕು ಎಂದು 1981ರಲ್ಲಿ ದ್ವಿಸದಸ್ಯ ಪೀಠ ನಿರ್ದಿಷ್ಟವಾಗಿ ಹೇಳಿತ್ತು. ಅದು ನ್ಯಾಯಾಂಗದ ಸ್ಥಾಪಿತ ಶಿಷ್ಟಾಚಾರಗಳಿಗೆ ಅನುಗುಣವಾಗಿಲ್ಲ' ಎಂದರು.

'ದ್ವಿಸದಸ್ಯ ಪೀಠದ ನಿರ್ಧಾರವು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಸಂವಿಧಾನದ 145ನೇ ವಿಧಿಯಡಿ ಹೊಂದಿರುವ ವಿಶೇಷ ಅಧಿಕಾರವನ್ನು ಅವಮಾನಿಸುತ್ತದೆ' ಎಂದಿದ್ದಾರೆ.

ಕೇಂದ್ರದಿಂದ ದೃಢ ನಿಲುವು ಮಂಡನೆ: ಬಿಜೆಪಿ

'ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆ ಸ್ಥಾನಮಾನ ನೀಡಿರುವುದರ ಕುರಿತು ಎದ್ದಿರುವ ಪ್ರಶ್ನೆಗೆ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ನ ಹೊಸ ಪೀಠದ ಮುಂದೆ ತನ್ನ 'ದೃಢ' ನಿಲುವು ಮಂಡಿಸಲಿದೆ' ಎಂದು ಬಿಜೆಪಿ ಶುಕ್ರವಾರ ಹೇಳಿದೆ.

ಈ ವಿಷಯ ಕುರಿತ ಅರ್ಜಿಯನ್ನು ಹೊಸ ಪೀಠಕ್ಕೆ ವಹಿಸಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ಬಿಜೆಪಿ ಈ ಪ್ರತಿಕ್ರಿಯೆ ನೀಡಿದೆ.

'ಸಂವಿಧಾನದಲ್ಲಿನ ಅವಕಾಶಗಳನ್ನು ವ್ಯಾಖ್ಯಾನಿಸುವುದು ಸುಪ್ರೀಂ ಕೋರ್ಟ್‌ನ ಮೂಲಭೂತ ಕರ್ತವ್ಯ. ಅದರಂತೆಯೇ ಅದು ತೀರ್ಪು ನೀಡಿದೆ. ಈ ವಿಚಾರದಲ್ಲಿ ಕಕ್ಷಿದಾರ ಕೂಡ ಆಗಿರುವ ಕೇಂದ್ರ ಸರ್ಕಾರ ತನ್ನ ಪ್ರಬಲ ವಾದ ಮಂಡನೆ ಮಾಡಲಿದೆ' ಎಂದು ಬಿಜೆಪಿಯ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಈ ತೀರ್ಪು ಅಲ್ಪಸಂಖ್ಯಾತರ ಹಕ್ಕುಗಳು ಹಾಗೂ ಎಎಂಯು ವಿಷಯದಲ್ಲಿ ಸಿಕ್ಕ ದೊಡ್ಡ ಜಯ. ವಿ.ವಿ. ಸ್ಥಾಪನೆಗೆ ಕಾರಣವಾದ ಮೂಲಭೂತ ತತ್ವಗಳನ್ನು ಈ ತೀರ್ಪು ಮತ್ತೊಮ್ಮೆ ದೃಢೀಕರಿಸಿದೆ
ಪ್ರೊ.ಫೈಜಾನ್ ಮುಸ್ತಫಾ, ಅಲಿಗಢ ವಿ.ವಿ ಮಾಜಿ ರಿಜಿಸ್ಟ್ರಾರ್ ಹಾಗೂ ಸಾಂವಿಧಾನಿಕ ಕಾನೂನು ತಜ್ಞ

ವಿ.ವಿ ಸ್ಥಾಪನೆಯ ಹಿಂದಿರುವ ಉದ್ದೇಶವನ್ನು ಈ ತೀರ್ಪು ಮತ್ತೊಮ್ಮೆ ದೃಢಪಡಿಸಿದೆ. ಸಮಾಜದ ಎಲ್ಲ ವರ್ಗಗಳಿಗೆ ಶಿಕ್ಷಣ ಒದಗಿಸುವಂತಹ ಒಳಗೊಳ್ಳುವಿಕೆಯ ವಾತಾವರಣ ನಿರ್ವಹಿಸಲು ಇದು ಪೂರಕವಾಗಲಿದೆ
ಮೊಹಮ್ಮದ್ ಒಬೇದ್ ಸಿದ್ದೀಕಿ, ಎಎಂಯು ಶಿಕ್ಷಕರ ಸಂಘದ ಕಾರ್ಯದರ್ಶಿ

ಚಾರಿತ್ರಿಕ ಸಾಕ್ಷ್ಯಗಳ ಆಧಾರದ ಮೇಲೆ ಪ್ರಕರಣದ ಇತ್ಯರ್ಥವಾಗಬೇಕು ಎಂಬುದು ಎಎಂಯು ಸಮುದಾಯದ ನಿಲುವಾಗಿತ್ತು. ಸುಪ್ರೀಂ ಕೋರ್ಟ್‌ನ ತೀರ್ಪು ನಮ್ಮ ವಾದವನ್ನು ಎತ್ತಿ ಹಿಡಿದಿದೆ
ಡಾ.ರಾಹತ್ ಅಬ್ರಾರ್, ಉರ್ದು ಅಕಾಡೆಮಿ ಮಾಜಿ ನಿರ್ದೇಶಕ, ಎಎಂಯು

ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ (ಎಎಂಯು) ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರ ಒಪ್ಪಿಕೊಳ್ಳಬೇಕು ಹಾಗೂ ವಿ.ವಿಯನ್ನು ಬೆಂಬಲಿಸಬೇಕು
ಅಸಾದುದ್ದೀನ್ ಒವೈಸಿ, ಎಐಎಂಐಎಂ ಮುಖ್ಯಸ್ಥ



ನೃತ್ಯ–ಉತ್ಸವ ಉತ್ತರ ಪ್ರದೇಶ ಮಥುರಾ ಜಿಲ್ಲೆಯ ವೃಂದಾವನದಲ್ಲಿ ಇಸ್ಕಾನ್ ಶುಕ್ರವಾರ ಹಮ್ಮಿಕೊಂಡಿದ್ದ 'ಶ್ರೀ ಕೃಷ್ಣ ಬಲರಾಮ ರಥ ಯಾತ್ರೆ' ವೇಳೆ ವಿದೇಶಿ ಹಾಗೂ ಸ್ಥಳೀಯ ಭಕ್ತರು ನೃತ್ಯ ಮಾಡಿದರು
ಪಿಟಿಐ ಚಿತ್ರ

ಗುಜರಾತ್: ಅದ್ದೂರಿ ಕಾರ್ಯಕ್ರಮದ ಮೂಲಕ ವಾಹನಕ್ಕೆ ವಿದಾಯ

ಅದೃಷ್ಟ ತಂದ ಕಾರಿಗೆ ಸಮಾಧಿಯ ಗೌರವ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತಿನ ಅಮ್ರೇಲಿ ಜಿಲ್ಲೆಯಲ್ಲಿ ಬಿಲ್ಡರ್ ಒಬ್ಬರು 18 ವರ್ಷಗಳಷ್ಟು ಹಳೆಯದಾದ ಕಾರನ್ನು ಸಮಾಧಿ ಮಾಡುವ ಮೂಲಕ 'ಬದುಕನ್ನೇ ಬದಲಾಯಿಸಿದ' ಪ್ರೀತಿಯ ವಾಹನಕ್ಕೆ ವಿನೂತನವಾಗಿ ವಿದಾಯ ಹೇಳಿದ್ದಾರೆ.

ಬಿಲ್ಡರ್ ಆಗಿರುವ ಸಂಜಯ್ ಪೊಲ್ರಾ ಎಂಬವರು ಲಥೀ ತಾಲ್ಲೂಕಿನ ಪದಾರ್‌ಶಿಂಗ ಗ್ರಾಮದಲ್ಲಿ ಗುರುವಾರ ಅದ್ದೂರಿಯಾಗಿ ಸಮಾಧಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಗ್ರಾಮಸ್ಥರು, ಅರ್ಚಕರು ಮತ್ತು ಧಾರ್ಮಿಕ ಮುಖಂಡರು ಸೇರಿದಂತೆ 1,500ಕ್ಕೂ ಹೆಚ್ಚು ಮಂದಿ ಇದರಲ್ಲಿ ಭಾಗವಹಿಸಿದ್ದರು.

ಆಸ್ತಿ ಮಾರಾಟ ದಲ್ಲಾಳಿಯಾಗಿದ್ದ ಸಂಜಯ್ ಅವರು ವೃತ್ತಿಯ ಆರಂಭದ ದಿನಗಳಲ್ಲಿ ಮಾರುತಿ ವಾಗನ್ -ಆರ್ ಕಾರು ಖರೀದಿಸಿದ್ದರು. ಈ ಕಾರಿನಿಂದಾಗಿ ತಮ್ಮ ಅದೃಷ್ಟದ ಬಾಗಿಲು ತೆರೆಯಿತು ಎಂದು ಅವರು ನಂಬಿದ್ದಾರೆ.

ಅದ್ದೂರಿ ಸಮಾರಂಭ: ಸಮಾಧಿ ಕಾರ್ಯಕ್ರಮಕ್ಕಾಗಿ ಕಾರನ್ನು ಹೂವುಗಳಿಂದ ಅಲಂಕರಿಸಲಾಗಿತ್ತು. ಗ್ರಾಮಸ್ಥರು ಕಾರಿನ ಸುತ್ತ ಗರ್ಬಾ ನೃತ್ಯವನ್ನೂ ನಡೆಸಿದರು. ಅಲಂಕೃತ ಕಾರನ್ನು ಸಮಾಧಿ ಸ್ಥಳದವರೆಗೂ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.



ಕಾರಿನ ಸಮಾಧಿ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು

ಸಂಜಯ್ ಅವರಿಗೆ ಸೇರಿದ ಕೃಷಿ ಜಮೀನಿನಲ್ಲಿ ಕಾರಿನ ಸಮಾಧಿಗಾಗಿ 15 ಅಡಿ ಆಳದ ಗುಂಡಿ ತೋಡಲಾಗಿತ್ತು. ಸಂಗೀತದ ಅಬ್ಬರ ಹಾಗೂ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಸಮಾಧಿ ಸ್ಥಳ ಹಾಗೂ ಕಾರಿಗೆ ಪೂಜೆಯನ್ನೂ ಸಲ್ಲಿಸಲಾಯಿತು. ಪೂಜೆಯ ನಂತರ ಮಂತ್ರ ಘೋಷಗಳ ನಡುವೆ ಕಾರನ್ನು ಹೂಳಲಾಯಿತು.

'2006ರಲ್ಲಿ ಕಾರನ್ನು ಖರೀದಿಸಿದ್ದೆ. ಅದು ನನ್ನ ಅದೃಷ್ಟವನ್ನೇ ಬದಲಾಯಿಸಿತ್ತು. ಅದನ್ನು ನಾನು ತುಂಬಾ ಪ್ರೀತಿಸುತ್ತಿದ್ದೆ. ಹಾಗಾಗಿ, ಬೇರೆ ಯಾವುದೇ ಯೋಚನೆ ಮಾಡದೆ ಅದನ್ನು ಸಮಾಧಿ ಮಾಡಿದ್ದೇನೆ' ಎಂದು ಸಂಜಯ್ ಪೊಲ್ರಾ 'ಪ್ರಜಾವಾಣಿ'ಗೆ ತಿಳಿಸಿದರು.

ಸೌರಾಷ್ಟ್ರ ಮೂಲದವರಾದ ಸಂಜಯ್ ಅವರು ಉತ್ತಮ ಅವಕಾಶ ಅರಸಿಕೊಂಡು ಸೂರತ್‌ಗೆ ವಲಸೆ ಹೋಗಿದ್ದರು. ಅಲ್ಲಿ ರಿಯಲ್ ಎಸ್ಟೇಟ್ ದಲ್ಲಾಳಿಯಾಗಿ ಕೆಲಸ ಮಾಡಲು ಆರಂಭಿಸಿದ್ದರು.

'ಇವತ್ತು ನಾನು ಬಿಲ್ಡರ್ ಆಗಿದ್ದು, ಔಡಿ ಕಾರನ್ನೂ ಹೊಂದಿದ್ದೇನೆ. ಕಾರಿನ ಸಮಾಧಿ ಎಂಬುದನ್ನು ನಾನು ಇದುವರೆಗೆ ಎಲ್ಲೂ ಕೇಳಿಲ್ಲ. ನನ್ನ ಕಾರಿಗೆ ಇದುವೇ ಸೂಕ್ತವಾದ ವಿದಾಯ ಎಂದುಕೊಂಡು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೆ' ಎಂದು ಅವರು ಹೇಳಿದರು.


ಅದ್ದೂರಿಯಾಗಿ ಕಾರ್ಯಕ್ರಮ ನಡೆಸಲು ಮುಂಚೆಯೇ ನಿರ್ಧರಿಸಿದ್ದ ಅವರು, ಅದಕ್ಕಾಗಿ ನಾಲ್ಕು ಪುಟಗಳ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ 1,500 ಜನರಿಗೆ ಹಂಚಿದ್ದರು.

'ಕಾರು ಕುಟುಂಬಕ್ಕೆ ಏಳಿಗೆಯನ್ನು ತಂದಿದ್ದು ಮಾತ್ರವಲ್ಲದೇ, ಸಮಾಜದಲ್ಲಿ ಕುಟುಂಬದ ಗೌರವವನ್ನು ಹೆಚ್ಚಿಸಿದೆ. ಅದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ನೆಚ್ಚಿನ ಕಾರನ್ನು ನಮ್ಮ ನೆನಪಿನಲ್ಲಿ ಸದಾ ಇರಿಸುವುದಕ್ಕಾಗಿ ಅದನ್ನು ಸಮಾಧಿ ಮಾಡಲು ಯೋಜಿಸಿದ್ದೇವೆ' ಎಂದು ಆಮಂತ್ರಣ ಪತ್ರಿಕೆಯಲ್ಲಿ ಸಂಜಯ್ ಮುದ್ರಿಸಿದ್ದರು.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಕಾಲದ ಆಯುಧಗಳು ಪತ್ತೆ

ಪ್ರಜಾವಾಣಿ ವಾರ್ತೆ

ಲಖನೌ: 1857ರಲ್ಲಿ ನಡೆದಿದ್ದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಳಕೆಯಾಗಿದ್ದ ಹಲವು ಶಸ್ತ್ರಾಸ್ತ್ರಗಳು ಉತ್ತರಪ್ರದೇಶದ ಶಹಜಹಾನ್‌ಪುರದಲ್ಲಿ ಪತ್ತೆಯಾಗಿವೆ.



'ಧಕಿಯ ತೆವಾರಿ ಗ್ರಾಮದ ರೈತ ಬಾಬು ರಾಮ್ ಅವರು ಕೆಲವು ದಿನಗಳ ಹಿಂದೆ ತಮ್ಮ ಹೊಲದಲ್ಲಿ ಉಳುಮೆ ಮಾಡುತ್ತಿದ್ದಾಗ ತುಕ್ಕು ಹಿಡಿದಿರುವ 20 ಕತ್ತಿಗಳು, 10 ಬಂದೂಕುಗಳ ನಳಿಕೆಗಳು, ಎರಡು ದೇಶಿ ನಿರ್ಮಿತ ಪಿಸ್ತೂಲ್‌ಗಳು ಮತ್ತು ಒಂದು ಈಟಿ ಪತ್ತೆಯಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'2011ರಲ್ಲಿ ಇದೇ ಗ್ರಾಮದ ಕುಟುಂಬವೊಂದರಿಂದ ಜಮೀನನ್ನು ಖರೀದಿಸಿದ್ದೆ, ಆ ವೇಳೆ ಅಲ್ಲಿ ದಿಬ್ಬಗಳಿದ್ದವು' ಎಂದು ರೈತ ಬಾಬು ರಾಮ್ ತಿಳಿಸಿದ್ದಾರೆ.

'ಪತ್ತೆಯಾಗಿರುವ ಆಯುಧಗಳು 150ರಿಂದ 200 ವರ್ಷ ಹಳೆಯದಾಗಿರಬಹುದು' ಎಂದು ಸ್ಥಳೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. 'ಕತ್ತಿಗಳಿಗೆ ಬೆಳ್ಳಿಯ ಹಿಡಿಕೆಗಳಿವೆ. ಬಂದೂಕುಗಳ ನಳಿಕೆಗಳು ಮಾತ್ರ ಪತ್ತೆಯಾಗಿವೆ. ಅದರ ಮರದ ಭಾಗಗಳನ್ನು ಗೆದ್ದಲು ಹುಳುಗಳು ತಿಂದಿರಬಹುದು' ಎಂದು ಸ್ಥಳೀಯ ಕಾಲೇಜಿನ ಇತಿಹಾಸ ಉಪನ್ಯಾಸಕ ಡಾ.ದೀಪಕ್ ಸಿಂಗ್ ಅವರು ಹೇಳಿದ್ದಾರೆ.

'ಸಮೀಪದ ಪ್ರದೇಶಗಳಲ್ಲಿ ಹರಪ್ಪ ನಾಗರಿಕತೆಯ ಕೆಲ ಆಯುಧಗಳು ಇತ್ತೀಚೆಗೆ ಪತ್ತೆಯಾಗಿದ್ದವು. ಅಧ್ಯಯನಕ್ಕಾಗಿ ಕೆಲ ಕತ್ತಿಗಳನ್ನು ನೀಡುವಂತೆ ಸ್ಥಳೀಯಾಡಳಿತಕ್ಕೆ ಮನವಿ ಮಾಡಿದ್ದೇವೆ' ಎಂದು ತಜ್ಞರು ತಿಳಿಸಿದ್ದಾರೆ.

'ಆಯುಧಗಳು ಪತ್ತೆಯಾಗಿರುವ ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಕಳುಹಿಸಲಾಗಿದ್ದು, ಈ ಬಗ್ಗೆ ಶೀಘ್ರದಲ್ಲೇ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ವರದಿ ನೀಡಲಾಗುವುದು' ಎಂದು ತಿಹಾರ್‌ನ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಜೀತ್ ಸಿಂಗ್ ರೈ ಅವರು ಹೇಳಿದ್ದಾರೆ.

ಪತ್ತೆಯಾಗಿರುವ ಆಯುಧಗಳನ್ನು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



❦ ಸುಭಾಷಿತ ❦

ಅನ್ನ ಬೆಂದರೆ ತಿನ್ನಲು ಯೋಗ್ಯ. ಮನುಷ್ಯ ನೊಂದರೆ ಬದುಕಲು ಯೋಗ್ಯ.

–ಗೌತಮ ಬುದ್ಧ

ವಕ್ಫ್ ಆಸ್ತಿ ವಿವಾದ: ಪರಿಹಾರಕ್ಕೆ ಸೂಕ್ತ ಮಾರ್ಗೋಪಾಯ ಶೋಧಿಸಿ

ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಆಸ್ತಿ ವಿಷಯದಲ್ಲಿ ರೈತರಿಗೆ ನೋಟಿಸ್ ನೀಡಿರುವುದು ಹಾಗೂ ಕೆಲವು ಮಠ-ಮಂದಿರಗಳ ಸ್ವಾಧೀನದಲ್ಲಿರುವ ಆಸ್ತಿಗಳ ಪಹಣಿಯಲ್ಲಿ ಮಂಡಳಿಯ ಹೆಸರು ಉಲ್ಲೇಖವಾಗಿರುವುದು ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿದೆ. ಕೇಂದ್ರ ಸಚಿವರು, ಬಿಜೆಪಿಯ ಚುನಾಯಿತ ಪ್ರತಿನಿಧಿಗಳು ಹೋರಾಟದ ಮುಂಚೂಣಿಯಲ್ಲಿ ನಿಂತು, ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯುತ್ತಿದ್ದಾರೆ. ಇದರಿಂದಾಗಿ, ದೀರ್ಘಕಾಲದಿಂದ ತಮ್ಮ ಸ್ವಾಧೀನದಲ್ಲಿರುವ ಜಮೀನು ಕೈತಪ್ಪಬಹುದು ಎಂಬ ಭೀತಿ ರೈತ ಸಮೂಹದಲ್ಲಿ ಮೂಡಿದೆ. ‘ರೈತರನ್ನು ಒಕ್ಕಲೆಬ್ಬಿಸುವ ಯಾವುದೇ ಉದ್ದೇಶ ಸರ್ಕಾರಕ್ಕೆ ಇಲ್ಲ. ರೈತರಿಗೆ ನೀಡಿರುವ ನೋಟಿಸ್ ಹಿಂದಕ್ಕೆ ಪಡೆಯುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಆದರೂ ವಕ್ಫ್ ಆಸ್ತಿ ವಿವಾದದ ರಾಜಕೀಯ ಜಟಾಪಟಿ ನಿಂತಿಲ್ಲ. ಈ ವಿವಾದವನ್ನೇ ಅಸ್ತ್ರವಾಗಿ ಬಳಸಿಕೊಂಡು ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತಿವೆ. ನಾಡಿನ ಹಿತದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆ ಅಲ್ಲ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದಕ್ಕೆ ವಿರೋಧ ಪಕ್ಷಗಳು ಪ್ರತಿರೋಧ ಒಡ್ಡಿದ ಕಾರಣ, ತಿದ್ದುಪಡಿ ಮಸೂದೆಯನ್ನು ಸಂಸತ್ತಿನ ಜಂಟಿ ಸದನ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ. ಬಿಜೆಪಿಯು ತಾನು ಬಯಸಿದಂತೆ ವಕ್ಫ್ ಕಾಯ್ದೆಗೆ ತಿದ್ದುಪಡಿ ತರುವ ಪ್ರಯತ್ನಕ್ಕೆ ಪೂರಕವಾಗಿ ರಾಜ್ಯದಲ್ಲಿನ ವಕ್ಫ್ ಆಸ್ತಿ ವಿವಾದವನ್ನು ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ. ಜಂಟಿ ಸದನ ಸಮಿತಿಯ ಅಧ್ಯಕ್ಷರು ತರಾತುರಿಯಲ್ಲಿ ರಾಜ್ಯಕ್ಕೆ ಭೇಟಿ ನೀಡಿ, ಅಹವಾಲು ಆಲಿಸಿರುವುದನ್ನು ನೋಡಿದರೆ ಕಾಂಗ್ರೆಸ್ ಮುಖಂಡರ ಆರೋಪದಲ್ಲಿ ಹುರುಳಿದ್ದಂತೆ ತೋರುತ್ತದೆ. ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭೆ ಚುನಾವಣೆ ಹಾಗೂ ಕರ್ನಾಟಕದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯೂ ವಕ್ಫ್ ಆಸ್ತಿಗೆ ಸಂಬಂಧಿಸಿದ ಗದ್ದಲ ಹೆಚ್ಚಾಗಲು ಕಾರಣ ಇದ್ದಿರಬಹುದು ಎಂಬ ಗುಮಾನಿಯೂ ಇದೆ. ಸರ್ಕಾರಿ ಸಂಸ್ಥೆಯೇ ಆಗಿರುವ ವಕ್ಫ್ ಮಂಡಳಿಗೆ ಕಾಯ್ದೆಯ ಬಲ ಇದೆ. ಇದರ ಉಸ್ತುವಾರಿಗೆ ಸಚಿವರಿದ್ದಾರೆ, ಸರ್ಕಾರದ ಅಧಿಕಾರಿಗಳನ್ನೇ ಒಳಗೊಂಡ ಆಡಳಿತ ಮಂಡಳಿಯೂ ಇದೆ. ಮುಸ್ಲಿಂ ಸಮುದಾಯಕ್ಕೆ ಸೇರಿದವರೊಬ್ಬರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ಸರ್ಕಾರವು ನೇಮಿಸುತ್ತದೆ. ಧಾರ್ಮಿಕ ಹಾಗೂ ಸಾಮಾಜಿಕ ಸೇವೆಯ ಉದ್ದೇಶಕ್ಕೆ ವ್ಯಕ್ತಿ ಮತ್ತು ಸಂಘ–ಸಂಸ್ಥೆಗಳು ಮಂಡಳಿಗೆ ನೀಡಿದ ಜಮೀನನ್ನು ವಕ್ಫ್ ಆಸ್ತಿ ಎಂದು ಪರಿಗಣಿಸಲಾಗುತ್ತದೆ. ಒಮ್ಮೆ ಹೀಗೆ ನೀಡಿದ ಆಸ್ತಿಯು ಶಾಶ್ವತವಾಗಿ ವಕ್ಫ್ ಆಸ್ತಿಯಾಗುತ್ತದೆ ಎನ್ನುತ್ತದೆ ಕಾಯ್ದೆ.



ಈ ವಿವಾದಕ್ಕೆ ಯುಕ್ತವಾಗಿ ತೆರೆ ಎಳೆಯಬೇಕು. ಕಾನೂನಾತ್ಮಕ ಪರಿಹಾರಗಳ ಕುರಿತು ಗಂಭೀರವಾಗಿ ಯೋಚಿಸಬೇಕು

ಭೂಸುಧಾರಣೆ ಕಾಯ್ದೆ ಜಾರಿಯಾಗುವ ಮುನ್ನ ಕರ್ನಾಟಕದ ವಕ್ಫ್ ಮಂಡಳಿಯ ಒಡೆತನದಲ್ಲಿ 1.70 ಲಕ್ಷ ಎಕರೆ ಜಮೀನಿತ್ತು. ಭೂಸುಧಾರಣೆ ಕಾಯ್ದೆ ಜಾರಿಗೊಂಡ ಬಳಿಕ, ಉಳುಮೆ ಮಾಡುತ್ತಿದ್ದ ರೈತರಿಗೆ 79,000 ಎಕರೆ ಜಮೀನು ವರ್ಗಾವಣೆಯಾಯಿತು ಎಂದು ವರದಿಗಳು ಹೇಳುತ್ತವೆ. ಅದಕ್ಕೂ ಕಾಯ್ದೆಯ ರಕ್ಷಣೆ ಇತ್ತು. ಆದರೆ, ಸಯ್ಯದ್ ಅಲಿ ಮತ್ತು ಇತರರು ಹಾಗೂ ಆಂಧ್ರಪ್ರದೇಶ ವಕ್ಫ್ ಮಂಡಳಿ ನಡುವಣ ಪ್ರಕರಣದಲ್ಲಿ 1998ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ಆಸ್ತಿಗಳ ಮೇಲೆ ವಕ್ಫ್ ಮಂಡಳಿಯ ಹಕ್ಕು ಪ್ರತಿಪಾದನೆಗೆ ಬಲ ನೀಡಿತು. ‘ಒಮ್ಮೆ ವಕ್ಫ್ ಆಸ್ತಿ ಎಂದು ಜಮೀನಿನ ದಾಖಲೆಯಲ್ಲಿ ನಮೂದಾದರೆ ಅದು ಕಾಯಂ ಆಗಿ ವಕ್ಫ್ ಆಸ್ತಿ ಆಗುತ್ತದೆ. ಇನಾಮದಾರಿ ಮತ್ತು ಗೇಣಿದಾರಿ ಪದ್ಧತಿ, ಭೂಸುಧಾರಣಾ ಕಾಯ್ದೆಗಳ ಅನ್ವಯ ವಕ್ಫ್ ಜಮೀನು ವರ್ಗಾವಣೆಯಾಗಿದ್ದಲ್ಲಿ, ಅದನ್ನು ಮರುವಶಕ್ಕೆ ಪಡೆಯಬೇಕು’ ಎಂದು ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು. ಈ ಅಂಶವು ಈಗ ಉಲ್ಬಣಗೊಂಡಿರುವ ವಿವಾದಕ್ಕೆ ಕಾರಣವಾಗಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಯಾವುದೇ ಪಕ್ಷದ ನೇತೃತ್ವದ ಸರ್ಕಾರವೂ ಗಮನಹರಿಸಲಿಲ್ಲ. ಎರಡೂವರೆ ದಶಕಗಳಿಂದ ರಾಜ್ಯದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನೇತೃತ್ವದ ಸರ್ಕಾರಗಳು ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ಅನುಷ್ಠಾನಗೊಳಿಸುವ ದಿಸೆಯಲ್ಲೇ ಹೆಜ್ಜೆ ಇಟ್ಟವು. 2021ರಲ್ಲಿ ಬಿಜೆಪಿಯ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವೂ ಇದೇ ಮಾರ್ಗ ಅನುಸರಿಸಿತು. ಸುಪ್ರೀಂ ಕೋರ್ಟ್ ತೀರ್ಪನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದ ಅನಿವಾರ್ಯಕ್ಕೆ ಸಿಲುಕಿದ ಅಧಿಕಾರಿಗಳು, ರೈತರ ಹಿತ, ಸಾಧಕ–ಬಾಧಕ ಯೋಚಿಸದೇ ಕ್ರಮ ವಹಿಸಲು ಮುಂದಾದ ಕಾರಣ ನೋಟಿಸ್ ಜಾರಿಯಾಯಿತು. ಈ ಎಲ್ಲ ತೊಡಕುಗಳು ಮತ್ತು ಅವುಗಳಿಂದ ಹೊರಬರುವ ಮಾರ್ಗೋಪಾಯಗಳ ಕುರಿತು ಜನಪ್ರತಿನಿಧಿಗಳು ಯೋಚಿಸಬೇಕೇ ವಿನಾ ಅದರಿಂದ ರಾಜಕೀಯ ಲಾಭ ಪಡೆಯಲು ಸ್ಪರ್ಧೆಗೆ ಇಳಿಯುವುದು ತರವಲ್ಲ. ದಶಕಗಳಿಂದ ಕಗ್ಗಂಟಾಗಿ ಉಳಿದಿರುವ ಆಸ್ತಿ ವಿವಾದದ ಪ್ರಕರಣವನ್ನು ಪರಿಹರಿಸಿ ರೈತರ ಹಿತ ಕಾಯಬೇಕಾದ ಜವಾಬ್ದಾರಿ ಆಡಳಿತ ಪಕ್ಷಕ್ಕೂ ಇದೆ, ವಿರೋಧ ಪಕ್ಷಗಳಿಗೂ ಇದೆ. ವಕ್ಫ್ ಆಸ್ತಿ ವಿವಾದವನ್ನು ಮುಂದಿಟ್ಟುಕೊಂಡು ಕೋಮು ಧ್ರುವೀಕರಣಕ್ಕೆ ಪ್ರಯತ್ನಿಸುವುದು ಸಲ್ಲದು. ಈ ವಿವಾದಕ್ಕೆ ಯುಕ್ತವಾಗಿ ತೆರೆ ಎಳೆಯಬೇಕಾಗಿದೆ. ಕಾನೂನಾತ್ಮಕ ಪರಿಹಾರಗಳ ಕುರಿತು ಗಂಭೀರವಾಗಿ ಯೋಚಿಸಬೇಕಿದೆ. ಆಡಳಿತಾರೂಢರು ವಿರೋಧ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪರಿಹಾರ ಮಾರ್ಗ ಶೋಧಿಸಬೇಕು. ವಸ್ತುಸ್ಥಿತಿಯನ್ನು ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸ ಆಗಬೇಕು. ಮತೀಯ ದ್ವೇಷಕ್ಕೆ ಎಳ್ಳಷ್ಟೂ ಅವಕಾಶವಾಗದಂತೆ ಮತ್ತು ರೈತರ ಹಿತಕ್ಕೆ ಬಾಧಕವಾಗದಂತೆ ಎಚ್ಚರ ವಹಿಸಬೇಕು.

ದಿನದ ಟ್ವೀಟ್

ಇದೆಂಥಾ ಸಂಸ್ಕೃತಿ?



ನನಗೆ ಇಂತಹವರ ಬಗ್ಗೆ ಅನುಕಂಪ ಇದೆ. ನಾವು ಎತ್ತ ಸಾಗುತ್ತಿದ್ದೇವೆ? ಸಂಪೂರ್ಣ ಅಸಂಬದ್ಧ. ಇದು ಈಗ ಒಂದು ಫ್ಯಾಷನ್ ಆಗಿಬಿಟ್ಟಿದೆ.

(ಕೆಲವು ಶಾಲೆಗಳ ವಾರ್ಷಿಕೋತ್ಸವ ಸಮಾರಂಭಗಳಲ್ಲಿ ಮಕ್ಕಳಿಂದ ಐಟಂ ಹಾಡಿಗೆ ನೃತ್ಯ ಮಾಡಿಸುವುದಕ್ಕೆ ಆಕ್ರೋಶ)

ವಿನೀತ್ ಕುಮಾರ್ ರಾಯ್, ಔಷಧ ವಿಜ್ಞಾನಿ

ಕಿಡಿನುಡಿ



ದೇಶದಾದ್ಯಂತ ‘ಸರ್ಕಾರಿ ಅಧಿಕಾರಿಗಳ ಮೇಲೆ ದಾಳಿ ಯೋಜನೆ’ ರೂಪಿಸಬೇಕಾದ ಅಗತ್ಯವಿದೆ. ತಾಲ್ಲೂಕು ಕಚೇರಿ, ಪಂಚಾಯಿತಿ, ಲೋಕೋಪಯೋಗಿ ಇಲಾಖೆ ಕಚೇರಿಗಳಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ಬಹುತೇಕ ಶೇ 50ರಷ್ಟು ನಿಧಿ ಈ ಅಧಿಕಾರಿಗಳ ಜೇಬು ಸೇರುತ್ತಿದೆ.

(ಒಡಿಶಾದ ಅಧಿಕಾರಿಯೊಬ್ಬರ ಮೇಲೆ ಜಾಗೃತದಳ ನಡೆಸಿದ ದಾಳಿಯಲ್ಲಿ, ಅವರ ಆದಾಯಕ್ಕಿಂತ ಶೇ 736ರಷ್ಟು ಹೆಚ್ಚು ಸಂಪತ್ತು ಪತ್ತೆಯಾಗಿರುವುದಕ್ಕೆ ಪ್ರತಿಕ್ರಿಯೆ)

ಅವಿಜೀತ್, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 9-11-1999

● **ಒರಿಸ್ಸಾ: ನೂರಾರು ಶವಗಳ ಪತ್ತೆ ಅನ್ನ– ನೀರಿಗಾಗಿ ಸಂತ್ರಸ್ತರ ವಲಸೆ**

ಭುವನೇಶ್ವರ, ನ. 8 (ಯುಎನ್‌ಐ, ಪಿಟಿಐ)– ಸಂಪರ್ಕ ಕಡಿದುಕೊಂಡಿರುವ ಒರಿಸ್ಸಾ ತೀರದ ಜಗತ್‌ಸಿಂಗ್‌ಪುರ ಜಿಲ್ಲೆಯ ದೂರದ ಗ್ರಾಮಗಳ ರಸ್ತೆಗಳನ್ನು ಸೇನೆ ಸುಗಮಗೊಳಿಸುತ್ತಿರುವಂತೆ, ಸಾವಿನ ಸರಮಾಲೆಗೆ ಮತ್ತೆ ನೂರಾರು ಸಂಖ್ಯೆಗಳ ಸೇರ್ಪಡೆಯಾಗುತ್ತಿದೆ.

ರಾಜ್ಯ ಪೊಲೀಸ್ ನಿಯಂತ್ರಣ ಕೊಠಡಿಗೆ ಬಂದಿರುವ ವರದಿಗಳ ಪ್ರಕಾರ, 480 ಕಿ.ಮೀ. ಉದ್ದದ ಒರಿಸ್ಸಾ ತೀರ ಪ್ರದೇಶಕ್ಕೆ ಚಂಡಮಾರುತ ಅಪ್ಪಳಿಸಿದಾಗಿನಿಂದ ಇದುವರೆಗೆ 3,460 ದೇಹಗಳು ಪತ್ತೆಯಾಗಿವೆ.

● **ಸಾರ್ವಜನಿಕರ ಹಲ್ಲೆ: ಡಕಾಯಿತ ಸಾವು**

ಬೆಂಗಳೂರು, ನ. 8– ಡಕಾಯಿತಿ ನಡೆಸಿ ಪರಾರಿಯಾಗುತ್ತಿದ್ದ ತಂಡವನ್ನು ಬೆನ್ನಟ್ಟಿದ ಜಾಗೃತ ಸಾರ್ವಜನಿಕರು ಅವರಲ್ಲಿ ಒಬ್ಬಾತನನ್ನು ಹಿಡಿಯುವಲ್ಲಿ ಯಶಸ್ವಿಯಾದರೂ, ಸಾರ್ವಜನಿಕರ ಹಲ್ಲೆಯಿಂದ ತೀವ್ರ ಗಾಯಗೊಂಡ ಆತ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿರುವ ಘಟನೆ ಹೊರವಲಯಕ್ಕೆ ಹೊಂದಿಕೊಂಡಿರುವ ಹೆಗ್ಗನಹಳ್ಳಿಯಲ್ಲಿ ಇಂದು ಬೆಳಗಿನ ಜಾವ ನಡೆದಿದೆ.

ಮೃತನನ್ನು ಚಾಲಕ ಹಾಗೂ ಕೊಡಗು ಜಿಲ್ಲೆಯ ಭಾಗಮಂಡಲಕ್ಕೆ ಸೇರಿದ ಉಮೇಶ (25) ಎಂದು ಗುರುತಿಸಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 9-11-1974

● **ನ್ಯಾಯಬೆಲೆಗೆ ಕಾಗದ– ರಟ್ಟಿನ ಮಾರಾಟಕ್ಕೆ ಕೇಂದ್ರ ಸಂಸ್ಥೆ?**

ನವದೆಹಲಿ, ನ. 8– ದೇಶದಲ್ಲಿ ತಯಾರಾಗುವ ಎಲ್ಲ ಕಾಗದ ಹಾಗೂ ಕಾಗದ ರಟ್ಟನ್ನು ನ್ಯಾಯಬೆಲೆಯಲ್ಲಿ ವಿತರಣೆ ಮಾಡುವ ಕೇಂದ್ರ ಮಾರಾಟ ಸಂಸ್ಥೆ ರಚಿಸುವ ಸಾಧ್ಯತೆಯನ್ನು ಕೇಂದ್ರ ಕೈಗಾರಿಕಾ ಖಾತೆ ಪರಿಶೀಲಿಸುತ್ತಿದೆ.

ಕಾಗದ ವ್ಯಾಪಾರ ಹಾಗೂ ಕಾಗದ ಕಾರ್ಖಾನೆಗಳಲ್ಲಿ ಕಾಗದ ಮಾರಾಟ ಸಂಬಂಧದ ಅಕ್ರಮಗಳು ನಿತ್ಯದ ವ್ಯವಹಾರಗಳಾಗಿಬಿಟ್ಟಿವೆ ಎಂದು ಸರ್ಕಾರ ಭಾವಿಸಿದೆ.

ಕಾಗದದ ಭಾರಿ ಮಾರಾಟಗಾರರು ಅಧಿಕೃತ ದರಕ್ಕಿಂತ ಹೆಚ್ಚು ಹಣವನ್ನು ಪಡೆಯುತ್ತಾರೆ. ಮಾರಾಟ ರಸೀದಿಯಲ್ಲಿ ನಮೂದಿಸುವುದಕ್ಕಿಂತ ಹೆಚ್ಚಿನ ಹಣವನ್ನು ವಸೂಲು ಮಾಡುವ ಮೂಲಕ ಚಿಲ್ಲರೆ ವರ್ತಕರು ಭಾರವನ್ನು ಬಳಕೆದಾರನ ಮೇಲೆ ರವಾನಿಸುತ್ತಾರೆ ಎನ್ನಲಾಗಿದೆ.

● **ವರಕವಿ ಬೇಂದ್ರೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ನೀಡಿಕೆ**

ನವದೆಹಲಿ, ನ. 8– ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಮತ್ತು ಒರಿಯಾದ ಕಾದಂಬರಿಕಾರ ಗೋಪಿನಾಥ ಮೊಹಂತಿ ಅವರಿಗೆ 1973ನೇ ಸಾಲಿನ ಜ್ಞಾನಪೀಠ ಸಾಹಿತ್ಯ ಪ್ರಶಸ್ತಿಯನ್ನು ಇಂದು ಇಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ನೀಡಲಾಯಿತು.

ಕನ್ನಡದಲ್ಲಿ ಕಾನೂನು ಸಾಹಿತ್ಯ ರಚಿಸುವವರಿಗೆ ಬೇಕಿದೆ ಪ್ರೋತ್ಸಾಹ

ಕೋರ್ಟ್ ತೀರ್ಪು: ಎಲ್ಲರಿಗೂ ನಿಲುಕಲಿ



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಕಲಿಕೆ ಮತ್ತು ಗ್ರಹಿಕೆಯ ದೃಷ್ಟಿಯಿಂದ ನ್ಯಾಯಾಂಗದಲ್ಲಿ ಪ್ರಾದೇಶಿಕ ಭಾಷೆಗೆ ಒತ್ತು ಸಿಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನ್ಯಾಯಾಲಯಗಳು ನೀಡುವ ತೀರ್ಪುಗಳು ಹೆಚ್ಚು ಪರಿಣಾಮಕಾರಿಯಾಗಿ ಜನಸಮೂಹಕ್ಕೆ ತಲುಪಬೇಕಾದರೆ, ಅವು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಇರಬೇಕು. ಅಷ್ಟು ಮಾತ್ರವಲ್ಲ, ಸರಳವಾಗಿಯೂ ಇರಬೇಕು. ಈ ದಿಸೆಯಲ್ಲಿ ಕೆಲವು ತೊಡಕುಗಳಿದ್ದು, ನ್ಯಾಯಾಲಯಗಳು ಅವನ್ನು ಸರಿಪಡಿಸಲು ಮುಂದಾಗಬೇಕಿದೆ.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ಎಲ್ಲ ಕಲಾಪಗಳು ಇಂಗ್ಲಿಷ್‌ನಲ್ಲಿ ಇರಬೇಕು ಎಂದು ಸಂವಿಧಾನದ ವಿಧಿ 348(1)(ಎ) ಹೇಳುತ್ತದೆ. ಆದರೆ ವಿಧಿ 348 (2) ಮತ್ತು ರಾಜಭಾಷಾ ಅಧಿನಿಯಮ–1963ರ ಸೆಕ್ಷನ್ 7, ಆಯಾ ರಾಜ್ಯವು ರಾಷ್ಟ್ರಪತಿ ಮತ್ತು ರಾಜ್ಯಪಾಲರ ಒಪ್ಪಿಗೆ ಪಡೆದು ಇಂಗ್ಲಿಷ್ ಜೊತೆಗೆ ತಮ್ಮ ಪ್ರಾದೇಶಿಕ ಭಾಷೆಯನ್ನು ಬಳಸಿಕೊಳ್ಳಬಹುದು ಎಂದು ಹೇಳುತ್ತದೆ. ಸುಪ್ರೀಂ ಕೋರ್ಟ್ ತನ್ನ 2018–19ರ ವಾರ್ಷಿಕ ವರದಿಯಲ್ಲಿ ಸಹ, ದೂರುದಾರರಿಗೆ ಇಂಗ್ಲಿಷ್ ಅರ್ಥಮಾಡಿಕೊಳ್ಳುವುದು ಕಷ್ಟವಾದ್ದರಿಂದ ತೀರ್ಪುಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಅನುವಾದ ಮಾಡಬೇಕಾದ ಅಗತ್ಯವನ್ನು ಉಲ್ಲೇಖಿಸಿದೆ.

ನ್ಯಾಯಾಲಯದ ಕಲಾಪಗಳಲ್ಲಿ ರಾಜ್ಯದ ಆಡಳಿತ ಭಾಷೆಯನ್ನು ಬಳಸಲು ಅನುಮತಿ ನೀಡುವಂತೆ ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳು 2012ರಲ್ಲಿ ಪ್ರಸ್ತಾವ ಸಲ್ಲಿಸಿದ್ದವು. ಆದರೆ ಈ ಪ್ರಸ್ತಾವಕ್ಕೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಅನುಮತಿ ದೊರೆತಿಲ್ಲ. ಏತನ್ಮಧ್ಯೆ, ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರ ಮಾಡಲು ಸುಪ್ರೀಂ ಕೋರ್ಟ್ ಒಂದು ಯೋಜನೆಯನ್ನು ಆರಂಭಿಸಿದೆ. 18 ವಿಷಯಗಳಿಗೆ ಸಂಬಂಧಿಸಿದ ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರ ಮಾಡಲು ಕ್ರಮ ಕೈಗೊಂಡಿದೆ. ಈ ಪಟ್ಟಿಯಲ್ಲಿ ಕಾರ್ಮಿಕರ ಕಲ್ಯಾಣ, ಸೇವಾ ನಿಯಮ, ಕ್ರಿಮಿನಲ್ ಅಪರಾಧಗಳು, ಕೌಟುಂಬಿಕ ವ್ಯವಹಾರ, ಭೂಸ್ವಾಧೀನ, ಗ್ರಾಹಕ ಸಂರಕ್ಷಣೆಯಂತಹ ವಿಷಯಗಳು ಸೇರಿವೆ. ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ತೀರ್ಪುಗಳನ್ನು ವಿವಿಧ ಭಾಷೆಗಳಿಗೆ ಅನುವಾದ ಮಾಡುವ ಸಲುವಾಗಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರು ಸಮಿತಿಯೊಂದನ್ನು (ಎಐ ಅಸಿಸ್ಟೆಡ್ ಲೀಗಲ್ ಟ್ರಾನ್ಸ್‌ಲೇಷನ್ ಅಡ್ವೈಸರಿ ಕಮಿಟಿ) ರಚಿಸಿದ್ದಾರೆ.

ಲಭ್ಯವಿರುವ ಅಂಕಿಅಂಶಗಳ ಪ್ರಕಾರ, ಸುಪ್ರೀಂ ಕೋರ್ಟ್ ನೀಡಿರುವ 31,184 ತೀರ್ಪುಗಳನ್ನು ವಿವಿಧ ಭಾಷೆಗಳಿಗೆ ಅನುವಾದ ಮಾಡಲಾಗಿದೆ. ಇದರಲ್ಲಿ 1,898 ತೀರ್ಪುಗಳು ಕನ್ನಡದಲ್ಲಿ ಲಭ್ಯ ಇವೆ. ವಿವಿಧ ಹೈಕೋರ್ಟ್‌ಗಳ 4,983 ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಿಗೆ ಅನುವಾದ ಮಾಡಲಾಗಿದ್ದು, ಅವು ಆಯಾ ಹೈಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಲಭ್ಯ ಇವೆ.

ತೀರ್ಪುಗಳ ಅನುವಾದ ಕಾರ್ಯ ಸುಗಮವಾಗಲೆಂದು ಕೇಂದ್ರ ಕಾನೂನು ಸಚಿವಾಲಯವು ಗುಜರಾತಿ, ಮಲಯಾಳ, ಮರಾಠಿ, ಪಂಜಾಬಿ, ತಮಿಳು, ತೆಲುಗು, ಉರ್ದು ಮತ್ತು ಬಂಗಾಳಿ ಭಾಷೆಗಳಲ್ಲಿ ಕಾನೂನು ಶಬ್ದಕೋಶವನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಆದರೆ ಈ ಪಟ್ಟಿಯಲ್ಲಿ ಕನ್ನಡ ಶಬ್ದಕೋಶ ಇಲ್ಲದಿರುವುದು ನಮ್ಮ ಪ್ರತಿನಿಧಿಗಳ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ.

ಇಂಗ್ಲಿಷ್‌ನಲ್ಲಿರುವ ತೀರ್ಪನ್ನು ಯಥಾವತ್ತಾಗಿ ಪ್ರಾದೇಶಿಕ ಭಾಷೆಗೆ ಭಾಷಾಂತರಿಸಿದರೆ ಅದು ಜನಸಾಮಾನ್ಯರಿಗೆ ಅರ್ಥವಾಗುತ್ತದೆಯೇ ಎಂಬುದು ಪ್ರಶ್ನೆ. ಏಕೆಂದರೆ, ತೀರ್ಪುಗಳಲ್ಲಿರುವ ಪದಗುಚ್ಛ ಕೆಲವೊಮ್ಮೆ ಕಾನೂನು ತಜ್ಞರಿಗೂ ಅರ್ಥವಾಗುವುದಿಲ್ಲ. ಬ್ರಿಟಿಷ್ ಆಡಳಿತವಿದ್ದ ಕಾಲದಲ್ಲಿ ಬಳಸುತ್ತಿದ್ದ ಲ್ಯಾಟಿನ್ ಪದಗಳನ್ನು ಈಗಲೂ ತೀರ್ಪುಗಳಲ್ಲಿ ಕಾಣಬಹುದು. ಉದಾಹರಣೆಗೆ, Mutatis Mutandis, Ipso facto ಎಂಬಂತಹ ಪದಗಳನ್ನು ಕನ್ನಡಕ್ಕೆ ಭಾಷಾಂತರಿಸಿದರೂ ಅವು ಓದುಗರಿಗೆ ಅರ್ಥವಾಗುವುದು ಸಂದೇಹಾಸ್ಪದ. ಆದರೆ, ಹೀಗೆ ಮಾಡದೆ ಅನ್ಯಮಾರ್ಗವಿಲ್ಲ. ನ್ಯಾಯಾಲಯ ನೀಡುವ ತೀರ್ಪು ಹೇಗಿರುತ್ತದೋ ಅದೇ ರೀತಿಯಲ್ಲಿ ಭಾಷಾಂತರಿಸದಿದ್ದರೆ ಜನರಲ್ಲಿ ಗೊಂದಲ ಉಂಟಾಗುವ ಸಂಭವ ಇರುತ್ತದೆ. ಜೊತೆಗೆ ನ್ಯಾಯಾಲಯ ನಿಂದನೆಗೆ ಗುರಿಯಾಗುವ ಸಾಧ್ಯತೆಯೂ ಇರುತ್ತದೆ. ತೀರ್ಪಿನ ಭಾಷಾಂತರದ ಜೊತೆಗೆ ಅದರ ಸಾರಾಂಶವನ್ನು ಸರಳ ಭಾಷೆಯಲ್ಲಿ ನೀಡಿ, ಮೂಲ ತೀರ್ಪನ್ನೂ ಓದಿಕೊಳ್ಳಬೇಕೆಂಬ ಸೂಚನೆ ನೀಡಿದರೆ ಸಮಸ್ಯೆ ಬಗೆಹರಿಯಬಹುದು.

ಇತ್ತೀಚಿನ ವರ್ಷಗಳಲ್ಲಿ ನ್ಯಾಯಾಲಯಗಳು ನೀಡುತ್ತಿರುವ ತೀರ್ಪುಗಳ ವಿವರವುಳ್ಳ ಪುಟಗಳ ಸಂಖ್ಯೆ ಬಹಳಷ್ಟು ಹೆಚ್ಚಿದೆ. ತೀರ್ಪು ಬರೆಯುವಾಗ ನ್ಯಾಯಾಲಯಗಳು ತಮ್ಮ ಮುಂದಿರುವ ಪ್ರಕರಣವನ್ನು ಹಲವು ನೆಲೆಗಳಿಂದ ಪರಿಶೀಲಿಸಬೇಕಾದ ಕಾರಣ ಸುದೀರ್ಘವಾದ ವಿವರಣೆ ಅಗತ್ಯವೂ ಆಗಿರಬಹುದು. ಐವತ್ತು ಮತ್ತು ಅರವತ್ತರ ದಶಕದವರೆಗಿನ ತೀರ್ಪುಗಳು ಐದಾರು ಪುಟಗಳನ್ನು ಮೀರುತ್ತಿರಲಿಲ್ಲ. ವಿಷಯ ಎಷ್ಟೇ ಮುಖ್ಯವಾಗಿದ್ದರೂ ತೀರ್ಪು ಪುಟಗಟ್ಟಲೆ ಇರುತ್ತಿರಲಿಲ್ಲ. ಆದರೆ ಒಂದೆರಡು ದಶಕಗಳಿಂದ ತೀರ್ಪುಗಳು 500ರಿಂದ 1,000 ಪುಟ ಮೀರುವುದನ್ನು ನೋಡುತ್ತಿದ್ದೇವೆ. ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೀಸಲಾತಿಗೆ ಸಂಬಂಧಿಸಿದ 1951ರ ಚಂಪಕಮ್ ದೊರೈರಾಜ್ ಪ್ರಕರಣದ ತೀರ್ಪು ನಾಲ್ಕು ಪುಟಗಳನ್ನು ಮೀರಿರಲಿಲ್ಲ. ಇದೇ ವಿಷಯವಾಗಿ 1992ರಲ್ಲಿ ಬಂದ ಇಂದಿರಾ ಸಾಹ್ನಿ ಪ್ರಕರಣದ ತೀರ್ಪು ಸುಮಾರು 560 ಪುಟಗಳಷ್ಟು ಹರಡಿಕೊಂಡಿದೆ.



ಭಾರತದ ಪಥ ಬದಲಿಸಿದ 1973ರ ಕೇಶವಾನಂದ ಭಾರತಿ ಪ್ರಕರಣದ ತೀರ್ಪು 700 ಪುಟಗಳನ್ನು ಒಳಗೊಂಡಿದ್ದರೆ, ನಂತರ ಬಂದ ಎಸ್.ಪಿ.ಗುಪ್ತಾ ಪ್ರಕರಣದ ತೀರ್ಪು 800 ಪುಟಗಳಿಗೂ ಅಧಿಕ. ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದ ತೀರ್ಪು 1,042 ಪುಟಗಳಷ್ಟು ಇದ್ದರೆ, ಆಧಾರ್ ಕುರಿತ (ನ್ಯಾಯಮೂರ್ತಿ ಪುಟ್ಟಸ್ವಾಮಿ) ತೀರ್ಪು 1,448 ಪುಟಗಳನ್ನು ಒಳಗೊಂಡಿದೆ. ವಕೀಲರು, ಕಾನೂನು ಪಾಠ ಮಾಡುವವರು ಹಾಗೂ ಕಾನೂನು ವಿದ್ಯಾರ್ಥಿಗಳು ಈ ತೀರ್ಪುಗಳನ್ನು ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಈ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳದೇ ಇರುವ ಸುಶಿಕ್ಷಿತರು ಆಸಕ್ತಿ ಹೊಂದಿದ್ದಾಗಿಯೂ ಈ ಬಗೆಯ ದೀರ್ಘ ತೀರ್ಪುಗಳನ್ನು ಓದಲು ಉತ್ಸಾಹ ತೋರುವರೇ ಎಂಬುದು ಪ್ರಶ್ನೆ. ಬಳಸುವ ಭಾಷೆಯೂ ಕೆಲವೊಮ್ಮೆ ತೊಡಕಾಗಿ ಪರಿಣಮಿಸಬಹುದು.

ಬ್ರಿಟನ್, 2010ರಲ್ಲಿ ಪ್ಲೇನ್ ರೈಟಿಂಗ್ ಆ್ಯಕ್ಟ್ ಜಾರಿಗೊಳಿಸಿದಾಗಿನಿಂದ ತೀರ್ಪುಗಳ ಗುಣಮಟ್ಟ ಸುಧಾರಿಸಿದೆ ಎಂದು ವರದಿಗಳು ತಿಳಿಸುತ್ತವೆ. ಕೆಲವು ತಿಂಗಳ ಹಿಂದೆ, ನಮ್ಮ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಎ.ಎಸ್. ಬೋಪಣ್ಣ ಅವರು ನ್ಯಾಯಾಲಯದ ತೀರ್ಪುಗಳ ಬಗ್ಗೆ ತಮ್ಮ ಅನಿಸಿಕೆ ವ್ಯಕ್ತಪಡಿಸುತ್ತಾ ‘ತೀರ್ಪುಗಳು ಓದುಗರಲ್ಲಿ ಗೊಂದಲ ಉಂಟುಮಾಡಬಾರದು’ ಎಂದಿದ್ದಾರೆ.

ಈ ಕಾರಣಗಳಿಂದ, ಕನ್ನಡದಲ್ಲಿ ಕಾನೂನು ಸಾಹಿತ್ಯವನ್ನು ಬೆಳೆಸುವುದು ಅವಶ್ಯವೆಂದು ತೋರುತ್ತದೆ. ಕಾನೂನು ವಿದ್ಯಾರ್ಥಿಗಳಿಗೆ ಬೇಕಾಗುವ ಪಠ್ಯಪುಸ್ತಕಗಳು ಪ್ರಕಟವಾಗುತ್ತಿದ್ದರೂ ನ್ಯಾಯಾಂಗದಲ್ಲಿ ಆಗುತ್ತಿರುವ ಬೆಳವಣಿಗೆ, ಮಹತ್ವದ ತೀರ್ಪುಗಳ ಬಗ್ಗೆ ಚರ್ಚೆ, ವಿಚಾರ ವಿನಿಮಯ ಆಗುತ್ತಿಲ್ಲ. ತೀರ್ಪುಗಳ ವಿಷಯ ಹಾಗಿರಲಿ, ಅದೆಷ್ಟೋ ಕಾನೂನುಗಳು ಕನ್ನಡದಲ್ಲಿ ಲಭ್ಯವಿಲ್ಲ. ಉದಾಹರಣೆಗೆ, ಗ್ರಾಹಕ ಸಂರಕ್ಷಣಾ ಅಧಿನಿಯಮವು ಮೊದಲು 1986ರಲ್ಲಿ ನಂತರ ಹೊಸ ರೂಪದಲ್ಲಿ 2019ರಲ್ಲಿ ಜಾರಿಗೆ ಬಂದಿದೆ. ಆದರೆ ಈ ಕಾಯ್ದೆಯು ಕರ್ನಾಟಕ ರಾಜ್ಯ ಸರ್ಕಾರದ ಅಥವಾ ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗದ ವೆಬ್‌ಸೈಟ್‌ನಲ್ಲಿ ಲಭ್ಯವಿಲ್ಲ. ಇದು ಒಂದು ಉದಾಹರಣೆ ಮಾತ್ರ.

ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಕಾವ್ಯದಂತಹ ಪ್ರಕಾರಗಳಿಗೆ ಸಿಕ್ಕಿರುವಷ್ಟು ಮನ್ನಣೆಯು ಜ್ಞಾನ ಸಾಹಿತ್ಯಕ್ಕೆ ಸಿಕ್ಕಿಲ್ಲ. ವಿಶೇಷವಾಗಿ ಕನ್ನಡದಲ್ಲಿ ಕಾನೂನು ಸಾಹಿತ್ಯ ಬಹಳಷ್ಟು ಹಿಂದುಳಿದಿದೆ. ಸರ್ಕಾರ ಮತ್ತು ಅನೇಕ ಸ್ವಯಂಸೇವಾ ಸಂಸ್ಥೆಗಳು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಉತ್ತೇಜಿಸಲು ಪ್ರಶಸ್ತಿ, ಪುರಸ್ಕಾರ, ಬಹುಮಾನದಂತಹವನ್ನು ನೀಡುತ್ತಿವೆ. ಪರಿಸರ, ಕೃಷಿಯಂತಹ ವಿಷಯಗಳಿಗೆ ಪ್ರಶಸ್ತಿಗಳಿವೆ. ಆದರೆ ಕನ್ನಡದಲ್ಲಿ ಕಾನೂನು ಸಾಹಿತ್ಯ ರಚಿಸುವವರಿಗೆ ಯಾವುದೇ ಪ್ರೋತ್ಸಾಹವಿಲ್ಲ.

ಕರ್ನಾಟಕ ಕಾನೂನು ವಿಶ್ವವಿದ್ಯಾಲಯ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಭಾಷಾಂತರ ಇಲಾಖೆ ಹಾಗೂ ಕಾನೂನು ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿರುವ ಸ್ವಯಂಸೇವಾ ಸಂಸ್ಥೆಗಳು ಕನ್ನಡ ಕಾನೂನು ಸಾಹಿತ್ಯದ ಬೆಳವಣಿಗೆ ಬಗ್ಗೆ ಆಸಕ್ತಿ ತೋರಬೇಕಿದೆ.

ಚುರುಮುರಿ



ಪ್ರೊ.ಲಿಂ. ಕ್ರಿಕೆಟ್!

● ಆನಂದ

‘ಪ್ರೊಡಕ್ಟಿವಿಟಿ ಲಿಂಕ್ಡ್ ಬೋನಸ್ ಅಂದರೆ ಏನು?’ ಎಂದು ಮಡದಿ ಕೇಳಿದಳು.

‘ಕಾರ್ಖಾನೇಲಿ ಉತ್ಪಾದನೆ ಹೆಚ್ಚಾದರೆ ಆದಾಯ ಹೆಚ್ಚುತ್ತದೆ. ಅದರಿಂದ ಲಾಭ ಹೆಚ್ಚಾಗಿ ನೌಕರರಿಗೆ ಬೋನಸ್ ಹೆಚ್ಚು ಸಿಗುತ್ತೆ. ಅದೇ ಪ್ರೊ.ಲಿಂ.ಬೋ.’ ಎಂದು ವಿವರಿಸಿದೆ.

‘ನಮ್ಮ ಕ್ರಿಕೆಟ್ಟಿನಲ್ಲೂ ಇದು ಜಾರಿಗೆ ಬರಬೇಕು’ ಎಂದಾಗ ನನಗೆ ಕೊಹ್ಲಿ ಸೊನ್ನೆಗೆ ಔಟಾದಾಗ ಆಗುವಂತೆ ಶಾಕ್ ಆಯಿತು. ‘ಕ್ರಿಕೆಟ್ಟಿಗೂ ಬೋನಸ್‌ಗೂ ಏನು ಸಂಬಂಧ?’ ಎಂದು ಕೇಳಿದೆ.

‘ಇದೇರಿ. ಈಗ ಆಟಗಾರರಿಗೆ ಕೋಟಿಗಟ್ಟಲೆ ಸಂಭಾವನೆ ಕೊಡ್ತಿಲ್ಲವೆ? ಅವರು ಹೇಗೇ ಆಡಲಿ ಬ್ಯಾಂಕಿಗೆ ದುಡ್ಡು ಜಮಾ ಆಗುತ್ತೆ. ಸರ್ಕಾರಿ ನೌಕರರ ಸಂಬಳದ ತರಹ. ಕೆಲಸ ಮಾಡಲಿ ಬಿಡಲಿ 1ನೇ ತಾರೀಕು ಪಗಾರ ಗ್ಯಾರಂಟಿ’.

‘ಅದಕ್ಕೇ ತಾನೆ ಎಲ್ಲರೂ ಸರ್ಕಾರಿ ನೌಕರಿಗೆ ಹಂಬಲಿಸೋದು’.

‘ಹಾಗೆ ನಿರಾಯಾಸವಾಗಿ ಸಂಭಾವನೆ ಕೊಡೋ ಬದಲು ಅದನ್ನು ಆಟಕ್ಕೆ ಲಿಂಕ್ ಮಾಡಿದರೆ ಹೇಗೆ? ರನ್ನಿಗೆ ಇಷ್ಟು, ವಿಕೆಟ್ ತಗೊಂಡರೆ ಇಷ್ಟು, ಗೆದ್ದರೆ ಇಷ್ಟು ಅಂತ ಸಂಭಾವನೆ ನಿಗದಿ ಮಾಡಿದರೆ ನಮ್ಮ ಕ್ರಿಕೆಟಿಗರು ಹಣದ ಆಸೆಗಾದರೂ ಚೆನ್ನಾಗಿ ಆಡಬಹುದೇನೊ, ಏನಂತೀರಿ?’

ಐಡಿಯಾ ಅಚ್ಛಾ ಹೈ ಎಂದು ಅನಿಸಿತು.

‘ಹಾಗೇ ನೋಡಿ. ಈ ಐದು ದಿನದ ಆಟಾನೇ ಬೇಡ. ಹಿಂದೆಲ್ಲ ಐದು ದಿನ ಆಟ, ಮಧ್ಯೆ ಒಂದು ದಿನ ರೆಸ್ಟ್. ಅಂದು ಎಲ್ಲರ ಬಾಯಲ್ಲೂ 3 ದಿನ ಆಟ ಹೇಗಿತ್ತು, ಹೇಗಿರಬೇಕಿತ್ತು ಮತ್ತು ಮುಂದಿನ 2 ದಿನ ಹೇಗಿರಬಹುದು ಎಂದು ವಿಶ್ಲೇಷಣೆ...’

‘ಈಗೀಗ 3 ದಿನದ ಮೇಲೆ ಆಟ ಮುಂದುವರಿಯೋದೇ ಇಲ್ಲ’ ನಾನೆಂದೆ.

‘ಹೌದು, 5 ದಿನದ ಸೀಸನ್ ಟಿಕೆಟ್ ಕೊಂಡೋರಿಗೆ ಲಾಸ್. ಅದಕ್ಕೇ ಮೂರು ದಿನದ ಟೆಸ್ಟ್ ಆಡಬೇಕು, ಅಟ್‌ಲೀಸ್ಟ್ ಭಾರತದಲ್ಲಿ. ಸಮಯ ಉಳಿಯುತ್ತೆ’.

‘ಆಗ 5 ಪಂದ್ಯಗಳ ಸರಣಿ ಬದಲು 8 ಪಂದ್ಯಗಳ ಸರಣಿ ಆಡಬಹುದು’.

‘ಆಟಗಾರರಿಗೆ ದುಡಿದುಕೊಳ್ಳಲು ಇನ್ನಷ್ಟು ಅವಕಾಶ ಸಿಗುತ್ತೆ’.

ಸಂಗತ

ಸಾವನ್ನು ತೆರೆದಿಡುವ ಪರಿ...

ಪರರ ಸಾವು ನಮ್ಮ ಪಾಲಿಗೆ ಕಟು ವಿಮರ್ಶಕ, ರಾಜಿಯಾಗದ ಒಂದು ಜಾಗೃತಿ

● ಯೋಗಾನಂದ


ಕಿರುತೆರೆ, ಸಿನಿಮಾ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದ ನಿರ್ದೇಶಕ ಗುರುಪ್ರಸಾದ್ ಯಾರೂ ಒಪ್ಪದ ಹಾದಿಯಲ್ಲಿ ಅಕಾಲಿಕ ಅಂತ್ಯ ಕಂಡಿದ್ದು ಅತೀವ ಬೇಸರ ತಂದಿತು. ನೇಣು ಬಿಗಿಗೊಳ್ಳುವ ಮುನ್ನ ಮೇಲೊಬ್ಬ ನಿರ್ದೇಶಕರು ‘ಇರಿ, ಇನ್ನೊಂದು ಶಾಟ್ ತೆಗೆಯೋಣ’ ಎಂದಿದ್ದರೂ ವಿಷಗಳಿಗೆಗೆ ಅಂಕುಶ ಬೀಳುತ್ತಿತ್ತೇನೊ. ಪ್ರಸಾದರ ಸುತ್ತ ಧ್ವನಿಸಿದ ಟೀಕೆಗಳು ಚರ್ಚೆಗೆ ಗ್ರಾಸವಾದವು. ಅವು ಹೇಗೂ ಇರಲಿ, ಸಾಧಕರು ಬಾಳಿದ ಬಗೆಯನ್ನು ವಿಸ್ತಾರವಾಗಿ ನೋಡಿ ಕಲಿಯುವ ಅಗತ್ಯವನ್ನು ಜಿಜ್ಞಾಸೆಯು ಹೊಸ ದೃಷ್ಟಿಯಲ್ಲಿ ಅನಾವರಣಗೊಳಿಸಿತು ಎನ್ನೋಣ.

ಗತಿಸಿದವರನ್ನು ಕುರಿತು ಆಡುವಾಗ ಉತ್ತಮವಾದವನ್ನೇ ಆಯ್ಕೆ ಮಾಡಿಕೊಳ್ಳಬೇಕೆಂದಿಲ್ಲ. ಅವರ ಸದ್ಗುಣಗಳನ್ನಲ್ಲದೆ, ಅವಗುಣಗಳನ್ನೂ ಪ್ರಿಯವಾದ ಮಾತುಗಳಲ್ಲಿ ಸಾದರಪಡಿಸಿದರೆ ಪ್ರಮಾದವೇನಿಲ್ಲ. ವಾಸ್ತವವನ್ನು ಬದಿಗಿರಿಸಿ ಹೊಗಳಿಕೆಗಳನ್ನು ಹಿಗ್ಗಿಸಿದರೆ ವ್ಯಕ್ತಿಯನ್ನು ಇಡಿಯಾಗಿ ನೋಡುವುದು ಅಸಾಧ್ಯ. ಗತಿಸಿದವರು ನಮ್ಮಂತೆಯೇ ಮನುಷ್ಯರಾಗಿದ್ದರು, ಅವರವರದೇ ತಪ್ಪುಗಳಿದ್ದವು, ಮನುಷ್ಯರೆಲ್ಲ ‘ಪರಿಪಕ್ವ ಅಪರಿಪಕ್ವರು’ ಎನ್ನುವುದು ದಿಟ. ಆದರೆ ಸಮಾಜದಲ್ಲಿ ಸಾಧಕರೆನ್ನಿಸಿ ಮರಣ ಹೊಂದಿದವರನ್ನು ವಸ್ತುನಿಷ್ಠವಾಗಿ ವ್ಯಾಖ್ಯಾನಿಸುವ ಆಯ್ಕೆ ನಮಗಿದೆ. ತೆರಳಿದವರ ಬದುಕು ನಮಗೆ ಮೀಮಾಂಸೆಯಾಗಬೇಕು. ಅವರ ಜೀವನದ ಸಂಗತಿಗಳಲ್ಲಿ ನಮಗೆ ಯಾವುದು ಸ್ವೀಕರಿಸಲು ಅರ್ಹ, ಯಾವುದು ವರ್ಜಿಸಲರ್ಹ ಎನ್ನುವುದನ್ನು ಚಿಂತನೆಗೆ ಒಳಪಡಿಸಬೇಕು.

ಮೃತರ ಕುಟುಂಬದವರು ಮತ್ತು ಆಪ್ತರ ಮನಸ್ಸು ನೋಯದಂತಹ ಸೃಜನಶೀಲ ವಿಮರ್ಶೆ ಸ್ವಾಗತಾರ್ಹ. ಪ್ರತಿಭಾಶಾಲಿಗಳೇ ಆಗಿದ್ದಿರಲಿ ಅವರ ಬದುಕಿನ ಪುಟಗಳನ್ನು ಒರೆಗಲ್ಲಿಗೆ ಹಚ್ಚದಿದ್ದರೆ ಇತಿಹಾಸದ ತಪ್ಪುಗಳು ಮರುಕಳಿಸುತ್ತವೆ. ಹಾಗಾಗಿ, ಈ ದಿಸೆಯಲ್ಲಿ ಸಮತೋಲನದ ಅವಲೋಕನ ಮೌಲಿಕ. ಸಂದ ಸಂತರು, ದಾರ್ಶನಿಕರು, ಶಿಕ್ಷಣ ತಜ್ಞರೆಲ್ಲರೂ ಒಕ್ಕೊರಲಿನಿಂದ ಹೇಳಿದ್ದು ಅದೇ ನುಡಿಯೆ- ತಮ್ಮ ಬದುಕು ತೆರೆದ ಪುಸ್ತಕ ಎಂದು. ‘ಸತ್ಯದೊಂದಿಗೆ ನನ್ನ ಪ್ರಯೋಗಗಳು’ ಎನ್ನುವುದೇ ಗಾಂಧಿಯವರ ಆತ್ಮಕಥೆ. ‘ತುಂಬಲಾಗದ ನಷ್ಟ’, ‘ಮತ್ತೆ ಜನಿಸಿ ಬನ್ನಿ’, ‘ಕಳೆದುಕೊಂಡ ನಾವು ಅನಾಥರು’ ಎಂಬಂತಹ ಸಿದ್ಧಮಾದರಿಯ ಭಾವಗಳು ಇನ್ನೆಷ್ಟು ಕಾಲ ನಮ್ಮನ್ನು ಆಳಬೇಕು? ನಿಧನರಾದರು ಎನ್ನಲೂ ಹಿಂಜರಿದು ಅದಕ್ಕೆ ಪರ್ಯಾಯವಾಗಿ, ನೇಪಥ್ಯಕ್ಕೆ ಸಂದರು, ಕೊನೆಯುಸಿರೆಳೆದರು, ದೂರವಾದರು ಎಂದೆಲ್ಲ ಮೃದುನುಡಿಗಳನ್ನೇ ಬಳಸುತ್ತೇವೆ. ಮೃತರನ್ನು ಕೊಂಡಾಡದಿದ್ದರೆ ಶಿಷ್ಟಾಚಾರಕ್ಕೆ ಚ್ಯುತಿ ಎಂದೇ ಪರಿಗಣನೆ. ಮಳೆ, ಬಿಸಿಲು, ನೆರೆ, ಭೂಕಂಪದಂತಹದೇ ಒಂದು ನೈಸರ್ಗಿಕ ನಿಯಮ ನಮ್ಮನ್ನು ದಿಗ್ಭ್ರಮೆಗೊಳಿಸ ಬಾರದಲ್ಲವೆ?

ಶ್ರದ್ಧಾಂಜಲಿ ಸಭೆಗಳಲ್ಲಿನ ಯಾಂತ್ರಿಕ ಮಾತುಗಳು ಅಥವಾ ಮೈಕ್ ಮುಂದೆ ಪುಟಿಯುವ ವಿಷಾದವೇ ಅಗಲಿದವರ ಬಗೆಗಿನ ನೋಟಗಳಲ್ಲ ಎಂದು ಅರಿಯುವಷ್ಟು ಪ್ರಬುದ್ಧತೆ ಜನರಿಗಿದೆ. ಈಚೆಗೆ ಒಂದಲ್ಲೊಂದು ದೌರ್ಬಲ್ಯಕ್ಕೊಳಗಾಗಿ ತಮ್ಮ ಅಕಾಲ ಮರಣಕ್ಕೆ ತಾವೇ ಕಾರಣರಾಗುವ ಕುಶಲಮತಿಗಳ ಸಂಖ್ಯೆ ಹೆಚ್ಚಾಗುತ್ತಿರುವುದು ದುರ್ದೈವ. ಸಾಮರ್ಥ್ಯ, ಮೇಧಾಶಕ್ತಿ ನಡುವೆ ಕನಿಷ್ಠ ಸಹನೆಯಿದ್ದಿದ್ದರೆ ಅವರು ಸಮಾಜಕ್ಕೆ ಇನ್ನಷ್ಟು ನೀಡುತ್ತಿದ್ದರು. ದುಡುಕಿದ ಪ್ರತಿಭಾನ್ವಿತರಿಂದ ಒಳ್ಳೆಯ ಮಾದರಿಯಂತೆಯೆ ಒಳ್ಳೆಯ ಎಚ್ಚರಿಕೆಯೂ ಜನಮಾನಸಕ್ಕೆ ಅನಾವರಣಗೊಂಡಿರುತ್ತದೆ.

ಟಿ.ಪಿ.ಕೈಲಾಸಂ ಅವರನ್ನು ಅವರ ಆಪ್ತರೊಬ್ಬರು ‘ಏನು ಸಾರ್, ಇಷ್ಟೊಂದು ಧೂಮಪಾನ? ಮಹಾತ್ಮ ಗಾಂಧಿಯವರ ಸರಳತೆ, ಸದಭ್ಯಾಸಗಳು ನಿಮ್ಮನ್ನು ಪ್ರಭಾವಿಸಬಹುದಿತ್ತಲ್ಲ’ ಅಂತ ಪ್ರಶ್ನಿಸಿದರಂತೆ. ಅದಕ್ಕೆ ಕೈಲಾಸಂ ‘ನಿಜವೆ, ಗಾಂಧೀಜಿ ಒಂದು ಉದಾಹರಣೆ. ನಾನೋ ಒಂದು ಜಾಗೃತಿ’ ಎಂದರಂತೆ! ಸಾವೆನ್ನುವುದು ಬದುಕು ಮತ್ತು ಸಮಯದ ಪರಿಮಿತವನ್ನು ಬೋಧಿಸುತ್ತದೆ, ಬದುಕಿನ ಶೈಲಿಯನ್ನು ಸುಧಾರಿಸುತ್ತದೆ. ಒಬ್ಬರ ಮರಣ ನಮ್ಮನ್ನು ಬದ್ಧತೆ ಮತ್ತು ನಿರ್ವಹಿಸಬೇಕಾದ ಕರ್ತವ್ಯದತ್ತ ಸೆಳೆಯುತ್ತದೆ. ಈ ದೃಷ್ಟಿಯಿಂದ ನಮ್ಮ ಪಾಲಿಗೆ ಪರರ ಸಾವು ಕಟು ವಿಮರ್ಶಕ, ರಾಜಿಯಾಗದ ಒಂದು ಜಾಗೃತಿ. ಹೇಗೆ ಬದುಕಬೇಕೆನ್ನುವುದನ್ನು ಕಲಿಯಲು ಇಡೀ ಬದುಕು ಸಾಲದಂತೆ. ಅದಕ್ಕೂ ಅದ್ಭುತವೆಂದರೆ, ಹೇಗೆ ಸಾಯಬೇಕೆನ್ನುವುದನ್ನು ಕಲಿಯಲೂ ಇಡೀ ಬದುಕು ಸಾಲದು!



ಆಪ್ತೇಷ್ಟರ ಅಗಲಿಕೆ ನಮ್ಮನ್ನು ದುಃಖಿತರನ್ನಾಗಿಸುವುದು ಸ್ವಾಭಾವಿಕ. ಆದರೆ ಅದು ಮಿತಿಮೀರಿ ಕಾಡಿದರೆ ವೃಥಾ ಒಂಟಿತನ, ಆಯಾಸ, ಭಯ, ಖಿನ್ನತೆ. ಜನಪದರು ಸಾವನ್ನು ನಿಷ್ಠುರವಾಗಿಯೇ ತೆರೆದಿಡುವ ಪರಿ ನಮ್ಮನ್ನು ಕಿವಿಮಾತಿನಿಂದ ಸಂತೈಸುವುದೇ ವಿನಾ ಕೆರಳಿಸದು: ‘ಸಾವಿನ ಮನೆಯಲ್ಲಿ ಯಾರು ಕೆಟ್ಟರೆಂದರೆ ಸತ್ತವರೇ!’ ಅಗಲಿ ಹೋದವರು ಆರೋಗ್ಯ ಕಾಪಾಡಿಕೊಂಡು ಮತ್ತಷ್ಟು ದಿನ ಬದುಕಬಹುದಿತ್ತೆಂಬ ಆಶಯವೂ ಈ ಒರಟು ಉದ್ಗಾರದಲ್ಲಿದೆ. ತಮ್ಮ ಇಬ್ಬರು ಗಂಡುಮಕ್ಕಳ ಪೈಕಿ ಹಿರಿಯವನು ಆಕಸ್ಮಿಕವಾಗಿ ಅಸುನೀಗಿದಾಗ, ದಂಪತಿಗೆ ಗುರುವೊಬ್ಬರು ‘ಒಬ್ಬನೇ ಮಗ ಎಂದು ತಿಳಿಯಿರಿ’ ಎಂದು ಸಮಾಧಾನಿಸಿದರು. ಕಿರಿಯ ಮಗ ತನ್ನ ಅಪ್ಪ, ಅಮ್ಮನಿಗೆ ‘ಒಂದು ವೇಳೆ ನಾನೂ ಸತ್ತರೆ ನಾನು ನಿಮ್ಮ ಮಗನೇ ಅಲ್ಲವೆಂದು ಭಾವಿಸುತ್ತೀರ?’ ಎಂದು ಪ್ರಶ್ನಿಸಿದ್ದ. ‘ಜನ ನನ್ನನ್ನು ಎಷ್ಟೊಂದು ಪ್ರೀತಿಸುತ್ತಾರೆ. ನಿನ್ನ ಮೇಲೆ ಅವರಿಗೆ ಏಕೆ ಅಷ್ಟೊಂದು ದ್ವೇಷ?’ ಅಂತ ಬದುಕು ಸಾವನ್ನು ಕೇಳಿತಂತೆ. ಅದಕ್ಕೆ ಸಾವು ಉತ್ತರಿಸಿದ್ದು: ‘ಏಕೆಂದರೆ ನೀನು ಸುಂದರ ಸುಳ್ಳು, ನಾನು ನೋವಿನ ನಿಜ’.

ವಾಚಕರ ವಾಣಿ

ಸೈಬರ್ ಅಪರಾಧ: ಬಲಗೊಳ್ಳಲಿ ತಡೆ ವ್ಯವಸ್ಥೆ

ಸೈಬರ್ ಅಪರಾಧಗಳಿಗೆ ಸಂಬಂಧಿಸಿದ, ಸಿಐಡಿಯ ಆರ್ಥಿಕ ಅಪರಾಧಗಳ ವಿಭಾಗದ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರ ಲೇಖನ (ಪ್ರ.ವಾ., ನ. 8) ಸಕಾಲಿಕವಾಗಿದೆ. ಕಾಕತಾಳೀಯವೆಂಬಂತೆ ಇದೇ ದಿನ ಬೆಳಿಗ್ಗೆ 9.55ಕ್ಕೆ ನನಗೊಂದು ಅಪರಿಚಿತ ಫೋನ್ ಕರೆಯೊಂದು ಬಂದಿತು. ‘ಆರ್‌ಬಿಐನ ಮುಂಬೈ ಕಚೇರಿಯಿಂದ ಫೋನ್ ಮಾಡುತ್ತಿದ್ದೇವೆ. ನಿಮ್ಮ ಬ್ಯಾಂಕ್ ಖಾತೆಗಳನ್ನು ಇನ್ನೆರಡು ಗಂಟೆಗಳಲ್ಲಿ ಬ್ಲಾಕ್ ಮಾಡಲಾಗುತ್ತದೆ. ನೀವು ಮಾಡಿರುವ ವಂಚನೆಯ ಕಾರಣದಿಂದ ಹೀಗೆ ಮಾಡಲಾಗುತ್ತಿದೆ. ವಿವರ ತಿಳಿಯಲು 1ನೇ ನಂಬರಿನ ಸಂಖ್ಯೆಯನ್ನು ಒತ್ತಿ’ ಎಂದು ಕರೆ ಮಾಡಿದ ಹೆಣ್ಣುಧ್ವನಿ ನನ್ನನ್ನು ಬೆದರಿಸಿತು. ಇಂತಹ ವಂಚಕ ಕರೆಗಳು ಬೇರೆ ಬೇರೆ ಮೂಲಗಳಿಂದ ಆಗಾಗ ಬರುತ್ತಿದ್ದ ಕಾರಣ, ನಾನು ಆ ಫೋನ್ ನಂಬರನ್ನು ಗುರುತು ಮಾಡಿಕೊಂಡು ಫೋನ್ ಕಾಲ್ ಕಟ್ ಮಾಡಿದೆ. ನೇರವಾಗಿ ‘ಆರ್‌ಬಿಐ ಕಚೇರಿಯಿಂದ’ ಎಂದು ಹೇಳಿದ್ದರಿಂದ ಆರ್‌ಬಿಐನ ಸೈಬರ್ ಅಪರಾಧ ವಿಭಾಗಕ್ಕೆ ದೂರು ಸಲ್ಲಿಸಬೇಕೆಂದು ಆಲೋಚಿಸಿ, ಆರ್‌ಬಿಐನಲ್ಲಿ ಕೆಲಸ ಮಾಡಿ ನಿವೃತ್ತರಾಗಿರುವ ನನ್ನ ಪರಿಚಯದವರೊಬ್ಬರನ್ನು ವಿಚಾರಿಸಿದೆ. ‘ಅಂತಹ ಯಾವುದೇ ವಿಭಾಗ ಆರ್‌ಬಿಐನಲ್ಲಿ ಇಲ್ಲ. ನೀವು ನೇರವಾಗಿ ಪೊಲೀಸ್ ಇಲಾಖೆಯ ಸೈಬರ್ ಅಪರಾಧ ವಿಭಾಗಕ್ಕೆ ದೂರು ಸಲ್ಲಿಸಿ’ ಎಂದು ಹೇಳಿದರು. ಹಾಗಾಗಿ ಮತ್ತು ಸಲೀಂ ಅವರ ಲೇಖನದಲ್ಲಿ ತಿಳಿಸಿರುವುದನ್ನು ಮನಗಂಡು, ಭಾರತೀಯ ಸೈಬರ್ ಅಪರಾಧ ದೂರು ಪೋರ್ಟಲ್‌ನಲ್ಲಿ (cybercrime.gov.in) ದೂರು ಸಲ್ಲಿಸಲು ಮುಂದಾದೆ. ನನ್ನ ಎಲ್ಲಾ ಮಾಹಿತಿಗಳನ್ನು ಬರೆದು ದೂರಿನ ವಿವರ ಬರೆಯಬೇಕು ಎನ್ನುವಷ್ಟರಲ್ಲಿ ಆ ಪೋರ್ಟಲ್ ಕಾರ್ಯ ಸ್ಥಗಿತವಾಯಿತು. ನಂತರ ಎರಡು- ಮೂರು ಬಾರಿ ಪ್ರಯತ್ನ ಮಾಡಿದಾಗಲೂ ಅದೇ ಸ್ಥಿತಿ ಕಂಡುಬಂತು.

ಪೊಲೀಸ್ ಇಲಾಖೆಯ ಕಾರ್ಯವೈಖರಿಯೇ ಹೀಗಾದರೆ ಇನ್ನು ದೂರು ಸಲ್ಲಿಸಲು ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಸಂಬಂಧಿಸಿದವರು ಇದಕ್ಕೆ ಏನಾದರೂ ಪರಿಹಾರ ಸೂಚಿಸಬಹುದೇ?

ಟಿ.ಸುರೇಂದ್ರ ರಾವ್, ಬೆಂಗಳೂರು

ಅಸ್ಪೃಶ್ಯತೆ ಆಚರಣೆ: ಅರಿವು ಮೂಡುವುದೆಂದು?

ಅಸ್ಪೃಶ್ಯತೆ ಎಂಬ ಸಾಮಾಜಿಕ ಕಳಂಕದ ಬಗ್ಗೆ ದೀಪಾ ಹಿರೇಗುತ್ತಿ ಅವರು ಬರೆದಿರುವ ಲೇಖನ (ಸಂಗತ, ನ. 8) ಸಮರ್ಪಕವಾಗಿದೆ. ಆಧುನಿಕ ಯುಗ ಎಂದು ನಾವು ಹೇಳಿಕೊಳ್ಳುತ್ತಿರುವ ಈ ಕಾಲದಲ್ಲಿಯೇ ನಮ್ಮ ಸುತ್ತಮುತ್ತ ಅಸ್ಪೃಶ್ಯತೆ ಆಚರಣೆಗೆ ಸಂಬಂಧಿಸಿದ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಆದರೂ ಬಹಳಷ್ಟು ಜನ ಇದಕ್ಕೆ ಪ್ರತಿಕ್ರಿಯೆಯನ್ನೇ ವ್ಯಕ್ತಪಡಿಸದೆ ಮೌನ ವಹಿಸುತ್ತಾರೆ. ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕಂಡಂತಹ ಸಮ ಸಮಾಜದ ಕನಸು ನೆರವೇರಲು ಇನ್ನೂ ಎಷ್ಟು ಶತಮಾನಗಳು ಬೇಕೋ ಗೊತ್ತಿಲ್ಲ.

ಪರಿಶಿಷ್ಟರನ್ನು ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂಬ ಕಲ್ಪನೆ ಹೇಗೆ ಹುಟ್ಟಿತು? ವಿಜ್ಞಾನ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವ, ಮಂಗಳಗ್ರಹಕ್ಕೂ ಹೋಗಿ ಬಂದಿರುವ ಈ ಕಾಲದಲ್ಲಿ ಹೀನಾತಿಹೀನ ಆಚರಣೆಯಾದ ಜಾತಿ ಪದ್ಧತಿ ರದ್ದಾಗುವುದು ಯಾವಾಗ? ನಾಳೆ ನಮ್ಮ ಮುಂದಿನ ಪೀಳಿಗೆಯು ಜಾತಿ ಹೆಸರಿನಲ್ಲಿ ಹೊಡೆದಾಡಿಕೊಂಡು ನಾಶವಾಗಬಹುದಾದ ಸೂಚನೆಗಳು ನಮಗೆ ಏಕೆ ಗೋಚರಿಸುತ್ತಿಲ್ಲ? ಮಗು ವಿಶ್ವ ಮಾನವನಾಗಲಿ ಎಂದು ಬಯಸುವಷ್ಟು ಜ್ಞಾನದ ಅರಿವು ತಂದೆ– ತಾಯಿಗೆ ಇಲ್ಲವಾಯಿತೇ? ಇನ್ನಾದರೂ ಈ ಸಮಾಜ ಎಚ್ಚೆತ್ತುಕೊಳ್ಳಲಿ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಅವರಂತಹವರ ಜ್ಞಾನಸಾಗರದಲ್ಲಿ ಈಜಿದರೆ, ಅವರ ಆಶಯಗಳ ಕಿಂಚಿತ್ ಅರಿವಾದರೂ ನಮ್ಮಲ್ಲಿ ಮೂಡಬಹುದು.

ಪಲ್ಲವಿ ಶಿವಕುಮಾರ್, ಶಿಕಾರಿಪುರ

ನಿರ್ವಾಹಕರಿಗೂ ಬೇಕು ಚಾಲನಾ ತರಬೇತಿ

ನೆಲಮಂಗಲದ ಸಮೀಪ ಚಾಲಕರೊಬ್ಬರು ಬಿಎಂಟಿಸಿ ಬಸ್ಸನ್ನು ಚಾಲನೆ ಮಾಡುತ್ತಿದ್ದಾಗಲೇ ಹೃದಯಾಘಾತವಾಗಿ ಸೀಟಿನಿಂದ ಕುಸಿದು ಬಿದ್ದಾಗ (ಪ್ರ.ವಾ., ನ. 7) ನಿರ್ವಾಹಕ ಕೂಡಲೇ ಚಾಲಕರ ಸೀಟಿನತ್ತ ಮುನ್ನುಗ್ಗಿ, ಬ್ರೇಕ್ ಹಾಕಿ ಬಸ್ ನಿಲ್ಲಿಸಿ ಸಂಭಾವ್ಯ ಅಪಘಾತವನ್ನು ತಡೆದಿರುವುದು ಸಮಯಪ್ರಜ್ಞೆಯಿಂದ ಎನ್ನುವುದು ಮೆಚ್ಚುವ ಮಾತು. ಆದರೆ, ನಿರ್ವಾಹಕನಿಗೆ ವಾಹನ ಚಾಲನೆಯಲ್ಲಿ ಕೌಶಲ ಇಲ್ಲದೇ ಇದ್ದಿದ್ದರೆ ಅಪಘಾತವಾಗುವ ಸಂಭವವೇ ಹೆಚ್ಚಾಗಿ ಇರುತ್ತಿತ್ತು ಅಲ್ಲವೇ? ಇಂಥ ಸಂಭಾವ್ಯ ಅಪಘಾತಗಳನ್ನು ತಗ್ಗಿಸಲು ನಿರ್ವಾಹಕರಿಗೂ ಕಡ್ಡಾಯವಾಗಿ ಚಾಲನಾ ತರಬೇತಿ ನೀಡಬೇಕು. ಹಾಗೆಯೇ, ನಿರ್ವಾಹಕರಹಿತ ಬಸ್ ವ್ಯವಸ್ಥೆಯನ್ನು ರದ್ದು ಮಾಡುವುದು ಸೂಕ್ತ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ನಿರ್ವಾಹಕರು ಹಿಂದಿನ ಸೀಟಿನಲ್ಲಿ ಕುಳಿತುಕೊಳ್ಳುತ್ತಾರೆ. ಇದಕ್ಕೆ ಬದಲಾಗಿ, ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳುವುದರಿಂದ ಇಂಥ ಅಪಘಾತಗಳನ್ನು ತಪ್ಪಿಸಲು ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಹಾಗೂ ಎಲ್ಲ ಖಾಸಗಿ ವಾಹನಗಳ ಮಾಲೀಕರು ಇಂಥ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಸಾಂಸ್ಕೃತಿಕ ರಂಗ: ಅವಜ್ಞೆ ಸಲ್ಲ

ವಿಜಯನಗರ ಜಿಲ್ಲೆ ರಚನೆಯಾಗಿ ಈ ತಿಂಗಳಿಗೆ ಮೂರು ವರ್ಷ ಆಗುತ್ತದೆ. ವಿಜಯನಗರ ಎಂಬುದು ಹಿಂದೆ ಇದ್ದ ದೊಡ್ಡ ಸಾಮ್ರಾಜ್ಯದ ಹೆಸರು. ಆದರೆ ಈಗಿನ ವಿಜಯನಗರಕ್ಕೆ ಅಗತ್ಯ ಸವಲತ್ತು ಹಾಗೂ ಪ್ರೋತ್ಸಾಹದ ಕೊರತೆ ಇದೆ. ಇತ್ತೀಚೆಗೆ ಪ್ರಕಟಗೊಂಡ ಜಾನಪದ ಪ್ರಶಸ್ತಿಗಳಲ್ಲಿ ಜಿಲ್ಲೆಗೆ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಹೊಸಪೇಟೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿ ಯಾವ ಕಡೆ ನೆಲೆಗೊಂಡಿದೆ ಎಂಬುದು ಅನೇಕ ಕವಿ-ಕಲಾವಿದರಿಗೆ ತಿಳಿದಿಲ್ಲ. ಬಳ್ಳಾರಿ ಮತ್ತು ವಿಜಯನಗರ ಎರಡೂ ಜಿಲ್ಲೆಗಳಿಗೆ ಒಬ್ಬರನ್ನೇ ಸಹಾಯಕ ನಿರ್ದೇಶಕರನ್ನಾಗಿ ನೇಮಿಸಲಾಗುತ್ತದೆ ಮತ್ತು ಅವರು ಬಳ್ಳಾರಿಯಲ್ಲಿಯೇ ಉಳಿಯುತ್ತಾರೆ.

ಈ ಬಗ್ಗೆ ರಾಜ್ಯಮಟ್ಟದ ಅಧಿಕಾರಿಗಳ ಗಮನ ಸೆಳೆದಾಗ ‘ಅವಿಭಜಿತ ಜಿಲ್ಲೆಗೆ ಪ್ರಾತಿನಿಧ್ಯ ಕೊಟ್ಟಾಗಿದೆಯಲ್ಲ’ ಎಂಬ ಮಾತು ಕೇಳಿಬರುತ್ತದೆ. ಈ ಕಾರಣ ಹೇಳಿ ಬಳ್ಳಾರಿ ಜಿಲ್ಲೆಗಷ್ಟೇ ಪ್ರಾತಿನಿಧ್ಯ ಕೊಟ್ಟರೆ ಸಾಕೇ? ಹೊಸ ಜಿಲ್ಲೆಗೆ ಬೇಡವೇ? ಇಲ್ಲಿ ಆಯ್ಕೆ ಮಾಡುವಂಥ ಕಲಾವಿದರೇ ಇಲ್ಲವೇ? ಹೊಸ ಜಿಲ್ಲೆಗೆ ಪ್ರೋತ್ಸಾಹ ಎಂದರೆ ಎಂಥದ್ದು? ಪ್ರತ್ಯೇಕ ಜಿಲ್ಲೆ ಮಾಡಿದ್ದು ಯಾವ ಕಾರಣಕ್ಕೆ? ಜಿಲ್ಲೆಯಲ್ಲಿ ಸಾಂಸ್ಕೃತಿಕ ರಂಗ ಹೀಗೆ ಬಡವಾಗಲು ಬಿಡಬಾರದು. ಏಕೆಂದರೆ ಸಾಂಸ್ಕೃತಿಕ ಬೆಳವಣಿಗೆಯಿಂದಲೇ ಜನರ ಭಾವಕೋಶ ಹಿಗ್ಗುವುದು. ಇಲ್ಲದಿದ್ದರೆ ಜನರ ಮನಃಸ್ಥಿತಿ ಶುಷ್ಕವಾಗುತ್ತದೆ.

ಮೇಟಿ ಕೊಟ್ರಪ್ಪ, ಬಸರಕೋಡು, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕರ್ನಾಟಕ ಸುವರ್ಣ ಮಹೋತ್ಸವದ ಬೆಳಕಿನಲ್ಲಿ ಸಾಹಿತ್ಯದ ಚೆಲ್ಲಾಪಿಲ್ಲಿ ಬಿಂಬಗಳು

ಸುವರ್ಣ ಸಾಹಿತ್ಯ

ಸಶಕ್ತ, ಅಸ್ತವ್ಯಸ್ತ, ರಕ್ತಸಿಕ್ತ

ಕರ್ನಾಟಕದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಿಂತು ನೋಡಿದರೆ ಕಾಣಿಸುವ ಸಾಹಿತ್ಯದ ಬಿಂಬಗಳು ಸಶಕ್ತವಾಗಿ ಆಕರ್ಷಕವಾಗಿ ಕಾಣಿಸಿದರೂ, ಆ ಬಿಂಬಗಳ ಜೊತೆಯಲ್ಲಿನ ಒಡಕು ಗೆರೆಗಳನ್ನೂ ಗಮನಿಸಬೇಕು. ಜೀವಪರ ಸಾಹಿತ್ಯ ಎನ್ನುವುದು ಒಂದು ಗುಂಪಿಗಷ್ಟೇ ಸಾಧ್ಯವಾದರೆ, ಜೀವಪರವಲ್ಲದ ಸಾಹಿತ್ಯವೂ ಇದೆ ಎನ್ನುವುದಾದರೆ, 'ಎಲ್ಲರನ್ನೂ ಒಳಗೊಳ್ಳುವುದು ಸಾಹಿತ್ಯದ ಶಕ್ತಿ-ಗುಣ' ಎನ್ನುವ ಪರಿಕಲ್ಪನೆಯನ್ನೇ ನಾವು ಮರಳಿ ಒರೆಗೆ ಹಚ್ಚಬೇಕೇನೊ?

● ರಘುನಾಥ ಚ.ಹ.

'ನಾನೆಂಬ ಪರಕೀಯ ಮತ್ತು ದಲಿತ ರಾಜಕೀಯ' ಎನ್ನುವುದನ್ನು ಈ ಹೊತ್ತಿನ ಕನ್ನಡ ಸಾಹಿತ್ಯದ ಪ್ರಮುಖ ಲಕ್ಷಣವಾಗಿ ಗುರ್ತಿಸಬಹುದೆ?

ಸಣ್ಣಕಥೆಯನ್ನು ಹಿಂದಿಕ್ಕಿ ಕಾದಂಬರಿ ಪ್ರಕಾರ ಮುನ್ನೆಲೆಗೆ; ಕನ್ನಡದ ಕ್ಲಾಸಿಕ್ ಹಾಗೂ ಕ್ಲಾಸಿಕಲ್ ಸಾಹಿತ್ಯ ಕೃತಿಗಳು ಇಂಗ್ಲಿಷ್‌ಗೆ; ಪ್ರಕಟಣೆಯ ಅವಕಾಶಗಳು ಹೆಚ್ಚಳಗೊಂಡಿರುವುದು ಹಾಗೂ ಸುಲಭಗೊಂಡಿರುವುದು; ಸಾಹಿತ್ಯ ಸಂವಾದಗಳಿಗೆ ವೇದಿಕೆಯಾಗಿ ಜಾಲತಾಣಗಳು ಒದಗಿಬಂದಿರುವುದು; ಪುಸ್ತಕ ಪರಿಚಾರಿಕೆ ಉದ್ಯಮವಾಗಿ ಬದಲಾಗಿ ಪುಸ್ತಕ ಸರಕಾಗಿಯೂ ಬರಹಗಾರ ವ್ಯಾಪಾರಿಯ ರೂಪದಲ್ಲೂ ಕಂಗೊಳಿಸುತ್ತ, ಓದುಗ ಸಹೃದಯಿಯನ್ನು ಗ್ರಾಹಕನ ರೂಪದಲ್ಲಿ ನೋಡುತ್ತಿರುವುದು; ಸಾಮಾಜಿಕ ಜಾಲತಾಣಗಳು ಹೊಸ ಬರಹಗಾರರಿಗೆ ಅಭಿವ್ಯಕ್ತಿಯ ವೇದಿಕೆಯಾಗಿ ಪರಿಣಮಿಸಿರುವುದು; ಬರಹಗಾರರು ಹಾಗೂ ಓದುಗರು ಗುಂಪುಗಳಾಗಿ ಒಡೆದುಹೋಗಿರುವುದು; ಕನ್ನಡ ಸಾಹಿತ್ಯ ಸ್ತ್ರೀವಾದಕ್ಕೆ ತೆರೆದುಕೊಂಡಿರುವುದರ ನಡುವೆಯೂ ಕೆಲವು ಬರಹಗಾರರು ಲಿಂಗಸಂವೇದನೆಯ ಜಡತ್ವ ಹೊಂದಿರುವುದು; ರಾಜಕೀಯಪ್ರಜ್ಞೆಯ ರೂಪದಲ್ಲಿ ಪ್ರತಿಪಕ್ಷಗಳ ಪಾತ್ರ ವಹಿಸುತ್ತಿದ್ದ ಸಾಹಿತಿಗಳು ಆಡಳಿತ ಪಕ್ಷಗಳೊಂದಿಗೂ ಗುರ್ತಿಸಿಕೊಳ್ಳುತ್ತಿರುವುದು– ವರ್ತಮಾನದ ಕನ್ನಡ ಸಾಹಿತ್ಯದ ಕೆಲವು ಪ್ರಮುಖ ಚಲನೆಗಳ ರೂಪದಲ್ಲಿ ನೋಡಬಹುದಾದ ಈ ಎಲ್ಲ ಸಂಗತಿಗಳ ನಡುವೆಯೂ, ಹೊಸ ತಲೆಮಾರಿನ ದಲಿತ ಲೇಖಕರು ಹಾಗೂ ಮುಸ್ಲಿಂ ಬರಹಗಾರರು ಕನ್ನಡ ಸಾಹಿತ್ಯದ ಕೇಂದ್ರದಲ್ಲಿ ನಿಂತಿರುವುದು ಎದ್ದುಕಾಣಿಸುವಂತಿದೆ.

ಸುವರ್ಣ ಕರ್ನಾಟಕ ಸಂದರ್ಭದಲ್ಲಿ ನಿಂತು ಐವತ್ತು ವರ್ಷಗಳ ಕನ್ನಡ ಸಾಹಿತ್ಯವನ್ನು ಬೀಸು ನೋಟದಲ್ಲಿ ಗಮನಿಸಿದಾಗ, ದಲಿತ–ಮುಸ್ಲಿಂ ಬರಹಗಾರರು ಸಾಹಿತ್ಯದ ಮುನ್ನೆಲೆಯಲ್ಲಿ ಕಾಣಿಸಿಕೊಳ್ಳುತ್ತಿರುವುದು ಅಚ್ಚರಿಯ ಸಂಗತಿಯಾಗಿಯೇನೂ ಕಾಣಿಸುವುದಿಲ್ಲ. ಈ ವಿಶಿಷ್ಟ ನಡಿಗೆಯ ಮುನ್ನುಡಿ ರೂಪದಲ್ಲಿ, 1979ರ ಮಾರ್ಚ್ 11ರಂದು ಆರಂಭವಾದ 'ಬಂಡಾಯ ಸಂಘಟನೆ'ಯನ್ನು ಗಮನಿಸಬಹುದು. ಸಾಮಾಜಿಕ ಹಾಗೂ ಸಾಹಿತ್ಯಿಕ ವಲಯದಲ್ಲಿ ಸೃಜನಶೀಲ ಸಂಚಲನೆ ಹುಟ್ಟಿಸುವ ಹಂಬಲದಲ್ಲಿ ರೂಪುಗೊಂಡ ಬಂಡಾಯ ಸಂಘಟನೆ, ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯ ಮಹತ್ವ ಹಾಗೂ ಅಗತ್ಯವನ್ನು ಪ್ರತಿಪಾದಿಸಿತು. ನವೋದಯದ ನರುಗಂಪು ಹಾಗೂ ನವ್ಯದ ಕಡು ಘಾಟಿನ ಸಂದರ್ಭದಲ್ಲಿ, ಅವರೆಡಕ್ಕೂ ಭಿನ್ನ ಧ್ವನಿಯಲ್ಲಿ ದಲಿತ–ಬಂಡಾಯದ ಲೇಖಕರು ಬರೆಯತೊಡಗಿದರು. ಈ ಬಳಗದಲ್ಲಿ ದಲಿತ ಸಮುದಾಯದ ಬರಹಗಾರರು ಇದ್ದಂತೆಯೇ ಮುಸ್ಲಿಂ ಸಮುದಾಯದ ಲೇಖಕರೂ ಇದ್ದರು. ಕನ್ನಡ ಸಾಹಿತ್ಯದ ಆ ವಿಶಿಷ್ಟ ಸಮೀಕರಣ, 'ಬಂಡಾಯ ಸಂಘಟನೆ'ಗೆ ನಲವತ್ತೈದು ವರ್ಷಗಳು ತುಂಬಿರುವ ಹಾಗೂ ಕವಿ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' (1975) ಸಂಕಲನಕ್ಕೆ ಐವತ್ತು ವರ್ಷಗಳಾಗಿರುವ ಸಂದರ್ಭದಲ್ಲಿ ಹೊಸ ಹೊಳಪು ಪಡೆದುಕೊಂಡಿದೆ.

ಅವಜ್ಞೆಯೂ 'ಭೀಮಪ್ರಜ್ಞೆ'ಯೂ...

ನವೋದಯ ಹಾಗೂ ನವ್ಯ ಮಾತ್ರವಲ್ಲದೆ, ದಲಿತ-ಬಂಡಾಯ ಸಂದರ್ಭದಲ್ಲೂ, ಜನಪರ ಸಾಹಿತ್ಯ ರಚನೆಯ ಬಗ್ಗೆ ಯೋಚಿಸುತ್ತಿದ್ದ ಬರಹಗಾರರಿಗೆ ದ್ರವ್ಯವಾಗಿ ಒದಗಿಬರುತ್ತಿದ್ದವರು ಗಾಂಧೀಜಿ. ನಂತರದ ವರ್ಷಗಳಲ್ಲಿ ಜೇಪಿ ಹಾಗೂ ಲೋಹಿಯಾ ಕೂಡ ಕನ್ನಡ ಸಾಹಿತ್ಯ ಕ್ಷಿತಿಜದಲ್ಲಿ ಮಿನುಗತೊಡಗಿದರು. ಈಗ ಆ ಜಾಗದಲ್ಲಿ ಕಂಗೊಳಿಸುತ್ತಿರುವುದು ಅಂಬೇಡ್ಕರ್. ಈ ಹೊತ್ತಿನ ಬಿಕ್ಕಟ್ಟುಗಳಿಗೆ ಉತ್ತರ ಕಂಡುಕೊಳ್ಳಲು ಹೊಸ ತಲೆಮಾರಿನ ಬರಹಗಾರರು ನೆಚ್ಚಿಕೊಂಡಿರುವುದು ಅಂಬೇಡ್ಕರ್ ಚಿಂತನೆಗಳನ್ನು. ಶೋಷಿತ ವರ್ಗಗಳ ಎಚ್ಚರದ ರೂಪದಲ್ಲಿ ಹಾಗೂ ಪ್ರಬಲಗೊಳ್ಳುತ್ತಿರುವ ಕೋಮುವಾದಕ್ಕೆ ಉತ್ತರ ರೂಪದಲ್ಲಿ 'ಭೀಮಪ್ರಜ್ಞೆ' ಒದಗಿಬರುತ್ತಿದೆ.

ಕನ್ನಡ ಕಾವ್ಯ, ಕಥೆ, ಕಾದಂಬರಿ ಮಾತ್ರವಲ್ಲದೆ ವೈಚಾರಿಕ ಕೃತಿಗಳಲ್ಲಿ ಕೂಡ ಅಂಬೇಡ್ಕರ್ ಅಭಿವ್ಯಕ್ತಗೊಳ್ಳುತ್ತಿದ್ದಾರೆ. ಅಂಬೇಡ್ಕರ್ ಅವರನ್ನು ವ್ಯಕ್ತಿ–ವಿಚಾರದ ರೂಪದಲ್ಲಿ ಅರಿಯಲು ಸಹಾಯಕವಾದ ಪಠ್ಯಗಳು ಕನ್ನಡಕ್ಕೆ ಅನುವಾದಗೊಳ್ಳುತ್ತಿವೆ. ಹೀಗೆ, ಕನ್ನಡ ಸಾಹಿತ್ಯದ ಕೇಂದ್ರದಲ್ಲಿ ಅಂಬೇಡ್ಕರ್ ಪ್ರಕಾಶಿಸುತ್ತಿರುವ ಸಂದರ್ಭದಲ್ಲಿ, ಗಾಂಧಿ–ಲೋಹಿಯಾ ಕೂಡ ಹೊಸ ಚರ್ಚೆಗಳ ಮೂಲಕ ಮರುಹುಟ್ಟುಗಳನ್ನು ಕಂಡುಕೊಳ್ಳುತ್ತಿರುವುದು ಕುತೂಹಲಕರ.

ಯುವ ದಲಿತ ಬರಹಗಾರರು–ಕಲಾವಿದರು ಅಂಬೇಡ್ಕರ್ ಚಿಂತನೆಗಳೊಂದಿಗೆ ಪ್ರಜ್ಞಾಪೂರ್ವಕ ಅನುಸಂಧಾನ ನಡೆಸುತ್ತಿರುವ ಸಂದರ್ಭದಲ್ಲೇ, ಮುಸ್ಲಿಂ ಸಮುದಾಯದ ತರುಣ ತರುಣಿಯರು ಬರವಣಿಗೆಯಲ್ಲಿ ಗುರ್ತಿಸಿಕೊಂಡಿರುವುದು ವಿಶೇಷ. ಕೆ.ಎಸ್. ನಿಸಾರ್ ಅಹಮದ್, ಸಾರಾ ಅಬೂಬಕ್ಕರ್, ಬೊಳುವಾರು, ಕಟ್ಪಾಡಿ, ಬಾನು ಮುಷ್ತಾಕ್, ರಹಮತ್ ತರೀಕೆರೆ, ಅಬ್ದುಲ್ ರಶೀದ್– ಹೀಗೆ, ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಬರಹಗಾರರ ದೊಡ್ಡ ಪಟ್ಟಿಯೇ ಇದ್ದರೂ, ಆ ಬರಹಗಾರರು ಬರವಣಿಗೆಯಲ್ಲಿ ತೊಡಗಿಕೊಂಡದ್ದರ ಪ್ರೇರಣೆಗಳಿಗೂ ಈ ಹೊತ್ತಿನ ಬರಹಗಾರರ ಸಾಹಿತ್ಯಿಕ ಒತ್ತಾಸೆಗಳಿಗೂ ವ್ಯತ್ಯಾಸಗಳಿವೆ. 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಎಂದು 'ನಿತ್ಯೋತ್ಸವ'ದ ಕವಿ ನಿಸಾರ್ ಅಹಮದ್ ಅಳಲು ತೋಡಿಕೊಂಡರೂ, ಅವರನ್ನು ಕನ್ನಡ ಓದುಗವಲಯ ಪರಕೀಯನೆಂದು ಕಂಡಿಲ್ಲ. ಉಳಿದ ಮುಸ್ಲಿಂ ಬರಹಗಾರರನ್ನೂ ಸಾಹಿತ್ಯಲೋಕ ಪ್ರೀತಿಯಿಂದಲೇ ಕಂಡಿದೆ. ಆ ಪ್ರೀತಿಯಲ್ಲಿ ಈಗಲೂ ಎದ್ದುಕಾಣುವ ಬದಲಾವಣೆಗಳೇನೂ ಆಗಿಲ್ಲ. ಸ್ಥಿತ್ಯಂತರ ಆಗಿರುವುದು, ರಾಜಕೀಯ ಹಾಗೂ ಸಾಮಾಜಿಕ ಸಂದರ್ಭಗಳಲ್ಲಿ. ಸಮುದಾಯಗಳ ವಿಭಜನೆಯ ಪಕ್ಷ ರಾಜಕಾರಣ ಸಾಮಾಜಿಕ ಸ್ವರೂಪದಲ್ಲೂ ಕಾಣಿಸಿಕೊಂಡಿರುವುದು ಕಳೆದೊಂದು ದಶಕದಲ್ಲಿ ಮುಸ್ಲಿಂ ಸಮುದಾಯದ ಕಳವಳಕ್ಕೆ ಕಾರಣವಾಗಿದೆ. ಹಿಜಾಬ್ ಧರಿಸಿದ ಹೆಣ್ಣುಮಕ್ಕಳನ್ನು ಶಾಲೆಯಿಂದ ಹೊರಗಿಟ್ಟಿದ್ದು, ಜಾತ್ರೆ–ಉತ್ಸವಗಳಿಂದ ಮುಸ್ಲಿಂ ವ್ಯಾಪಾರಿಗಳನ್ನು ದೂರವಿಡುವ ಪ್ರಯತ್ನಗಳು, ಆಹಾರ ಸಂಸ್ಕೃತಿಯನ್ನು ಕೀಳಾಗಿ ಕಾಣುವುದು, ಆಚಾರ ವಿಚಾರಗಳನ್ನು ನಿರಂತರವಾಗಿ ಪ್ರಶ್ನಿಸುತ್ತ ಅಲ್ಪಸಂಖ್ಯಾತರು ಹಾಗೂ ಅನ್ಯರೆಂಬ ಅಳುಕನ್ನು ಪ್ರಜ್ಞಾಪೂರ್ವಕವಾಗಿ ಮೂಡಿಸುವುದು– ಇವೆಲ್ಲವೂ 'ಸರ್ವ ಜನಾಂಗದ ಶಾಂತಿಯ ತೋಟ'ದಲ್ಲಿ ಘಟಿಸಿದ ಸಂಗತಿಗಳೇ ಆಗಿವೆ. ಈ ಬದಲಾವಣೆಗಳೇ ಹೊಸ ತಲೆಮಾರಿನ ಮುಸ್ಲಿಂ ತರುಣ ತರುಣಿಯರು ಬರವಣಿಗೆಗೆ ಆತುಕೊಳ್ಳುವಂತೆ ಮಾಡಿವೆ. ಇಂದಿನ ಮುಸ್ಲಿಂ ಬರಹಗಾರರಿಗೆ ಕನ್ನಡದಲ್ಲಿ ಬರೆಯುವುದು ಸಾಹಿತ್ಯದ ಅಭಿವ್ಯಕ್ತಿಯಷ್ಟೇ ಆಗಿಲ್ಲ, ಅದು ಈ ಮಣ್ಣಿನೊಂದಿಗಿನ ತಮ್ಮ ನಂಟನ್ನು ದೃಢೀಕರಿಸುವ ಪ್ರಯತ್ನವೂ ಆಗಿರುವಂತಿದೆ.

ದಲಿತ–ಮುಸ್ಲಿಂ ಬರಹಗಾರರ ಯಶಸ್ವಿ ಸಹಪಯಣಕ್ಕೆ ನಿದರ್ಶನದ ರೂಪದಲ್ಲಿ, ಸಾಹಿತ್ಯ ಅಕಾಡೆಮಿಯ ಯುವ ಪ್ರಶಸ್ತಿಯನ್ನು ಪಡೆದ ಕನ್ನಡ ಬರಹಗಾರರ ಪಟ್ಟಿಯನ್ನು ಗಮನಿಸಬಹುದು. ಅಕಾಡೆಮಿಯ ಯುವ ಪುರಸ್ಕಾರಕ್ಕೆ ಪಾತ್ರವಾದ ಮೊದಲ ಮೂವರು ಬರಹಗಾರರು (ವೀರಣ್ಣ ಮಡಿವಾಳರ, ಆರಿಫ್ ರಾಜಾ ಹಾಗೂ ಲಕ್ಕೂರು ಆನಂದ) ಈ ಹೊತ್ತಿನ ಸಾಹಿತ್ಯ ಚಲನೆಯನ್ನು ಸೂಚಿಸುವಂತಿದ್ದಾರೆ. ಈವರೆಗೆ ಯುವ ಪುರಸ್ಕಾರಕ್ಕೆ ಪಾತ್ರರಾದ ಹದಿಮೂರು ಬರಹಗಾರರಲ್ಲಿ ಹೆಚ್ಚಿನವರು ಸಾಮಾಜಿಕವಾಗಿ ಹಿಂದುಳಿದ–ಶೋಷಿತ ಸಮುದಾಯಗಳಿಗೆ ಸೇರಿದವರು.

ಅಂಬೇಡ್ಕರ್ ಅರಿವಿನ ಜನಪರ ಸಾಹಿತ್ಯದ ಮತ್ತೊಂದು ತುದಿಯಲ್ಲಿ ಬಲಪಂಥೀಯ ಧೋರಣೆಯ ಸಾಹಿತ್ಯವೂ ಗಣನೀಯ ಪ್ರಮಾಣದಲ್ಲಿ ರೂಪುಗೊಳ್ಳುತ್ತಿರುವುದಕ್ಕೆ 'ಸುವರ್ಣ ಕರ್ನಾಟಕ' ಸಾಕ್ಷಿಯಾಗಿದೆ. ನವ್ಯ ಲೇಖಕರಿಂದ ಟೀಕೆಗೊಳಗಾಗಿದ್ದ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಬಲಪಂಥೀಯರ ಕಣ್ಮಣಿಯಾದರು. ಗಾಂಧಿಯನ್ನು ಶಿಲುಬೆಗೇರಿಸಿ ಸಾವರ್ಕರ್ ಅವರನ್ನು ಮೆರೆಸುವ ಪ್ರಯತ್ನಗಳು ನಡೆದವು, ನಡೆದಿವೆ.

ಪರಧರ್ಮ ಮತ್ತು ಪರವಿಚಾರದ ಸೈರಣೆಯನ್ನು ಪ್ರತಿಪಾದಿಸಿದ 'ಕನ್ನಡ ವಿವೇಕ ಪರಂಪರೆ'ಗೆ ರಕ್ತದ ಕಲೆಗಳನ್ನು ಸಿಂಪಡಿಸಿದ ಘಟನೆಗಳನ್ನೂ 'ಸುವರ್ಣ ಕರ್ನಾಟಕ' ಸಾಹಿತ್ಯ ಸಮೀಕ್ಷೆಯ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ವೈಚಾರಿಕ ಅಸಹನೆ ಗುಂಡಿನ ರೂಪದಲ್ಲಿ ಕನ್ನಡದ ಅತ್ಯುತ್ತಮ ವಿದ್ವಾಂಸರಲ್ಲೊಬ್ಬರಾದ ಎಂ.ಎಂ. ಕಲಬುರ್ಗಿ ಅವರನ್ನು ಬಲಿ ತೆಗೆದುಕೊಂಡಿತು (ಆ. 30, 2015). ಕಲಬುರ್ಗಿ ಅವರ ಕೊಲೆಯ ಎರಡು ವರ್ಷಗಳ ನಂತರ (ಸೆ. 5, 2017ರಂದು) ಪತ್ರಕರ್ತೆ ಗೌರಿ ಲಂಕೇಶ್ ಕೋಮುಶಕ್ತಿಗಳಿಗೆ ಬಲಿಯಾದರು. ಜಾಮೀನು ಪಡೆದು ಹೊರಬಂದಿರುವ ಗೌರಿ ಲಂಕೇಶ್ ಕೊಲೆ ಆರೋಪಿಗಳಿಗೆ ಸ್ವಾಗತ–ಸನ್ಮಾನಗಳೂ ನಡೆದವು. ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವುದೀಗ ದುಬಾರಿಯೂ ಹೌದು, ಅಪಾಯಕಾರಿಯೂ ಹೌದು. ಸಾಹಿತ್ಯದ ವಿಶ್ವಾಸಾರ್ಹತೆ ಪ್ರಶ್ನಾರ್ಹವಾಗಿರುವ ಸಂದರ್ಭದಲ್ಲೂ ನಾಡಿನ ವೈಚಾರಿಕತೆಯ ಸಂಕೇತಗಳಾಗಿ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ ಅವರನ್ನು ದೊಡ್ಡದೊಂದು ಜನಸಮುದಾಯ ನಂಬಿಕೊಂಡಿದೆ.

ಆಕರ್ಷಕ ಜಿಗಿತ, ವಿಷಾದಕರ ಕುಸಿತ

ಸಣ್ಣಕಥೆ ಹಾಗೂ ಕಾದಂಬರಿ ಸದ್ಯ ಮುನ್ನೆಲೆಯಲ್ಲಿರುವ ಆಕರ್ಷಕ ಸಾಹಿತ್ಯ ಪ್ರಕಾರಗಳು. ಮಾಸ್ತಿ, ಚಿತ್ತಾಲ, ತೇಜಸ್ವಿ, ಅನಂತಮೂರ್ತಿ, ದೇವನೂರ ಮಹಾದೇವ, ಬೆಸಗರಹಳ್ಳಿ, ಲಂಕೇಶ್‌ರ ಕಥನ ಪರಂಪರೆ – ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಎಸ್. ದಿವಾಕರ್, ಜಯಂತ ಕಾಯ್ಕಿಣಿ, ವಿವೇಕ ಶಾನಭಾಗ, ಅಬ್ದುಲ್ ರಶೀದ್‌ರಂಥ ಶಕ್ತ ಕಥೆಗಾರರೊಂದಿಗೆ ಮುಂದುವರೆದು, ಈ ಹೊತ್ತಿನ ಮೌನೇಶ್ ಬಡಿಗೇರ್, ಗುರುಪ್ರಸಾದ್ ಕಂಟಲಗೆರೆ, ಅನುಪಮಾ ಪ್ರಸಾದ್, ಕಾವ್ಯಾ ಕಡಮೆ ಸೇರಿದಂತೆ ನೂರಾರು ಧ್ವನಿಗಳಲ್ಲಿ ವಿಸ್ತರಿಸಿಕೊಂಡಿದೆ. ಕಥಾ ಪ್ರಕಾರದಲ್ಲಿನ ಹೊಸ ಪ್ರಯೋಗಗಳಿಗೆ 'ಹೊನ್ನ ಕಣಜ'ದ ರೂಪದಲ್ಲಿ ಸಾಹಿತ್ಯ ಸ್ಪರ್ಧೆಗಳು– ವಿಶೇಷವಾಗಿ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಗಳು– ಒದಗಿಬಂದಿವೆ.

ಕಥೆಯ ಜೊತೆ ಜೊತೆಗೆ ಕಾದಂಬರಿ ಪ್ರಕಾರವೂ ನಿರಂತರ ಪ್ರಯೋಗಶೀಲತೆಗೆ ತನ್ನನ್ನೊಡ್ಡಿಕೊಂಡಿದೆ. ಕುವೆಂಪು ಅವರ 'ಕಾನೂರು ಹೆಗ್ಗಡಿತಿ' (1936) ಹಾಗೂ 'ಮಲೆಗಳಲ್ಲಿ ಮದುಮಗಳು' (1967) ಕನ್ನಡ ಸಾಹಿತ್ಯದ 'ಮಹಾ ಕಾದಂಬರಿ'ಗಳು. ಅನಂತಮೂರ್ತಿಯವರ 'ಸಂಸ್ಕಾರ' ವಿಶ್ವದ ವಿವಿಧ ಭಾಷೆಗಳಿಗೆ ಅನುವಾದಗೊಂಡು ಜಾಗತಿಕ ಮನ್ನಣೆ ಪಡೆದ ಕಾದಂಬರಿ. ಶಿವರಾಮ ಕಾರಂತ, ಚಿತ್ತಾಲ, ತೇಜಸ್ವಿ, ಲಂಕೇಶ್, ವ್ಯಾಸರಾಯ ಬಲ್ಲಾಳ, ಶ್ರೀನಿವಾಸ ವೈದ್ಯರಿಂದ ಇಂದಿನ ವಿವೇಕ ಶಾನಭಾಗ, ಗುರುಪ್ರಸಾದ್ ಕಾಗಿನೆಲೆ, ವಸುಧೇಂದ್ರ, ಚೀಮನಹಳ್ಳಿ ರಮೇಶಬಾಬುರವರೆಗೆ 'ಕನ್ನಡ ಕಾದಂಬರಿ' ಆಲದ ಬಿಳಲುಗಳು ಹಬ್ಬಿಕೊಂಡಿವೆ. ಕಳೆದೊಂದು ದಶಕದ ಅವಧಿಯಲ್ಲಿ ಕಥೆಗಾರರು ಕಾದಂಬರಿ ಬರೆಯಲು ಉತ್ಸಾಹ ತೋರಿಸುತ್ತಿರುವುದನ್ನು ಹಾಗೂ ಕಾದಂಬರಿ ಮೂಲಕವೇ ಬರವಣಿಗೆ ಆರಂಭಿಸುತ್ತಿರುವ ಹೊಸ ಬರಹಗಾರರನ್ನು ನೋಡಿದರೆ, ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಮುನ್ನೆಲೆಗೆ ಬರುತ್ತಿರುವ ಸೂಚನೆಗಳು ಕಾಣಿಸುತ್ತಿವೆ.

ಕಥೆ–ಕಾದಂಬರಿಗೆ ಹೋಲಿಸಿದರೆ ಕಾವ್ಯ ಹಾಗೂ ನಾಟಕ ಪ್ರಕಾರಗಳ ಬೆಳೆ ಅಷ್ಟೇನೂ ಆಕರ್ಷಕವಾಗಿಲ್ಲ. ಬೇಂದ್ರೆಯವರ 'ನಾದಲೀಲೆ'ಯೂ ಈಗಿಲ್ಲ, ಅಡಿಗರ 'ಚಂಡೆಮದ್ದಳೆ'ಯೂ ಮೊಳಗುತ್ತಿಲ್ಲ. ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ನಿಸಾರ್ ಅಹಮದ್, ಕೆ.ವಿ. ತಿರುಮಲೇಶ್, ಎಚ್.ಎಸ್. ಶಿವಪ್ರಕಾಶ್, ಎಚ್.ಎಸ್. ವೆಂಕಟೇಶಮೂರ್ತಿ ಅವರ ಮೂಲಕ ಪುಷ್ಟಿಗೊಂಡ ಕನ್ನಡ ಕಾವ್ಯನದಿ ಈ ಹೊತ್ತಿನ ಲಲಿತಾ ಸಿದ್ಧಬಸವಯ್ಯ, ಲಕ್ಷ್ಮೀಪತಿ ಕೋಲಾರ, ಸುಬ್ಬು ಹೊಲೆಯಾರ್, ಜ.ನಾ. ತೇಜಶ್ರೀ, ಆರಿಫ್ ರಾಜ, ವಿಲ್ಸನ್ ಕಟೀಲ್, ಮುಂತಾದವರ ಮೂಲಕ ನಿಗಿನಿಗಿ ಎನ್ನುತ್ತಿದೆಯಾದರೂ, ಹೊಸ ತಲೆಮಾರಿನ ಕನ್ನಡ ಕಾವ್ಯದಲ್ಲಿ ಬಿಸುಪು ಹೊಳಪು ನಿರೀಕ್ಷೆಯಷ್ಟಿಲ್ಲ.

ಕಾವ್ಯದಂತೆಯೇ ನಾಟಕವೂ ಹೊಸ ತಿರುವಿಗಾಗಿ ಹಂಬಲಿಸುತ್ತಿರುವ ಸಂದರ್ಭವಿದು. ಕಲ್ಯಾಣ ಕ್ರಾಂತಿಯನ್ನು ಕೇಂದ್ರವಾಗಿಟ್ಟುಕೊಂಡು ನಡೆಸಿದ ರಂಗಪ್ರಯೋಗಗಳಿಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಚಾರಿತ್ರಿಕ ಮಹತ್ವವಿದೆ. ಲಂಕೇಶರ 'ಸಂಕ್ರಾಂತಿ' (1973), ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' (1986), ಗಿರೀಶ ಕಾರ್ನಾಡರ 'ತಲೆದಂಡ' (1990), ಎಂ.ಎಂ. ಕಲಬುರ್ಗಿ ಅವರ 'ಕೆಟ್ಟಿತು ಕಲ್ಯಾಣ' (1995) ಮತ್ತು ಚಂದ್ರಶೇಖರ ಕಂಬಾರರ 'ಶಿವರಾತ್ರಿ' (2011), ಕನ್ನಡ ನಾಡು–ನುಡಿಯ ಉನ್ನತಿ ಅವನತಿಗಳನ್ನು ರಂಗಪಠ್ಯಗಳ ಮೂಲಕ ಶೋಧಿಸುವ ಕಲಾಕೃತಿಗಳಾಗಿವೆ. ಸದ್ಯದ ಕನ್ನಡ ನಾಟಕ ಹೊಸ ಹರಿವು ಹೊಳಹುಗಳ ಹಂಬಲದಲ್ಲಿದೆ.

ಸಾಹಿತ್ಯ ಪತ್ರಿಕೆಗಳಿಗಿದು ಕಾಲವಲ್ಲ ಎನ್ನುವ ಸಂದರ್ಭದಲ್ಲೂ 'ಅಕ್ಷರ ಸಂಗಾತ' ಐದು ವರ್ಷಗಳನ್ನು ಪೂರೈಸಿ ಮುನ್ನಡೆದಿದೆ. ಅನುವಾದಗಳಿಗೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯದಲ್ಲೀಗ ಉತ್ಸಾಹದ ವಾತಾವರಣ. ಅನುವಾದ ಚಟುವಟಿಕೆಗಳಿಗೆಂದೇ ಮೀಸಲಾಗಿರುವ 'ಕುವೆಂಪು ಭಾಷಾ ಭಾರತಿ' (2009ರಲ್ಲಿ ಆರಂಭ) ದೇಶಕ್ಕೇ ಮಾದರಿಯೆನ್ನಿಸುವ ಸಂಸ್ಥೆ. ಹಳಗನ್ನಡ ಹಾಗೂ ಹೊಸಗನ್ನಡದ ಉತ್ತಮ ಕೃತಿಗಳು ಇಂಗ್ಲಿಷ್‌ಗೆ ಭಾಷಾಂತರಗೊಳ್ಳುತ್ತಿರುವ ಮೂಲಕ, ಕನ್ನಡಪ್ರಜ್ಞೆ ವಿಶ್ವವಿವೇಕದೊಂದಿಗೆ ಮುಖಾಮುಖಿ ನಡೆಸುವ ಪ್ರಯತ್ನದಲ್ಲಿದೆ.

ಕರ್ನಾಟಕದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಿಂತು ನೋಡಿದರೆ ಕಾಣಿಸುವ ಸಾಹಿತ್ಯದ ಬಿಂಬಗಳು ಸಶಕ್ತವಾಗಿ ಆಕರ್ಷಕವಾಗಿ ಕಾಣಿಸಿದರೂ, ಆ ಬಿಂಬಗಳ ಜೊತೆಯಲ್ಲಿನ ಒಡಕು ಗೆರೆಗಳನ್ನೂ ಗಮನಿಸಬೇಕು. ಜೀವಪರ ಸಾಹಿತ್ಯ ಎನ್ನುವುದು ಒಂದು ಗುಂಪಿಗಷ್ಟೇ ಸಾಧ್ಯವಾದರೆ, ಜೀವಪರವಲ್ಲದ ಸಾಹಿತ್ಯವೂ ಇದೆ ಎನ್ನುವುದಾದರೆ, 'ಎಲ್ಲರನ್ನೂ ಒಳಗೊಳ್ಳುವುದು ಸಾಹಿತ್ಯದ ಶಕ್ತಿ-ಗುಣ' ಎನ್ನುವ ಪರಿಕಲ್ಪನೆಯನ್ನೇ ನಾವು ಮರಳಿ ಒರೆಗೆ ಹಚ್ಚಬೇಕೇನೊ? ❖



1979ರ ಮಾರ್ಚ್ 10ರಂದು ಬೆಂಗಳೂರಿನಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ತೆಲುಗು ಕವಿ ಶ್ರೀ ಶ್ರೀ, ದೇವನೂರ ಮಹಾದೇವ, ನಿರಂಜನ ಹಾಗೂ ಸಿದ್ಧಲಿಂಗಯ್ಯ (ಮಾತನಾಡುತ್ತಿರುವವರು) ಚಿತ್ರ: ಪ್ರಜಾವಾಣಿ ಆರ್ಕೈವ್ಸ್



ಪ್ರಶಸ್ತಿ ನಂಟು, ಜ್ಞಾನಪೀಠಗಳು ಎಂಟು

ಸಾಹಿತಿ–ಸಾಹಿತ್ಯದ ವಿಶ್ವಾಸಾರ್ಹತೆ ಮುಕ್ಕಾಗಿರುವುದರ ನಡುವೆಯೂ, ಸಾಹಿತ್ಯವನ್ನು ಗೌರವಿಸುವ ಚಟುವಟಿಕೆಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿವೆ. ವರ್ಷದ ಎಲ್ಲ ದಿನವೂ ಒಂದಲ್ಲಾ ಒಂದು ಸಾಹಿತ್ಯಿಕ ಪ್ರಶಸ್ತಿ ಪ್ರಕಟಗೊಳ್ಳುತ್ತಿರುವುದು ಕನ್ನಡ ಸಾಹಿತ್ಯದ ವರ್ತಮಾನ. ಈ ಪ್ರಶಸ್ತಿಪೂರದ ಹಿನ್ನೆಲೆಯಲ್ಲಿ 'ಪ್ರಶಸ್ತಿ ಸಾಹಿತ್ಯ' ಎನ್ನುವ ಪ್ರಕಾರವೊಂದು ಅಸ್ಪಷ್ಟವಾಗಿ ರೂಪುಗೊಳ್ಳುತ್ತಿರುವಂತಿದೆ.


ಸಾಹಿತ್ಯವನ್ನು ಪ್ರಶಸ್ತಿಗಳ ಮೂಲಕ ಗುರ್ತಿಸುವ ಪ್ರವೃತ್ತಿ ಹೆಚ್ಚುತ್ತಿರುವ ಸಂದರ್ಭದಲ್ಲೇ, ಸಾಹಿತ್ಯದ ಹೊಸ ಚಲನೆಗಳನ್ನು ಗುರ್ತಿಸಬೇಕಾದ 'ಸಾಹಿತ್ಯ ವಿಮರ್ಶೆ' ಸೊರಗುತ್ತಿರುವುದನ್ನು ಗಮನಿಸಬೇಕು. ಪುಸ್ತಕ ಪ್ರಕಾಶನದಲ್ಲಾದ ಕ್ರಾಂತಿಕಾರಕ ಬೆಳವಣಿಗೆ ಹಾಗೂ ಗ್ರಂಥಾಲಯ ಇಲಾಖೆಯ ಒತ್ತಾಸೆಯಿಂದಾಗಿ ಇತ್ತೀಚಿನ ವರ್ಷಗಳಲ್ಲಿ ವಾರ್ಷಿಕ ಏಳೆಂಟು ಸಾವಿರ ಪುಸ್ತಕಗಳು ಪ್ರಕಟಗೊಳ್ಳುತ್ತಿದ್ದು, ಈ ಹೊರೆಯನ್ನು ಏಳೆಂಟು ವಿಮರ್ಶಕರೇ ಹೊರಬೇಕೆಂದು ಕನ್ನಡ ಸಾಹಿತ್ಯಲೋಕ ಅಪೇಕ್ಷಿಸುತ್ತಿದೆ. ಸದ್ಯದ ಸಾಹಿತ್ಯ ವಿಮರ್ಶಕರ ಕೊರತೆಯನ್ನು ಎದುರಿಸುತ್ತಿದೆಯೂ ಅಥವಾ ವಿಮರ್ಶೆಯೇ ಬೇಡದಿರುವ ಸ್ಥಿತಿಯನ್ನು ಸಾಹಿತ್ಯಲೋಕವೇ ಸೃಷ್ಟಿಸಿದೆಯೋ ಹೇಳುವುದು ಕಷ್ಟ. ಲೇಖಕನ ಭಾವಚಿತ್ರವೇ ಪುಸ್ತಕದ ಮುಖಪುಟವೂ ಆಗಿರುವ ಕೃತಿಯನ್ನು ಪ್ರಾತಿನಿಧಿಕ ವಿಮರ್ಶೆಯ ಕೃತಿಯಲ್ಲಿ ಪುರಸ್ಕರಿಸುವ ಪ್ರವೃತ್ತಿಯನ್ನು, ಈ ಹೊತ್ತಿನ ಸಾಹಿತ್ಯ ವಿಮರ್ಶೆ ಹಿಡಿದಿರುವ ಜಾಡಿಗೆ ಉದಾಹರಣೆಯಾಗಿ ಗಮನಿಸಬಹುದೇನೊ?

ದೇಶದ ಅತ್ಯುನ್ನತ ಸಾಹಿತ್ಯ ಪುರಸ್ಕಾರಗಳಲ್ಲೊಂದಾದ 'ಜ್ಞಾನಪೀಠ' ಪ್ರಶಸ್ತಿಯನ್ನು ಕನ್ನಡ ಓದುಗವಲಯ ಕುತೂಹಲ ಹಾಗೂ ಗೌರವದಿಂದ ಕಾಣುತ್ತಿದೆ. ಜ್ಞಾನಪೀಠದೊಂದಿಗೆ ಕನ್ನಡದ ನಂಟು ಆರಂಭವಾದುದು 1967ರಲ್ಲಿ. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕೃತಿಯ ಮೂಲಕ ಕುಡಿಯೊಡೆದ ಜ್ಞಾನಪೀಠದ ಬಳ್ಳಿ, ದ.ರಾ. ಬೇಂದ್ರೆ (1972), ಶಿವರಾಮ ಕಾರಂತ (1977), ಮಾಸ್ತಿ (1983), ವಿ.ಕೃ. ಗೋಕಾಕ್ (1990), ಯು.ಆರ್. ಅನಂತಮೂರ್ತಿ (1994), ಗಿರೀಶ ಕಾರ್ನಾಡ (1998), ಚಂದ್ರಶೇಖರ ಕಂಬಾರ (2010) ಅವರವರೆಗೆ ಹಬ್ಬಿಕೊಂಡಿದೆ. ಕರ್ನಾಟಕ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಆ ಬಳ್ಳಿಗೆ ಹೊಸ ಹೂವು ಸೇರ್ಪಡೆಗೊಳ್ಳಬಹುದೇನೊ?

ಕನ್ನಡದ ಹೆಮ್ಮೆ

ಕುವೆಂಪು


(ಡಿ. 29, 1904 – ನ. 11, 1994)



ಆಧುನಿಕ ಕರ್ನಾಟಕಕ್ಕೊಂದು ತಾತ್ವಿಕ ಪ್ರಣಾಳಿಕೆ ಹಾಗೂ ಕನ್ನಡ ಸಂವಿಧಾನ ಸಿದ್ಧಪಡಿಸಿಕೊಟ್ಟ ದಾರ್ಶನಿಕ ಕವಿ ಕುವೆಂಪು. ಅವರಷ್ಟು ಆತ್ಮವಿಶ್ವಾಸದಿಂದ ಕನ್ನಡಪ್ರಜ್ಞೆಯನ್ನು ಪ್ರಜ್ಞಾಪೂರ್ವಕವಾಗಿ ಕಟ್ಟಿದ ಹಾಗೂ ವೈಚಾರಿಕತೆಯನ್ನು ರೂಪಿಸುವ ನಿಟ್ಟಿನಲ್ಲಿ ತೊಡಗಿಕೊಂಡ ಇನ್ನೊಬ್ಬ ಬರಹಗಾರ ಕನ್ನಡದಲ್ಲಿಲ್ಲ. 'ವಿಶ್ವಮಾನವ' ಪರಿಕಲ್ಪನೆಯ ಮೂಲಕ ಕನ್ನಡದ 'ವಿವೇಕ ಪರಂಪರೆ'ಯನ್ನು ಆಧುನಿಕ ಸಂದರ್ಭದಲ್ಲಿ ವಿಸ್ತರಿಸಿದ ಕುವೆಂಪು ರಸಋಷಿಯಷ್ಟೇ ಅಲ್ಲ, ಬೇಂದ್ರೆ ಅವರ ಬಣ್ಣನೆಯಂತೆ 'ಯುಗದ ಕವಿ ಜಗದ ಕವಿ' ಕೂಡ. ಕುವೆಂಪು ಪ್ರತಿಪಾದಿಸಿದ 'ಸಾಂಸ್ಕೃತಿಕ ಮಂತ್ರಿಮಂಡಲ' ಸಮಾಜದ ಆರೋಗ್ಯಕ್ಕೆ ಸಾಹಿತ್ಯದ ವಿವೇಕ ಅಗತ್ಯವೆನ್ನುವುದರ ಅರಿವಿನ ಸಂಕೇತ. ಮಹಾಕಾದಂಬರಿಗಳು, ಮಹಾಕಾವ್ಯ, ನಾಟಕ, ಕಥೆ–ಕಾವ್ಯ–ಭಾಷಣ–ವಿಮರ್ಶೆಗಳ ಮೂಲಕ ಕುವೆಂಪು ಕನ್ನಡಿಗರಿಗೆ ಸಾಹಿತ್ಯ ಸುಧೆಯನ್ನೂ ವಿಚಾರದ ತಿಳಿವನ್ನೂ ಮೂಡಿಸಿದವರು; ನಾಡಗೀತೆ, ರೈತಗೀತೆಗಳನ್ನು ರಚಿಸಿದವರು; 'ಮಂತ್ರಮಾಂಗಲ್ಯ'ದ ಮೂಲಕ ಮದುವೆಯ ವಿಧಿಗೆ ಜೀವಂತಿಕೆ ಹಾಗೂ ಅರ್ಥವಂತಿಕೆ ತಂದವರು.

ರಾಜ್‌ಕುಮಾರ್


(ಏ. 24, 1929 – ಏ. 12, 2006)



ಚಾಮರಾಜನಗರ ಜಿಲ್ಲೆಯ ದೊಡ್ಡ ಗಾಜನೂರಿನ ಮುತ್ತುರಾಜ ಎನ್ನುವ ಹುಡುಗ ರಾಜಕುಮಾರನಾಗಿ ಬೆಳೆದುದು ಆಧುನಿಕ ಕರ್ನಾಟಕದ ಅಪೂರ್ವ ವಿದ್ಯಮಾನಗಳಲ್ಲೊಂದು. ರಾಜ್ ಬರಿ ನಟನಲ್ಲ, ಸಿನಿಮಾಕ್ಕೆ ಸೀಮಿತರಾದವರೂ ಅಲ್ಲ; ಕನ್ನಡದ ಅಸ್ಮಿತೆಯ ರೂಪದಲ್ಲಿ ಜನಮಾನಸವನ್ನು ಪ್ರಭಾವಿಸಿದ ವ್ಯಕ್ತಿತ್ವ ಅವರದು. ಸಾಹಿತ್ಯದ ಮೂಲಕ ಕುವೆಂಪು ಅವರು ಮಾಡಿದ ಕನ್ನಡಪ್ರಜ್ಞೆ ರೂಪಿಸುವ ಕೆಲಸವನ್ನು, ಸಿನಿಮಾಗಳ ಮೂಲಕ ರಾಜ್ ಮಾಡಿದರು. ನಾಡಿನ ಚಾರಿತ್ರಿಕ–ಸಾಂಸ್ಕೃತಿಕ ನಾಯಕರ ಪಾತ್ರಗಳನ್ನು ಸಿನಿಮಾ ಮೂಲಕ ಜನಸಾಮಾನ್ಯರಿಗೂ ಪರಿಚಯಿಸಿದ, ಸದಭಿರುಚಿಯ ಸಿನಿಮಾಗಳನ್ನು ರೂಪಿಸಿದ, ಮೇಷ್ಟ್ರು ರೂಪದಲ್ಲಿ ಕನ್ನಡವನ್ನು ಜನಮನಕ್ಕೆ ಹತ್ತಿರವಾಗಿಸಿದ, ಗೋಕಾಕ್ ಚಳವಳಿಗೆ ಶಕ್ತಿ ತುಂಬಿದ ಹಾಗೂ ಸರಳತೆಯನ್ನು ಮೌಲ್ಯವನ್ನಾಗಿಸಿದ ಕೀರ್ತಿ ಅವರದು. 'ಬೇಡರ ಕಣ್ಣಪ್ಪ'ದಿಂದ 'ಒಡಹುಟ್ಟಿದವರು'ವರೆಗೆ ಇನ್ನೂರು ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿ, ಗಾಯಕನಾಗಿಯೂ ಯಶಸ್ಸು ಪಡೆದರು. 'ಸತ್ಯ ಹರಿಶ್ಚಂದ್ರ', 'ಬಂಗಾರದ ಮನುಷ್ಯ', 'ಕಸ್ತೂರಿ ನಿವಾಸ', 'ಭಕ್ತ ಕುಂಬಾರ', 'ಕಾಮನಬಿಲ್ಲು' – ಇವು ಸಿನಿಮಾ ಹೆಸರುಗಳಷ್ಟೇ ಅಲ್ಲ, ರಾಜ್ ವ್ಯಕ್ತಿತ್ವಕ್ಕೂ ಹೊಂದುವ ವಿಶೇಷಣಗಳು.

ಪದಬಂಧ 5856

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಅಭಿಮಾನಿಯಿಂದ ಹೆಚ್ಚಿದ ಆತ್ಮಗೌರವ! (4)
3.ಈತ ಬಿಡುಗಡೆ ಹೊಂದಿದವನು (3)
4.ಗಮನವಿಟ್ಟು ನೋಡಿ! ಆಕಾಶ ಕಾಣುತ್ತದೆ! (3)
6.ಕಾರನ್ನೇರಿದ ಚಾರನ ಕೆಲಸವೆಲ್ಲಾಬೇಕಾಬಿಟ್ಟಿ! (4)
8.ಯತಿಗೆ ಅನುಗುಣವಾಗಿ ಉಚಿತವಾಗುವಂತೆ! (4)
10.ಒಳ್ಳೆಯ ನಾದ (3)
12.ಸಂಕಟ ಬಂದಾಗ ವ್ಯಕ್ತವಾದ ಇಚ್ಛೆ (3)
13.ತರಂಗದಂತಿರುವ ಒಳಮನಸ್ಸು (4)
15.ಹರಿಯನ್ನು ನೆನೆಯುತ್ತಾ ನಡೆಸಿದ ದೋಣಿ (4)
16.ದಾವಣಿ ಧರಿಸಿ ಹೇಳಿದ ಜನಪದ ಹಾಡು (3)
17.ಗೊರಟೆಯಲ್ಲ!ಹಣ್ಣಿನ ಮೇಲುಹೊದಿಕೆ!(3)
18.ಎಳೆತನದಿಂದಲೇ ಮೊಳೆತ ಸ್ನೇಹ (4)

ಮೇಲಿಂದ ಕೆಳಕ್ಕೆ

2.ನರನು ನೋಡುತ್ತಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
5.ದೂರನ್ನು ತರುತ್ತಿರುವ ರಾಯಭಾರಿ (2)
7.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು (3)
9.ಚೀಲ ತರುವಾಗ ಹಾಕಿದ ಬಾಗಿಲಿನ ಕೊಂಡಿ (3)
11.ಸ್ವಾಗತ ಕೋರುತ್ತಾ ತನಗೆ ತಾನು ಮಾತಾಡಿ-ಕೊಳ್ಳುವುದು (3)
12.ಪ್ರಯಾಣಿಸುವವನು ಇಲ್ಲಿದ್ದಾನೆ (3)
13.ಅಂಬುಧಿಗೆ ಬಿದ್ದಿರುವ ಬಾಣ (2)
14.ಲಾಗ ಹಾಕುವಾಗ ಆದ ಗದ್ದಲ (3)
15.ಹೆಣ್ಣಿಗೆ ಬೇಕಾದ ಬಾಚಣಿಕೆ (3)

5855ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದರಂಭರಣ
3.ಗುಂಗು 5.ಮಡಿವಂತ
7.ಆಗಮ 9.ಬಿಸಿಲ್ಗುದುರೆ
11.ಪ್ರವಾದಿ 12.ನವರಂಗ
15.ತ್ವರ 16.ಮರಣಶಾಸನ

ಮೇಲಿಂದ ಕೆಳಕ್ಕೆ:
1.ಉಗಮ 2.ರಫ್ತು
3.ಗುಲಾಮಗಿರಿ 6.ತಕಸಿ
7.ಅಸರೆ 8.ವಿಶ್ವಪ್ರಯತ್ನ
9.ಬಿಡದಿ 10.ದುಮ್ಮಾನ
13.ಗಹನ 14.ಸ್ತರ

ಸುಡೊಕು 6241

5				4		8		7
4		8					9	
	9			7		6		4
	5		7				6	
				9			5	
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6240 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಅಷ್ಟಮಿ ಗಂ. 22-46 ನಕ್ಷತ್ರ: ಶ್ರವಣ ಗಂ. 11-48 ಯೋಗ: ಗಂಡ ಗಂ. 6-38 ನಂತರ ವೃದ್ಧಿ ಗಂ. 28-23 ಕರಣ: ವಿಷ್ಟಿ ಗಂ. 11-25, ತುಲಾ ಮಾಸದ 23 ನೇ ದಿನ, ಮಳೆನಕ್ಷತ್ರ: ವಿಶಾಖ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-31 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 06 ಜುಮಾದುಲ್ಲಾವಲ್
ದಿನ ವಿಶೇಷ : ಗೋಪಾಷ್ಟಮಿ, ತ್ರಿವೇಂಡ್ರಂ ಆರತಿ (ಕೇರಳ), ಅದೃಷ್ಟ ಸಂಖ್ಯೆ : 6, 1

ಮೇಷ: ನೈತಿಕವಾಗಿ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಇನ್ನೂ ಹೆಚ್ಚಿನ ಪ್ರೇರಣೆ ಸಿಕ್ಕಿ ಮುಂದುವರಿಯಲಿ. ನಿಮ್ಮದಲ್ಲದ ವಸ್ತುವಿನ ಬಗ್ಗೆ ಯಾವುದೇ ರೀತಿಯ ವ್ಯಾಮೋಹ ಇಟ್ಟುಕೊಳ್ಳಬೇಡಿ.

ವೃಷಭ: ವಿದ್ಯಾರ್ಥಿಗಳಿಗೆ ಆಲಸ್ಯದ ಪರ್ವತ ಎದುರಾಗುವುದರಿಂದ ವಿದ್ಯಾರ್ಜ-ನೆಯಲ್ಲಿ ಸ್ವಲ್ಪ ಹಿನ್ನಡೆ. ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ತಪಶ್ಶಕ್ತಿ ಹೊಂದಿರುವವರ ಅನುಗ್ರಹಕ್ಕೆ ಪಾತ್ರರಾಗುವಿರಿ.

ಮಿಥುನ: ತಾಂತ್ರಿಕ ವೃತ್ತಿಯ ದೋಷ ಇನ್ನೊಬ್ಬರಲ್ಲಿ ಕೇಳಿ ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಿ. ಅಧಿಕ ಕೋಪದಿಂದ ಕೆಲವೊಂದು ವಿಚಾರದಲ್ಲಿ ನಷ್ಟದ ಅನುಭವ ಆಗುವಂತಾಗಲಿದೆ. ಮಾನಹಾನಿಯ ಸಾಧ್ಯತೆಗಳೂ ಇರಬಹುದು.

ಕರ್ಕಾಟಕ: ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟದ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಇಲ್ಲ. ಶತ್ರುಗಳ ಮತ್ತು ಸಾಲ ಕೇಳುವವರ ಬಲೆಗೆ ಬೀಳದಂತೆ ಎಚ್ಚರ ವಹಿಸಬೇಕು.

ಸಿಂಹ: ಸಂಘ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಸ್ವಯಂಪ್ರೇರಿತರಾಗಿ ಅಧಿಕ ಕೆಲಸ ಅಥವಾ ಹಣಕಾಸಿನ ಜವಾಬ್ದಾರಿ ತೆಗೆದುಕೊಳ್ಳುವುದು ಸಮಸ್ಯೆಯನ್ನು ಎಳೆದು-ಕೊಂಡಂತಾಗುತ್ತದೆ. ದಿನಸಿ ವರ್ತಕರಿಗೆ ಲಾಭದಾಯಕ ದಿನ.

ಕನ್ಯಾ: ಆಭರಣಗಳ ಖರೀದಿ, ಸತ್ಕಾರ್ಯದಲ್ಲಿ ಆಸಕ್ತಿ. ಬಂಧು-ಬಾಂಧವರ ಸಹಾಯ ಸತ್ಫಲವನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲ ಸಿಗದಿದ್ದಲ್ಲಿ ದುಡುಕು ನಿರ್ಧಾರ ತೆಗೆದುಕೊಳ್ಳಬೇಡಿ.

ತುಲಾ: ಸುಗಂಧ ದ್ರವ್ಯಗಳ ಉತ್ಪಾದಕ ಕೈಗಾರಿಕೆಗೆ ಮತ್ತು ಮಾರಾಟದವರಿಗೆ ಉತ್ತಮ ವ್ಯಾಪಾರ ಕಂಡುಬರುತ್ತದೆ. ನೆಂಟರ ಸಹಾಯದಿಂದ ಮಗಳ ಮದುವೆ ಗೊತ್ತಾಗಿ ಮುಂದಿನ ತಯಾರಿಯನ್ನು ಮಾಡಿಕೊಳ್ಳುವಿರಿ.

ವೃಶ್ಚಿಕ: ಕೃಷಿಗೆ ಸಂಬಂಧಿಸಿದಂತೆ ಮಾಡುವ ಕೆಲಸಕ್ಕೆ ಲಾಭ ಉಂಟಾಗುತ್ತದೆ. ಪ್ರಭಾವಿ ವ್ಯಕ್ತಿಯೊಬ್ಬರಿಂದ ಕಾರ್ಯವನ್ನು ಸಾಧಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಇಂಧನ ಮಾರಾಟಗಾರರಿಗೆ ಅನುಕೂಲಕರ ದಿನ.

ಧನು: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ಸಹೋದ್ಯೋಗಿಗಳೊಂದಿಗಿನ ಬಾಂಧವ್ಯ ಇನ್ನಷ್ಟು ಉತ್ತಮ-ಗೊಳ್ಳಲಿದೆ. ಸಾಮಾಜಿಕವಾಗಿ ಜನೋಪಕಾರದಿಂದ ಶ್ಲಾಘನೆ ಲಭಿಸಲಿದೆ.

ಮಕರ: ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರು ವೃತ್ತಿಪರವಾಗಿ ಹೆಚ್ಚಿನ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಉತ್ತಮ. ಭವಿಷ್ಯದ ಯೋಜನೆಯಲ್ಲಿ ಪಾಲುದಾರಿಕೆಯು ಹಂತ ಹಂತವಾಗಿ ಲಾಭತರಲಿದೆ.

ಕುಂಭ: ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವಿರಿ. ನಿಮ್ಮ ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸುವಿರಿ.

ಮೀನ: ಎಲ್ಲಾ ಕಿರಿ ಕಿರಿಗಳನ್ನೂ, ತೊಂದರೆ ತಾಪತ್ರಯಗಳನ್ನೂ ಶಾಂತ ರೀತಿಯಿಂದ ಎದುರಿಸುವಿರಿ. ಆಲಸ್ಯತನವನ್ನು ದೂರಮಾಡಿಕೊಳ್ಳುವುದ-ರಿಂದ ಅಭಿವೃದ್ಧಿಗೆ ಒಳ್ಳೆಯದು. ಷೇರು ಇಂದು ಅದೃಷ್ಟದಾಯಕವಾಗಿರುತ್ತದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33000
ಹಳತು	41500-49500
ಚಿತ್ರದುರ್ಗ	
ಅಪಿ	48600-49000
ಬೆಟ್ಟೆ	30600-31000
ಕೆಂಪುಗೋಟು	25600-26000
ರಾಶಿ	48100-48500
ಕುಮಟ	
ಚಿಪ್ಪು	23569-26019
ಕೋಕ	6029-22589
ಫ್ಯಾಕ್ಟರಿ	23569-26019
ಹಳೆಚಾಲಿ	36089-39099
ಹೊಸಚಾಲಿ	30899-34229
ಶಿವಮೊಗ್ಗ	
ಬೆಟ್ಟೆ	40009-57420
ಗೊರಬಲು	17510-32600
ರಾಶಿ	45869-49909
ಸರಕು	64199-91450
ಸಿದ್ದಾಪುರ	
ಬಿಳಿಗೋಟು	23689-26899
ಚಾಲಿ	30509-34699
ಕೋಕ	21219-25899
ಕೆಂಪುಗೋಟು	19319-23809
ರಾಶಿ	42699-46199
ತಟ್ಟಿಬೆಟ್ಟೆ	28099-37099
ಶಿರಸಿ	
ಬೆಟ್ಟೆ	31189-42009
ಬಿಳಿಗೋಟು	21899-30755
ಚಾಲಿ	32519-35869
ಕೆಂಪುಗೋಟು	11699-11809
ರಾಶಿ	40099-44909
ಯಲ್ಲಾಪುರ	
ಅಪಿ	68899-68899
ಬಿಳಿಗೋಟು	17109-28210
ಚಾಲಿ	28691-35709
ಕೋಕ	5609-18899
ಕೆಂಪುಗೋಟು	16899-24099
ರಾಶಿ	38499-56259
ತಟ್ಟಿಬೆಟ್ಟೆ	24899-36795

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹285-571

ದ್ವಿತಳಿ (ಬಿ.ವಿ) ₹386-688


ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹7800-8500
ಕೆ.ಆರ್.ಪೇಟೆ	₹11928-11928
ತುರುವೇಕೆರೆ	₹14300-14300


ಷೇರುಪೇಟೆ ವಹಿವಾಟು ▼55



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,199
ಇಂದಿನ ಅಂತ್ಯ	24,148
▼	51
ದಿನದ ಕನಿಷ್ಠ	24,066

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹1365 (1350)
ಸೂರ್ಯಕಾಂತಿ (ರಿಫೈನ್ಡ್)	₹1380 (1380)
ಪಾಮೋಲಿನ್	₹1380 (1370)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹178
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹168

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹17800
ಎಸಿ	₹11500
ಆರ್‌ಪಿ	₹18000
ಆರ್‌ಸಿ	₹10270


ಇ–ಕಾಮರ್ಸ್ ಉಗ್ರಾಣಗಳ ಮೇಲೆ ನಿಗಾ

ನವದೆಹಲಿ (ಪಿಟಿಐ): ಇ–ಕಾಮರ್ಸ್ ಕಂಪನಿಗಳ ಉಗ್ರಾಣದ ಮೇಲೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿರುವ ಆಯುಕ್ತರು ನಿಗಾವಹಿಸಬೇಕು. ಗ್ರಾಹಕರಿಗೆ ಸುರಕ್ಷಿತ ಆಹಾರ ಪೂರೈಕೆ ಸಂಬಂಧ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು ರೂಪಿಸಬೇಕು ಎಂದು ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸೂಚಿಸಿದೆ.

ಪ್ರಾಧಿಕಾರದ ಕೇಂದ್ರೀಯ ಸಲಹಾ ಸಮಿತಿಯ 45ನೇ ಸಭೆಯಲ್ಲಿ ಈ ಕುರಿತು ಚರ್ಚಿಸಿ ನಿರ್ದೇಶನ ನೀಡಲಾಗಿದೆ.

ನವೆಂಬರ್‌ನಿಂದ ಮಾರ್ಚ್‌ವರೆಗೆ ದೇಶದ ಪ್ರಸಿದ್ಧ ಪ್ರವಾಸಿ ತಾಣಗಳಿಗೆ ಜನರು ಹೆಚ್ಚಾಗಿ ಭೇಟಿ ನೀಡುತ್ತಾರೆ. ಹಾಗಾಗಿ, ಈ ತಾಣಗಳಲ್ಲಿ ಮಾರಾಟ ಮಾಡುವ ಆಹಾರ ಪದಾರ್ಥಗಳ ಸುರಕ್ಷತೆ ಬಗ್ಗೆ ಹೆಚ್ಚಿನ ನಿಗಾವಹಿಸಬೇಕು. ಸಂಚಾರ ಪ್ರಯೋಗಾಲಯ ಸೇವೆ ಬಳಸಿಕೊಂಡು ಸ್ಥಳದಲ್ಲಿಯೇ ಆಹಾರವನ್ನು ಪರೀಕ್ಷಿಸಬೇಕು ಎಂದು ಸೂಚಿಸಿದೆ.

In Loving Memory



ಶ್ರೀ ಪಿ.ರಾಮು
ಮಾವಳ್ಳಿ ರಾಮಣ್ಣ
(Retd. BDA Class-I Contractor)
ಜನನ: 09.11.1941 – ಮರಣ :21.04.2021
83ನೇ ವರ್ಷದ ಜನ್ಮದಿನದ ಸ್ಮರಣೆಯಲ್ಲಿರುವ
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Vishweshwariah Layout

BUILDING SALE G+3 Residential 30x40 BDA Fully Furnished Rental Income SMV Layout 1st Block Kengeri Owner: 9886880271

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9148525233

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು



ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಕಿ ಜನಾಂಗದ 12ನೇ ತಲೆಮಾರಿನ 50ವರ್ಷ ಅನುಭವದ 35,000ಕ್ಕೂ ಹೆಚ್ಚು ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಶ್ರೀ.ದೇವಾನಂದ್.ನಿಮ್ಮೆಲ್ಲಾ ಕಷ್ಟಗಳಿಗೆ ಎಲ್ಲಿಲ್ಲದ_ಮುಕ್ತಿ, ಕಾಮಾಕ್ಯ_ಮೋಡಿವಶೀಕರಣ ಯಂತ್ರಕ್ಕೆ ರೂ.2300.ಪ್ರಾಚೀನ ಆಯುರ್ವೇದ ತೂಕ ಇಳಿಕೆ,ಹಸಿವು,ಲೈಂಗಿಕತೆ. 9353143216

ಇತರೆ

Furniture & Furnishings

ಮನೆ ಮತ್ತು ಕಚೇರಿ ಮರಗೆಲಸಕ್ಕೆ ಬಡಗಿಗಳು (Carpenter) ಲಭ್ಯವಿರುತ್ತಾರೆ 7829229366 ಪ್ಲೈವುಡ್ ಗಾಜು ಲ್ಯಾಮಿನೇಟ್ ಕನ್ನಡಿ

ಪ್ರವಾಸ

Travel

ರಿಯಾಯತಿ ದರದಲ್ಲಿ ವಿದೇಶಿ ಪ್ರವಾಸ 6 ದಿನಗಳ ದುಬೈ, 6 ದಿನಗಳ ಬಾಲಿ, 6 ದಿನಗಳ ಶ್ರೀ ಲಂಕಾ, 7/11 ದಿನಗಳ ಸಿಂಗಪುರ್, ಮಲೇಷ್ಯಾ, ಥೈಲ್ಯಾಂಡ್, 7 ದಿನಗಳ ಜಪಾನ್ ಭಟ್ ಟ್ರಾವೆಲ್ & ಟೂರ್ಸ್ 9844037295 9844166555

04.01.2025 12.03.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 13.01.2025 ದುಬೈ,ಅಬುದಾಬಿ 5 ದಿನಗಳು. 23.11.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 6 ದಿನಗಳು. 30.11.2024 ಅಸ್ಸಾಂ,ಮೇಘಾಲಯ 9 ದಿನಗಳು. 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

04.01.2025 12.03.2025 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 13.01.2025 ದುಬೈ,ಅಬುದಾಬಿ 6 ದಿನಗಳು. 23.12.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 7 ದಿನಗಳು. 10.12.2024 08.01.2025 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ಗುಣಮಟ್ಟ ಕಳೆದುಕೊಂಡ ಸರಕು: ಗ್ರಾಹಕರಿಗೂ ತೊಂದರೆ

ಈರುಳ್ಳಿ ಸಗಟು ಧಾರಣೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಒಂದು ವಾರದ ಅವಧಿಯಲ್ಲಿ ಇಲ್ಲಿನ ಯಶವಂತಪುರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ 'ಎ' ಗ್ರೇಡ್ ಈರುಳ್ಳಿಯ ಸಗಟು ದರವು ಕ್ವಿಂಟಲ್‌ಗೆ ₹1,000 ಏರಿಕೆಯಾಗಿದೆ.

ಇತ್ತೀಚೆಗೆ ಸುರಿದ ಮಳೆಯಿಂದಾಗಿ ರಾಜ್ಯದ ವಿವಿಧೆಡೆ ರೈತರು ಬೆಳೆದಿದ್ದ ಈರುಳ್ಳಿ ಫಸಲು ಹಾನಿಗೀಡಾಗಿತ್ತು. ಸದ್ಯ ಮಾರುಕಟ್ಟೆಗೆ ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿಯ ಆವಕ ಹೆಚ್ಚಾಗುತ್ತಿದೆ.

ವಾರದ ಹಿಂದೆ ಸ್ಥಳೀಯವಾಗಿ ಪೂರೈಕೆಯಾಗುವ 'ಎ' ಗ್ರೇಡ್ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ಗರಿಷ್ಠ ಸಗಟು ದರ ₹4,500 ಇತ್ತು. ಈಗ ₹5,500ಕ್ಕೆ ಮುಟ್ಟಿದೆ.

ಪ್ರಸ್ತುತ ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿಗೆ ₹45ರಿಂದ ₹65 ದರವಿದೆ. ಸಗಟು ದರ ಏರಿಕೆಯು ಇದೇ ರೀತಿ ಮುಂದುವರಿದರೆ ಚಿಲ್ಲರೆ ದರದಲ್ಲಿ ಸಹಜವಾಗಿ ಏರಿಕೆಯಾಗಲಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಶುಕ್ರವಾರದಂದು ಯಶವಂತಪುರ ಎಪಿಎಂಸಿಗೆ 94,182 ಚೀಲ (ಪ್ರತಿ ಚೀಲ 50 ಕೆ.ಜಿ) ಹಾಗೂ ದಾಸನಪುರ ಎಪಿಎಂಸಿಗೆ 968 ಚೀಲ ಈರುಳ್ಳಿ ಆವಕವಾಗಿದೆ. ಪ್ರಸ್ತುತ ಗದಗ, ಬಾಗಲಕೋಟೆ, ವಿಜಯಪುರ, ಚಿತ್ರದುರ್ಗ, ಹಿರಿಯೂರು, ಹೊಸದುರ್ಗ ಭಾಗದಲ್ಲಿ ಬೆಳೆದಿರುವ ಈರುಳ್ಳಿಯು ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುತ್ತಿದೆ.

'ಮಾರುಕಟ್ಟೆಗೆ ಪೂರೈಕೆಯಾಗುವ ಈರುಳ್ಳಿ ಪೈಕಿ ಶೇ 90ರಷ್ಟು ಸರಕು ಮಳೆಗೆ ಸಿಲುಕಿ ಗುಣಮಟ್ಟ ಕಳೆದುಕೊಂಡಿದೆ. ಉಳಿದ ಶೇ 10ರಷ್ಟು ಸರಕಿಗಷ್ಟೇ ಉತ್ತಮ ಬೆಲೆ ಸಿಗುತ್ತಿದೆ. ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿಗೆ ಪ್ರತಿ ಕ್ವಿಂಟಲ್‌ಗೆ ₹500ರಿಂದ ₹1,500 ದರವಿದೆ. ಇದು ಬಹುಬೇಗ ಕೆಡುತ್ತದೆ. ಹಾಗಾಗಿ, ಇದನ್ನು ಬೇರೆ ರಾಜ್ಯಗಳು ಅಥವಾ ಜಿಲ್ಲೆಗಳಿಗೂ ಪೂರೈಸಲು ಆಗುತ್ತಿಲ್ಲ' ಎನ್ನುತ್ತಾರೆ ಸಗಟು ವರ್ತಕ ಕೆ. ನಾಗರಾಜ್.

'ಗುಣಮಟ್ಟ ಕಳೆದುಕೊಂಡಿರುವ ಈರುಳ್ಳಿಯನ್ನು ಮನೆಗಳಲ್ಲಿ ಹಲವು ದಿನದವರೆಗೆ ಸಂಗ್ರಹಿಸಿಟ್ಟುಕೊಳ್ಳಲು ಆಗುತ್ತಿಲ್ಲ. ಬಹುಬೇಗ ಕೊಳೆತು ಹೋಗುತ್ತಿದೆ. ಇದರಿಂದ ಹೆಚ್ಚು ಹಣ ನೀಡಿ ಖರೀದಿಸಿದ ಗ್ರಾಹಕರು ಕೂಡ ತೊಂದರೆ ಅನುಭವಿಸುವಂತಾಗಿದೆ' ಎಂಬುದು ಅವರ ವಿವರಣೆ.

ಮಹಾರಾಷ್ಟ್ರದ ಸರಕಿಗೆ ಉತ್ತಮ ಬೆಲೆ

ಮಹಾರಾಷ್ಟ್ರದಿಂದ ಪೂರೈಕೆಯಾಗುವ 'ಎ' ಗ್ರೇಡ್ ಈರುಳ್ಳಿಯ ಪ್ರತಿ ಕೆ.ಜಿಗೆ ₹65ರಿಂದ ₹70 ದರವಿದೆ. ಅಲ್ಲಿಂದ ಹೊಸ ಸರಕು ಪೂರೈಕೆಯಾಗುವುದಿಲ್ಲ. ದಾಸ್ತಾನಿಟ್ಟುಕೊಂಡಿದ್ದ ಸರಕು ಪೂರೈಕೆಯಾಗುತ್ತಿದೆ ಎನ್ನುತ್ತಾರೆ ವರ್ತಕರು.

ಮಹಾರಾಷ್ಟ್ರದ ವ್ಯಾಪಾರಿಗಳು ಪ್ರತಿನಿತ್ಯ 5 ಸಾವಿರ ಚೀಲದಷ್ಟು ಈರುಳ್ಳಿಯನ್ನು ಇಲ್ಲಿನ ಮಾರುಕಟ್ಟೆಗೆ ಪೂರೈಸುತ್ತಾರೆ. 'ಬಿ' ಗ್ರೇಡ್ ಈರುಳ್ಳಿಗೆ ಕೆ.ಜಿಗೆ ₹60ರಿಂದ ₹65 ಬೆಲೆಯಿದೆ ಎಂಬುದು ಅವರ ವಿವರಣೆ.

ದರ ಇಳಿಕೆ: ರೈತರಿಗೆ ಆತಂಕ



ಹುಬ್ಬಳ್ಳಿ: ಇಲ್ಲಿನ ಅಮರಗೋಳದ ಎಪಿಎಂಸಿಗೆ ಧಾರವಾಡ, ವಿಜಯಪುರ ಹಾಗೂ ಜಮಖಂಡಿಯಿಂದ ಈರುಳ್ಳಿ ಆವಕವಾಗುತ್ತಿದೆ.

ಕಳೆದ ವಾರ ಕ್ವಿಂಟಲ್‌ಗೆ ₹5,000 ಇದ್ದ ದರವು, ಶುಕ್ರವಾರ ₹4,000ಕ್ಕೆ ಇಳಿಕೆಯಾಗಿದೆ. ಒಂದು ವಾರದೊಳಗೆ ₹1,000 ಕಡಿಮೆಯಾಗಿದ್ದು, ಬೆಳೆಗಾರರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

'ಎಪಿಎಂಸಿಗೆ 32 ಸಾವಿರ ಕ್ವಿಂಟಲ್ ಈರುಳ್ಳಿ ಬಂದಿತ್ತು. ಮುಂದಿನ ತಿಂಗಳು ಪುಣೆಯಿಂದ ಈರುಳ್ಳಿ ಪೂರೈಕೆಯಾಗುವ ನಿರೀಕ್ಷೆಯಿದೆ. ಆಗ ದರ ಇನ್ನಷ್ಟು ಇಳಿಕೆ ಆಗಬಹುದು' ಎಂದು ಸ್ಥಳೀಯ ವ್ಯಾಪಾರಸ್ಥರು ಹೇಳುತ್ತಾರೆ.

ಬಾಗಲಕೋಟೆ ಎಪಿಎಂಸಿ ಮಾರುಕಟ್ಟೆಯಲ್ಲಿ ಕಳೆದ ವಾರಕ್ಕಿಂತ ಈ ವಾರ ಈರುಳ್ಳಿ ಬೆಲೆ ಕಡಿಮೆಯಾಗಿದೆ. ಹಿಂದಿನ ವಾರ ಕ್ವಿಂಟಲ್‌ಗೆ ₹1,300ರಿಂದ ₹ 5,000ದ ಇತ್ತು. ಈ ವಾರ ₹500ರಿಂದ ₹3,700ರ ವರೆಗೆ ಮಾರಾಟವಾಗಿದೆ.

'ಮಳೆ ಸುರಿದಿದ್ದರಿಂದ ಈರುಳ್ಳಿ ಹಸಿಯಾಗಿತ್ತು. ಇದರಿಂದ ಬೆಲೆ ಕುಸಿದಿದೆ. ಮುಂದಿನ ದಿನಗಳಲ್ಲಿ ಒಣ ಈರುಳ್ಳಿ ಬರುವುದರಿಂದ ಕ್ವಿಂಟಲ್‌ಗೆ ₹5,000 ದರ ಏರಿಕೆ ಆಗಬಹುದು' ಎಂದು ವಾಪಾರಸ್ಥರು ಹೇಳುತ್ತಾರೆ.

ಬೆಳಗಾವಿ ಎಪಿಎಂಸಿಯಲ್ಲಿ ಈರುಳ್ಳಿ ಕನಿಷ್ಠ ದರ ಕ್ವಿಂಟಲ್‌ಗೆ ₹1,000 ಹಾಗೂ ಗರಿಷ್ಠ ದರ ₹4,200 ಇದೆ.

'ಗದಗ ಮಾರುಕಟ್ಟೆಯಲ್ಲಿ ಉತ್ತಮ ದರ ಸಿಗುತ್ತಿದೆ. ಚಿಲ್ಲರೆ ದರ ಕೂಡ ಏರಿಕೆಯಾಗಿದೆ. ದೀಪಾವಳಿಗೂ ಮುನ್ನ ಕ್ವಿಂಟಲ್‌ಗೆ ₹1,000ದಿಂದ ₹1,500 ದರ ಇತ್ತು. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು. ಹಬ್ಬ ಮುಗಿಯುತ್ತಿದ್ದಂತೆ ಬೆಲೆ ಹೆಚ್ಚಳವಾಗಿದೆ. ಗುಣಮಟ್ಟದ ಈರುಳ್ಳಿಗೆ ₹3,500ರಿಂದ ₹5,000ದ ವರೆಗೆ ದರವಿದೆ' ಎಂದು ಬೆಳೆಗಾರರು ಹೇಳುತ್ತಾರೆ.

22 ಸಾವಿರ ಟನ್ ಉದ್ದು ಆಮದು



ನವದೆಹಲಿ (ಪಿಟಿಐ): ಭಾರತದ ಬೇಡಿಕೆಗೆ ಅನುಗುಣವಾಗಿ ಅಗತ್ಯವಿರುವ ಉದ್ದು ಮತ್ತು ತೊಗರಿ ಬೇಳೆ ಪೂರೈಕೆಯಲ್ಲಿ ಬ್ರೆಜಿಲ್ ಪ್ರಮುಖ ದೇಶವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಬ್ರೆಜಿಲ್‌ನ ಕೃಷಿ ಸಚಿವಾಲಯದ ಹಿರಿಯ ಅಧಿಕಾರಿ ಜೂಲಿಯೊ ಸೀಸರ್ ರಾಮೋಸ್ ನೇತೃತ್ವದ ನಿಯೋಗವು ಗುರುವಾರ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಅವರನ್ನು ಭೇಟಿ ಮಾಡಿ, ಆಮದು ಕುರಿತಂತೆ ಚರ್ಚಿಸಿತು.

ಕಳೆದ ವರ್ಷ ಬ್ರೆಜಿಲ್‌ನಿಂದ 4,102 ಟನ್‌ನಷ್ಟು ಉದ್ದು ಆಮದು ಮಾಡಿಕೊಳ್ಳಲಾಗಿತ್ತು. ಪ್ರಸಕ್ತ ವರ್ಷದ ಅಕ್ಟೋಬರ್ ಅಂತ್ಯದವರೆಗೆ 22 ಸಾವಿರ ಟನ್ ಆಮದು ಮಾಡಿಕೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಭಾರತದಲ್ಲಿ ಬೇಳೆಕಾಳು ಬಿತ್ತನೆ ಅವಧಿಯಲ್ಲಿಯೇ ಬ್ರೆಜಿಲ್ ಮತ್ತು ಆಸ್ಟ್ರೇಲಿಯಾದಲ್ಲೂ ಬಿತ್ತನೆ ಮಾಡಲಾಗುತ್ತದೆ. ಹಾಗಾಗಿ, ಇಲ್ಲಿನ ಫಸಲಿನ ಇಳುವರಿಯನ್ನು ಅವಲೋಕಿಸಿ ಆ ದೇಶಗಳಲ್ಲಿ ಬಿತ್ತನೆ ಮಾಡಲಾಗುತ್ತದೆ. ಹಾಗಾಗಿ, ದೇಶೀಯವಾಗಿ ಬೇಳೆಕಾಳುಗಳ ಕೊರತೆ ಎದುರಾದಾಗ ಅಲ್ಲಿಂದ ಆಮದು ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ವಿವರಿಸಿದೆ.

ಹಿಂಗಾರು ಅವಧಿಯಲ್ಲಿ ದೇಶದಲ್ಲಿ ಕಡಲೆ ಕಾಳು ಉತ್ಪಾದನೆ ಕಡಿಮೆಯಾಗಲಿದೆ ಎಂದು ಅಂದಾಜಿಸಿದ್ದ ಕೇಂದ್ರ ಸರ್ಕಾರವು, ಮೇ ತಿಂಗಳಿನಲ್ಲಿ ಕಡಲೆ ಕಾಳು ಮೇಲಿನ ಆಮದು ಸುಂಕವನ್ನು ಹಿಂಪಡೆಯಿತು. ಹಾಗಾಗಿ, ಆಸ್ಟ್ರೇಲಿಯಾದಲ್ಲಿ ಕಡಲೆ ಬಿತ್ತನೆ ಪ್ರದೇಶದಲ್ಲಿ ಏರಿಕೆಯಾಗಿದೆ. ಅಲ್ಲಿ ಕಳೆದ ವರ್ಷ 4.9 ಲಕ್ಷ ಟನ್ ಉತ್ಪಾದನೆಯಾಗಿತ್ತು. ಈ ಬಾರಿ 13.3 ಲಕ್ಷ ಟನ್ ಹೆಚ್ಚಳವಾಗುವ ನಿರೀಕ್ಷೆಯಿದೆ. ಭಾರತಕ್ಕೆ ರಫ್ತು ಮಾಡುವ ಉದ್ದೇಶದಿಂದ ಅಲ್ಲಿ ಉತ್ಪಾದನೆಯನ್ನು ಹೆಚ್ಚಿಸಲಾಗಿದೆ ಎಂದು ವಿವರಿಸಿದೆ.

ಮೆಣಸಿನಕಾಯಿ ಆವಕ ಚೇತರಿಕೆ

ಪ್ರಜಾವಾಣಿ ವಾರ್ತೆ



ಬ್ಯಾಡಗಿ (ಹಾವೇರಿ ಜಿಲ್ಲೆ): ಇಲ್ಲಿನ ಮಾರುಕಟ್ಟೆಗೆ ಶುಕ್ರವಾರ 28,431 ಚೀಲ (7,107 ಕ್ವಿಂಟಲ್) ಮೆಣಸಿನಕಾಯಿಯನ್ನು ಮಾರಾಟಕ್ಕೆ ತರಲಾಗಿದ್ದು, ಆವಕದಲ್ಲಿ ಹೆಚ್ಚಳವಾಗಿದೆ.

ದೀಪಾವಳಿ ಹಬ್ಬದ ಬಳಿಕ ಹೊಸ ಹಂಗಾಮು ಆರಂಭವಾಗಿದೆ. ಬಳ್ಳಾರಿ, ರಾಯಚೂರು, ಅಜ್ಜಂಪುರ ಮತ್ತಿತರ ಭಾಗದಲ್ಲಿ ಬೆಳೆದ ಮೆಣಸಿನಕಾಯಿಯನ್ನು ಮಾರಾಟಕ್ಕೆ ತರಲಾಗುತ್ತಿದೆ.

ಈ ಬಾರಿಯೂ ಉತ್ತಮ ಫಸಲು ನಿರೀಕ್ಷಿಸಲಾಗಿದೆ. ಜನವರಿ ವೇಳೆಗೆ ಬಂಪರ್ ಬೆಳೆ ಬರುವ ನಿರೀಕ್ಷೆಯಿದೆ. ಮಾರುಕಟ್ಟೆಯಲ್ಲಿ ಗುಣಮಟ್ಟದ ಮೆಣಸಿನಕಾಯಿಗೆ ಉತ್ತಮ ಬೆಲೆ ಸಿಗುತ್ತಿದೆ.

ಕಳೆದ ವರ್ಷವೂ ಮಾರುಕಟ್ಟೆಗೆ ಮೆಣಸಿನಕಾಯಿ ಹೆಚ್ಚು ಪೂರೈಕೆಯಾಗಿದ್ದು, ಶೀಥಲೀಕರಣ ಘಟಕಗಳಲ್ಲಿ ಸಂಗ್ರಹಿಸಲಾಗಿದೆ. ಸದ್ಯ ಮಾರಾಟ ಕಡಿಮೆಯಿದೆ. ಇದರಿಂದ ಬೆಲೆಯಲ್ಲಿ ಚೇತರಿಕೆ ಕಂಡುಬಂದಿಲ್ಲ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

ಶುಕ್ರವಾರ ಮಾರುಕಟ್ಟೆಯಲ್ಲಿ 1,074 ಲಾಟ್ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಡಲಾಗಿದ್ದು, ಈ ಪೈಕಿ ತೇವಾಂಶ ಹೆಚ್ಚಿರುವ ಹಾಗೂ ಗುಣಮಟ್ಟದ ಕೊರತೆ ಇರುವ 102 ಲಾಟ್‌ಗಳಿಗೆ ವರ್ತಕರು ಟೆಂಡರ್ ನಮೂದಿಸಿಲ್ಲ.

ಪ್ರತಿ ಕ್ವಿಂಟಲ್ ಡಬ್ಬಿ ಮೆಣಸಿನಕಾಯಿ ₹29,200, ಕಡ್ಡಿ ಮೆಣಸಿನಕಾಯಿ ₹25,000 ಮತ್ತು ಗುಂಟೂರು ತಳಿ ಮೆಣಸಿನಕಾಯಿ ₹16,509ಕ್ಕೆ ಮಾರಾಟವಾಗಿದೆ ಎಂದು ಎಪಿಎಂಸಿ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಎಲ್‌ಐಸಿ ಲಾಭ ಇಳಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) 2024–25ನೇ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹7,621 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹7,925 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಶೇ 4ರಷ್ಟು ಕಡಿಮೆಯಾಗಿದೆ ಎಂದು ನಿಗಮವು, ಶುಕ್ರವಾರ ಷೇರುಪೇಟೆಗೆ ತಿಳಿಸಿದೆ.

ಒಟ್ಟು ವರಮಾನ ₹2.29 ಲಕ್ಷ ಕೋಟಿ ಆಗಿದೆ. ಹಿಂದಿನ ವರ್ಷ ₹2.01 ಲಕ್ಷ ಕೋಟಿ ಗಳಿಸಿತ್ತು. ಒಟ್ಟು ವೆಚ್ಚವು ₹2.22 ಲಕ್ಷ ಕೋಟಿಗೆ ಏರಿಕೆಯಾಗಿದೆ. ನಿವ್ವಳ ಎನ್‌ಪಿಎ ಶೇ 2.43 ರಿಂದ ಶೇ 1.72ಕ್ಕೆ ಇಳಿದಿದೆ ಎಂದು ತಿಳಿಸಿದೆ.

ಎಸ್‌ಬಿಐಗೆ ಲಾಭ ₹19,782 ಕೋಟಿ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹19,782 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹16,099 ಕೋಟಿ ಲಾಭ ಗಳಿಸಿತ್ತು. ಈ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಶೇ 23ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ಶುಕ್ರವಾರ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನವು ಕಳೆದ ವರ್ಷದ ಇದೇ ತ್ರೈಮಾಸಿಕದಲ್ಲಿ ₹1.12 ಲಕ್ಷ ಕೋಟಿ ಇತ್ತು. ಈ ಬಾರಿ ₹1.29 ಲಕ್ಷ ಕೋಟಿಗೆ ಏರಿಕೆಯಾಗಿದೆ. ವೆಚ್ಚದ ಪ್ರಮಾಣ ಹೆಚ್ಚಳವಾಗಿದ್ದು, ₹99,847 ಕೋಟಿ ಆಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ ಜೂನ್ ತ್ರೈಮಾಸಿಕದಲ್ಲಿ ಶೇ 2.21ರಷ್ಟಿತ್ತು. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 2.13ಕ್ಕೆ ಇಳಿದಿದೆ ಎಂದು ಬ್ಯಾಂಕ್ ತಿಳಿಸಿದೆ.

ಸ್ವಿಗ್ಗಿ: ₹11,327 ಕೋಟಿ ಬಂಡವಾಳ ಸಂಗ್ರಹ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಆಹಾರ ಪೂರೈಸುವ ಸ್ವಿಗ್ಗಿ ಕಂಪನಿಯ ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಹೂಡಿಕೆ ದಾರರಿಂದ ಉತ್ತಮ ಸ್ಪಂದನೆ ದೊರೆತಿದೆ. ಕಂಪನಿಯು ನಿರೀಕ್ಷಿಸಿದ್ದ ₹11,327 ಕೋಟಿ ಬಂಡವಾಳ ಸಂಗ್ರಹವಾಗಿದೆ.

ಒಟ್ಟು 16.07 ಕೋಟಿ ಷೇರುಗಳಿಗೆ ಬಿಡ್ ಆಹ್ವಾನಿಸಲಾಗಿತ್ತು. ಒಟ್ಟು 40.59 ಕೋಟಿ ಬಿಡ್‌ಗಳು ಸಲ್ಲಿಕೆಯಾಗಿವೆ. ಕಂಪನಿಯ ಷೇರುಗಳಿಗೆ ಒಟ್ಟಾರೆ 2.54 ಪಟ್ಟು ಬೇಡಿಕೆ ಕಂಡುಬಂದಿದೆ ಎಂದು ಷೇರುಪೇಟೆಯ ಅಂಕಿ-ಅಂಶಗಳು ತಿಳಿಸಿವೆ.

ಅರ್ಹ ಸಾಂಸ್ಥಿಕ ಹೂಡಿಕೆದಾರರ (ಕ್ಯುಐಬಿ) ವಿಭಾಗದಲ್ಲಿ 4.16 ಪಟ್ಟು ಹಾಗೂ ಚಿಲ್ಲರೆ ವೈಯಕ್ತಿಕ ಹೂಡಿಕೆದಾರರ ವಿಭಾಗದಿಂದ 1.03 ಪಟ್ಟು ಅರ್ಜಿಗಳು ಸಲ್ಲಿಕೆಯಾಗಿವೆ. ಸಾಂಸ್ಥಿಕೇತರ ವಿಭಾಗದಿಂದ ಶೇ 30ರಷ್ಟು ಅರ್ಜಿ ಸ್ವೀಕರಿಸಲಾಗಿದೆ.

ಕಂಪನಿಯು ಆರಂಭಿಕ ಹೂಡಿಕೆದಾರರ (ಆ್ಯಂಕರ್ ಇನ್‌ವೆಸ್ಟರ್) ಮೂಲಕ ₹5,085 ಕೋಟಿ ಬಂಡವಾಳ ಸಂಗ್ರಹಿಸಿದೆ.

ಟಾಟಾ ಮೋಟರ್ಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್‌ನ ನಿವ್ವಳ ಲಾಭದಲ್ಲಿ ಶೇ 10ರಷ್ಟು ಇಳಿಕೆಯಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹3,832 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹3,450 ಕೋಟಿ ಗಳಿಸಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಶುಕ್ರವಾರ ತಿಳಿಸಿದೆ. ಕಳೆದ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹1.04 ಲಕ್ಷ ಕೋಟಿ ವರಮಾನ ಗಳಿಸಲಾಗಿತ್ತು. ಈ ಬಾರಿ ₹1 ಲಕ್ಷ ಕೋಟಿ ಗಳಿಸಲಾಗಿದೆ. ಒಟ್ಟು ವೆಚ್ಚ ₹97,330 ಕೋಟಿ ಆಗಿದೆ ಎಂದು ತಿಳಿಸಿದೆ.

ಟ್ರಂಪ್, ಕಮಲಾಗೆ ರಾಹುಲ್ ಪತ್ರ



ನವದೆಹಲಿ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಡೊನಾಲ್ಡ್ ಟ್ರಂಪ್ ಮತ್ತು ಪರಾಭವಗೊಂಡಿರುವ ನಿರ್ಗಮಿತ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರಿಗೆ ಪ್ರತ್ಯೇಕ ಪತ್ರ ಬರೆದಿದ್ದಾರೆ.

ಟ್ರಂಪ್ ಅವರ ಗೆಲುವಿಗೆ ಅಭಿನಂದನೆ ಸಲ್ಲಿಸಿರುವ ರಾಹುಲ್ ಗಾಂಧಿ, ಟ್ರಂಪ್ ಅವರ ನಾಯಕತ್ವದಲ್ಲಿ ಎರಡೂ ರಾಷ್ಟ್ರಗಳ ಹಿತಾಸಕ್ತಿ ವಲಯಗಳಲ್ಲಿನ ಸಹಕಾರವು ಮತ್ತಷ್ಟು ಆಳವಾಗಿ ಬೇರೂರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಅಮೆರಿಕದ 47ನೇ ಅಧ್ಯಕ್ಷರಾಗಿ ಚುನಾಯಿತರಾಗಿರುವ ತಮಗೆ ಅಭಿನಂದನೆಗಳು. ಭವಿಷ್ಯದ ಬಗೆಗಿನ ನಿಮ್ಮ ದೂರದೃಷ್ಟಿಯ ಮೇಲೆ ಜನರು ಅತೀವ ಭರವಸೆ ಇಟ್ಟಿದ್ದಾರೆ' ಎಂದು ಹೇಳಿದ್ದಾರೆ.

'ಪ್ರಜಾಪ್ರಭುತ್ವದ ಮೌಲ್ಯಗಳೊಂದಿಗಿನ ಬದ್ಧತೆಯಲ್ಲಿ ಬೇರೂರಿರುವ 'ಐತಿಹಾಸಿಕ ಸ್ನೇಹ'ವನ್ನು ಭಾರತ ಮತ್ತು ಅಮೆರಿಕ ಹಂಚಿಕೊಂಡಿವೆ. ಭಾರತೀಯರು ಮತ್ತು ಅಮೆರಿಕನ್ನರಿಗಾಗಿ ಅವಕಾಶಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ನಾವು ಕೆಲಸ ಮುಂದುವರಿಸುವ ಭರವಸೆ ಇದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಕಮಲಾ ಹ್ಯಾರಿಸ್ ಅವರಿಗೆ, 'ಅತ್ಯಂತ ಉತ್ಸಾಹದಿಂದ ಚುನಾವಣೆಯನ್ನು ಎದುರಿಸಿದ್ದಕ್ಕೆ ಅಭಿನಂದನೆಗಳು. ಎಲ್ಲರನ್ನೂ ಒಗ್ಗೂಡಿಸುವ ನಿಮ್ಮ ಭರವಸೆಯ ಸಂದೇಶವು ಅನೇಕರಿಗೆ ಪ್ರೇರಣೆಯಾಗಲಿದೆ' ಎಂದು ಹೇಳಿದ್ದಾರೆ.

'ಬೈಡನ್ ಅವರ ನಾಯಕತ್ವದಲ್ಲಿ ಭಾರತ ಮತ್ತು ಅಮೆರಿಕ ರಾಷ್ಟ್ರಗಳು ಮಹತ್ವದ ಜಾಗತಿಕ ವಿಚಾರಗಳಲ್ಲಿ ಪರಸ್ಪರ ಸಹಕಾರವನ್ನು ಸಾಧಿಸಿದ್ದವು. ಪ್ರಜಾಪ್ರಭುತ್ವದ ಮೌಲ್ಯಗಳ ಮೇಲಿನ ಬದ್ಧತೆಯೇ ನಮ್ಮ ಸ್ನೇಹಕ್ಕೆ ದಾರಿದೀಪ. ಉಪಾಧ್ಯಕ್ಷೆಯಾಗಿ ಜನರನ್ನು ಒಗ್ಗೂಡಿಸುವ ನಿಮ್ಮ ದೃಢನಿಶ್ಚಯ ಮತ್ತು ಬದ್ಧತೆಯು ಜನಮನದಲ್ಲಿ ಸದಾ ಚಿರಸ್ಥಾಯಿಯಾಗಿರುತ್ತದೆ' ಎಂದು ಪತ್ರದಲ್ಲಿ ಹೇಳಿದ್ದಾರೆ.

ಜಾಲತಾಣ ಬಳಕೆ: 16ರ ಮಿತಿಗೆ ಆಸ್ಟ್ರೇಲಿಯಾದಲ್ಲಿ ವ್ಯಾಪಕ ಬೆಂಬಲ



ಮೆಲ್ಬರ್ನ್ (ಎಪಿ): 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆಗೆ ನಿರ್ಬಂಧ ಹೇರಲು ಉದ್ದೇಶಿಸಿರುವ ಸರ್ಕಾರದ ಕ್ರಮಕ್ಕೆ ಆಸ್ಟ್ರೇಲಿಯಾದ ಎಲ್ಲ ರಾಜ್ಯಗಳು ಹಾಗೂ ಪ್ರಾಂತ್ಯಗಳು ಸರ್ವಾನುಮತದಿಂದ ಶುಕ್ರವಾರ ಬೆಂಬಲ ಸೂಚಿಸಿವೆ.

ದೇಶದ ಎಂಟು ಪ್ರಾಂತ್ಯಗಳ ನಾಯಕರೊಂದಿಗೆ ಪ್ರಧಾನಿ ಆ್ಯಂಟೊನಿ ಅಲ್ಬನೀಸ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸಿದರು. 'ಜಗತ್ತಿನಲ್ಲಿಯೇ ಮೊದಲ ಬಾರಿಗೆ ಇಂಥದ್ದೊಂದು ಕ್ರಮವನ್ನು ಆಸ್ಟ್ರೇಲಿಯಾ ಸರ್ಕಾರ ಕೈಗೊಳ್ಳಲು ಸಿದ್ಧವಾಗಿದೆ' ಎಂದು ಪ್ರಧಾನಿ ಆ್ಯಂಟೊನಿ ಹೇಳಿದ್ದಾರೆ.

ವಯೋಮಿತಿಯನ್ನು 14 ಅಥವಾ 16ಕ್ಕೆ ನಿಗದಿಪಡಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಾಗ ತಸ್ಮಾನಿಯಾ ರಾಜ್ಯವು ವಯೋಮಿತಿಯನ್ನು 14ಕ್ಕೆ ನಿಗದಿಪಡಿಸಿ ಎಂಬ ಸಲಹೆ ನೀಡಿತ್ತು. ಆದರೆ, ದೇಶದಲ್ಲಿ ಒಂದೇ ರೀತಿಯ ಕಾನೂನು ಜಾರಿಯಾಗಬೇಕು ಎನ್ನುವ ಉದ್ದೇಶದಿಂದ ಈ ಸಲಹೆಯನ್ನು ನಿರಾಕರಿಸಲಾಗಿತ್ತು.

ಆಸ್ಟ್ರೇಲಿಯಾದ ಮುಖ್ಯ ವಿರೋಧ ಪಕ್ಷವು ಈಗಾಗಲೇ ಈ ಕ್ರಮವನ್ನು ಬೆಂಬಲಿಸಿದೆ. ಆದರೆ, ಗ್ರೀನ್ಸ್ ಪಕ್ಷ ಮಾತ್ರ ಇದನ್ನು ವಿರೋಧಿಸಿದೆ. 'ಇಂಥ ಕ್ರಮಗಳಿಂದ ಸ್ವೀಡನ್‌ನ ಪರಿಸರ ಕಾರ್ಯಕರ್ತೆ ಗ್ರೇಟಾ ಥನ್‌ಬರ್ಗ್ ಅಂತಹವರು ನಮ್ಮ ನೆಲದಲ್ಲಿ ಹುಟ್ಟುವುದಕ್ಕೇ ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಮಾನಸಿಕ ಆರೋಗ್ಯ ವೈದ್ಯರು, ತಜ್ಞರು ಕೂಡ ಈ ಕ್ರಮವನ್ನು ವಿರೋಧಿಸಿದ್ದಾರೆ. ಆದರೆ, ಪ್ರಮುಖ ವಿರೋಧ ಪಕ್ಷವು ಈ ಕ್ರಮವನ್ನು ಬೆಂಬಲಿಸಿರುವುದರಿಂದ ಸಂಸತ್ತಿನಲ್ಲಿ ಈ ಕುರಿತ ಮಸೂದೆಯು ಸುಲಭವಾಗಿ ಪಾಸಾಗಲಿದೆ ಎನ್ನಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಸಲ್ಮಾನ್ ಖಾನ್‌ಗೆ ಮತ್ತೆ ಜೀವ ಬೆದರಿಕೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಮತ್ತೊಂದು ಜೀವ ಬೆದರಿಕೆ ಬಂದಿದೆ. ತಾನು ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಗುಂಪಿನ ಪರವಾಗಿ ಬೆದರಿಕೆ ಹಾಕುತ್ತಿರುವುದಾಗಿ ಹೇಳಿಕೊಂಡಿರುವ ಅನಾಮಿಕ ವ್ಯಕ್ತಿಯು ₹5 ಕೋಟಿ ನೀಡದಿದ್ದರೆ ಸಲ್ಮಾನ್ ಅವರನ್ನು ಕೊಲೆ ಮಾಡುವುದಾಗಿ ಹೇಳಿದ್ದಾರೆ.


ಸಲ್ಮಾನ್ ಖಾನ್

ಮುಂಬೈ ಸಂಚಾರ ಪೊಲೀಸ್ ವಾಟ್ಸ್‌ಆಪ್ ಸಹಾಯವಾಣಿಗೆ ಗುರುವಾರ ರಾತ್ರಿ ಬೆದರಿಕೆ ಸಂದೇಶ ಬಂದಿದೆ. ಇದೇ ವೇಳೆ 'ಮೇ ಸಿಕಂದರ್ ಹೂ' ಹಾಡಿನ ಸಾಹಿತ್ಯ ಬರೆದವರಿಗೂ ಬೆದರಿಕೆ ಹಾಕಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ವರ್ಲಿ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಮುಂಬೈ ಸಂಚಾರ ಪೊಲೀಸರಿಗೆ ಕಳೆದ ಕೆಲವು ವಾರಗಳಿಂದ ಸಲ್ಮಾನ್ ಖಾನ್ ಅವರನ್ನು ಹತ್ಯೆ ಮಾಡುವುದಾಗಿ ಹಲವು ಸಂದೇಶಗಳು ಬರುತ್ತಿವೆ.

ಛತ್ತೀಸಗಢ: ಇಬ್ಬರು ನಕ್ಸಲರ ಹತ್ಯೆ

ಬಿಜಾಪುರ್ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.



ಜಿಲ್ಲೆಯ ಉಸೂರ್–ಬಸಗುಡ ಗ್ರಾಮಗಳ ಬಳಿ ಅರಣ್ಯ ಪ್ರದೇಶದಲ್ಲಿ ಮುಂಜಾನೆ 11 ಗಂಟೆ ಸುಮಾರಿಗೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ಇಬ್ಬರು ನಕ್ಸಲರು ಹತರಾಗಿದ್ದಾರೆ. ಸ್ಥಳದಲ್ಲಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಇನ್ನೂ ಶೋಧ ಕಾರ್ಯಾಚರಣೆ ಮುಂದುವರೆದಿದೆ ಎಂದು ಮಾಹಿತಿ ನೀಡಿದರು.

ಅ. 4ರಂದು ನಾರಾಯಣಪುರ– ದಾಂತೇವಾಡ ಜಿಲ್ಲೆಗಳಲ್ಲಿ ನಡೆಸಿದ ಎನ್‌ಕೌಂಟರ್‌ನಲ್ಲಿ 31 ನಕ್ಸಲರನ್ನು ಹತ್ಯೆ ಮಾಡಲಾಗಿತ್ತು.


ಪ್ರಶಸ್ತಿಯೊಂದಿಗೆ ಸಹನಾ ಎಚ್. ಮೂರ್ತಿ ಮತ್ತು ಅಥರ್ವ ನವರಂಗ

ಟಿಟಿ: ಅಥರ್ವ, ಸಹನಾಗೆ ಪ್ರಶಸ್ತಿ

ಬೆಂಗಳೂರು: ಅಥರ್ವ ನವರಂಗ ಮತ್ತು ಸಹನಾ ಎಚ್. ಮೂರ್ತಿ ಶುಕ್ರವಾರ ಡಾ.ಎಂ.ಎಸ್.ರಾಮಯ್ಯ ಸ್ಮಾರಕ ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಪ್ರಶಸ್ತಿಯನ್ನು ಗೆದ್ದರು.

ದೊಡ್ಡಬಳ್ಳಾಪುರದ ಹಿಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅಥರ್ವ 4–2ರಿಂದ (8-11, 11-9, 7-11, 11-3, 11-9, 11-7) ಅರ್ಣವ್ ಎನ್. ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಅಥರ್ವ 3–0ಯಿಂದ ವಿಭಾಸ್ ವಿ.ಜಿ. ವಿರುದ್ಧ; ಅರ್ಣವ್ 3–2ರಿಂದ ಬಿ.ಆರ್.ಗೌರವ್ ವಿರುದ್ಧ ಜಯ ಸಾಧಿಸಿದ್ದರು. ಬಾಲಕಿಯರ ಫೈನಲ್‌ನಲ್ಲಿ ಸಹನಾ 4–2ರಿಂದ (11-9, 11-7, 11-4, 11-13, 9-11 , 11- 4) ಹಿಮಾಂಶಿ ಚೌಧರಿ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಸಹನಾ 3–0ಯಿಂದ ತೃಪ್ತಿ ಪುರೋಹಿತ್ ಅವರನ್ನು; ಹಿಮಾಂಶಿ 3–1ರಿಂದ ನೀತಿ ಅಗರವಾಲ್ ಅವರನ್ನು ಮಣಿಸಿದರು.

ವಲಸಿಗರಿಗೆ ಪೌರತ್ವ; ಫೆಡರಲ್ ನ್ಯಾಯಾಧೀಶರ ತೀರ್ಪು

ಬೈಡನ್ ಆಡಳಿತದ ನೀತಿ ರದ್ದು

ವಾಷಿಂಗ್ಟನ್ (ಎಪಿ): ಅಮೆರಿಕದ ಪ್ರಜೆಗಳನ್ನು ಮದುವೆಯಾಗಿರುವ ವಲಸಿಗರಿಗೆ ಪೌರತ್ವ ನೀಡುವ ಪ್ರಕ್ರಿಯೆಯನ್ನು ಸರಾಗಗೊಳಿಸುವ ಉದ್ದೇಶದೊಂದಿಗೆ ಜೋ ಬೈಡನ್ ಆಡಳಿತವು ಜಾರಿಗೆ ತಂದಿದ್ದ ನೀತಿಯೊಂದನ್ನು ಫೆಡರಲ್ ನ್ಯಾಯಾಧೀಶರು ಗುರುವಾರ ರದ್ದುಗೊಳಿಸಿದ್ದಾರೆ.

ಅಮೆರಿಕದ ಪ್ರಜೆಗಳನ್ನು ಮದುವೆಯಾಗಿರುವ ವಲಸಿಗರು ತಮ್ಮ ಬಳಿ ಸೂಕ್ತ ದಾಖಲೆಗಳು ಇಲ್ಲದಿದ್ದರೂ, ದೇಶವನ್ನು ತೊರೆಯದೆಯೇ 'ಗ್ರೀನ್ ಕಾರ್ಡ್'ಗೆ ಅರ್ಜಿ ಸಲ್ಲಿಸಲು ಈ ನೀತಿ ಅವಕಾಶ ಮಾಡಿಕೊಟ್ಟಿತ್ತು. ವಲಸಿಗ ಕುಟುಂಬಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಅಮೆರಿಕದ ಅಧ್ಯಕ್ಷರು ಜಾರಿಗೊಳಿಸಿರುವ ಅತಿದೊಡ್ಡ ಕಾರ್ಯಕ್ರಮ ಇದು ಎಂದು ಈ ನೀತಿಯನ್ನು ಬಣ್ಣಿಸಲಾಗಿತ್ತು.

ಗಡೀಪಾರು ಆತಂಕ ಎದುರಿಸುತ್ತಿದ್ದ ಸುಮಾರು 5 ಲಕ್ಷ ವಲಸಿಗರು ಇದರಿಂದ ತಾತ್ಕಾಲಿಕವಾಗಿ ನಿರಾಳರಾಗಿದ್ದರು. ಆದರೆ, ಈ ನೀತಿಗೆ ಆಕ್ಷೇಪ ವ್ಯಕ್ತಪಡಿಸಿ ಅರ್ಜಿಗಳು ಸಲ್ಲಿಕೆಯಾದ್ದರಿಂದ ಫೆಡರಲ್ ನ್ಯಾಯಾಧೀಶ ಕೆ.ಕ್ಯಾಂಪ್‌ಬೆಲ್ ಬಾರ್ಕರ್ ಅವರು ಆಗಸ್ಟ್ ತಿಂಗಳಲ್ಲಿ ತಡೆ ನೀಡಿದ್ದರು.

ಗುರುವಾರ ಅಂತಿಮ ತೀರ್ಪು ನೀಡಿರುವ ಬಾರ್ಕರ್, ಈ ನೀತಿಯನ್ನು ರದ್ದುಗೊಳಿಸುವುದಾಗಿ ಪ್ರಕಟಿಸಿದರು. 'ಈ ಕಾರ್ಯಕ್ರಮ ಅನುಷ್ಠಾನಗೊಳಿಸುವ ಮೂಲಕ ಬೈಡನ್ ಆಡಳಿತವು ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿದೆ' ಎಂದು ತೀರ್ಪಿನಲ್ಲಿ ತಿಳಿಸಿದರು.

'ಕುಟುಂಬಗಳನ್ನು ಒಟ್ಟಿಗೆ ಇಟ್ಟುಕೊಳ್ಳುವುದು' ಎಂಬ ಘೋಷವಾಕ್ಯದೊಂದಿಗೆ ಬೈಡನ್ ಆಡಳಿತ ಜಾರಿಗೊಳಿಸಿರುವ ಈ ಅಲ್ಪಾವಧಿ ನೀತಿಯು, ಡೊನಾಲ್ಡ್ ಟ್ರಂಪ್ ಅವರು ಅಧಿಕಾರ ವಹಿಸಿಕೊಂಡ ಬಳಿಕ ಮುಂದುವರಿಯುವುದು ಅನುಮಾನ ಎನಿಸಿತ್ತು. ಇದೀಗ ಅದಕ್ಕೂ ಮೊದಲೇ ರದ್ದಾಗಿರುವುದರಿಂದ ಸಾವಿರಾರು ವಲಸಿಗ ಕುಟುಂಬಗಳ ಮೇಲೆ ಅನಿಶ್ಚಿತತೆಯ ಕಾರ್ಮೋಡ ಕವಿದಿದೆ.

ಬೈಡನ್ ಜಾರಿಗೆ ತಂದಿರುವ ನೀತಿಯು ದೇಶದ ಆರ್ಥಿಕ ಹೊರೆಯನ್ನು ಹೆಚ್ಚಿಸಿದೆಯಲ್ಲದೆ, ಇನ್ನಷ್ಟು ವಲಸಿಗರನ್ನು ಅಮೆರಿಕದತ್ತ ಸೆಳೆಯಬಹುದು ಎಂದು ರಿಪಬ್ಲಿಕನ್ ಪಕ್ಷದವರು ಟೀಕಿಸಿದ್ದರು.

ಶ್ವೇತಭವನ: ವೈಲ್ಸ್ ಸಿಬ್ಬಂದಿ ಮುಖ್ಯಸ್ಥೆ

ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರು ತಮ್ಮ ಪ್ರಚಾರ ತಂಡದ ವ್ಯವಸ್ಥಾಪಕಿ, ಸೂಸನ್ ವೈಲ್ಸ್ ಅವರನ್ನು ಶ್ವೇತಭವನದ ಸಿಬ್ಬಂದಿ ವಿಭಾಗದ ಮುಖ್ಯಸ್ಥೆಯಾಗಿ ಗುರುವಾರ ನೇಮಕ ಮಾಡಿದರು. ಈ ಉನ್ನತ ಹುದ್ದೆಗೇರಿದ ಮೊದಲ ಮಹಿಳೆ ಎಂಬ ಗೌರವ ಅವರಿಗೆ ಒಲಿದಿದೆ.

'ಅಮೆರಿಕವನ್ನು ಇನ್ನಷ್ಟು ಪ್ರಬಲ ರಾಷ್ಟ್ರವಾಗಿಸಲು ಸೂಸಿ (ಸೂಸನ್) ಅವರು ದಣಿವರಿಯದೆ ಕೆಲಸ ಮಾಡುವುದನ್ನು ಮುಂದುವರಿಸಲಿದ್ದಾರೆ. ಅಮೆರಿಕದ ಇತಿಹಾಸದಲ್ಲಿ ಶ್ವೇತಭವನದ ಸಿಬ್ಬಂದಿ ಮುಖ್ಯಸ್ಥರಾದ ಮೊದಲ ಮಹಿಳೆ ಎಂಬ ಗೌರವ ಪಡೆಯಲು ಸೂಸಿ ಅರ್ಹರು. ಅವರು ನಮ್ಮ ದೇಶವನ್ನು ಹೆಮ್ಮೆ ಪಡುವಂತೆ ಮಾಡುವುದರಲ್ಲಿ ಯಾವುದೇ ಅನುಮಾನ ಇಲ್ಲ' ಎಂದು ಟ್ರಂಪ್ ಹೇಳಿದ್ದಾರೆ.

ವಲಸಿಗರಲ್ಲಿ ಆತಂಕ

ಮೆಕ್ಸಿಕೊ ನಗರ (ಎಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಗೆಲುವು, ಜಾಗತಿಕ ಮಟ್ಟದಲ್ಲಿ ಲಕ್ಷಾಂತರ ವಲಸಿಗರು ಅಥವಾ ಸಂಭಾವ್ಯ ವಲಸಿಗರಲ್ಲಿ ಆತಂಕವನ್ನುಂಟು ಮಾಡಿದೆ.

ವಲಸೆಯನ್ನು ನಿಯಂತ್ರಿಸುವುದಾಗಿ ಟ್ರಂಪ್ ಈ ಹಿಂದೆ ಪ್ರತಿಜ್ಞೆ ಮಾಡಿದ್ದರು. ಇದೀಗ ಅವರು ಅಧಿಕಾರಕ್ಕೆ ಏರಿರುವ ಕಾರಣ ವಲಸಿಗರು ತಮ್ಮ ಯೋಜನೆಗಳನ್ನು ಬದಲಾಯಿಸುತ್ತಿದ್ದು, ವಲಸಿಗರ ಕಳ್ಳಸಾಗಾಣಿಕೆ ಹೆಚ್ಚಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಹಲವು ಪ್ರಕರಣಗಳಲ್ಲಿ ಸಂಘಟಿತ ಗುಂಪುಗಳು ವಲಸಿಗರ ಕಳ್ಳಸಾಗಾಣಿಕೆ ಮೂಲಕ ಲಾಭ ಮಾಡಿಕೊಳ್ಳುತ್ತವೆ. ಟ್ರಂಪ್ ಆಯ್ಕೆ ಬೇರೆ ದೇಶಗಳಿಂದ ಅಮೆರಿಕಕ್ಕೆ ಬಂದಿರುವವರ ಮೇಲೆ ಪ್ರಭಾವ ಬೀರಿದ್ದು, ಹಲವು ಜನ ತಮ್ಮ ಮನೆಗಳನ್ನು ಮಾರಿ ಪ್ರವಾಸಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಟ್ರಂಪ್ ಅವರ ಈ ಹಿಂದಿನ ಆಡಳಿತ ಅವಧಿಯಲ್ಲಿ ಮೆಕ್ಸಿಕೊ ಗಡಿ ಭಾಗದ ನಗರಗಳಲ್ಲಿ ವಲಸಿಗರ ಸಂಖ್ಯೆ ಅಧಿಕವಾಗಿತ್ತು. ಕೆಲವು ಗುಂಪುಗಳು ಅವರನ್ನು ಸುಲಿಗೆ ಮಾಡುವುದು, ಅಪಹರಣ ಮಾಡುವುದು, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುತ್ತಿದ್ದವು. ಪ್ರತಿನಿತ್ಯ ನೂರಾರು ಜನರು ವಲಸೆ ಬರುತ್ತಿದ್ದರು ಮತ್ತು ಅಮೆರಿಕದ ಪೌರತ್ವ ಪಡೆಯಲು ಹಲವಾರು ವರ್ಷಗಳಿಂದ ಕಾಯುತ್ತಿದ್ದರು.

2023ರಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಸಿಬಿಪಿ ಎಂಬ ಯೋಜನೆ ಮೂಲಕ ವಲಸಿಗರಿಗೆ ಕೆಲವು ಅನುಕೂಲಗಳನ್ನು ಮಾಡಿಕೊಟ್ಟಿದ್ದರು. ಇದರಿಂದಾಗಿ ಗಡಿಭಾಗದಲ್ಲಿದ್ದವರು ಕಾನೂನಿನ ಅಡಿಯಲ್ಲಿ ಅಮೆರಿಕದೊಳಗೆ ಪ್ರವೇಶಿಸಲು ಪ್ರಯತ್ನಿಸಿದರು.

ಸಿಬಿಪಿಯನ್ನು ಕೊನೆಗೊಳಿಸುವ ಯೋಚನೆಯನ್ನು ಟ್ರಂಪ್ ಹೊಂದಿದ್ದು, ನಿರಾಶ್ರಿತರ ಪುನರ್‌ವಸತಿಗೆ ನಿರ್ಬಂಧ ಹೇರುವ ಮತ್ತು ಸಾಮೂಹಿಕ ಗಡಿಪಾರು ಮಾಡುವ ಸಾಧ್ಯತೆಗಳಿವೆ.

ಸಾಮೂಹಿಕ ಗಡಿಪಾರಿನ ಬಗ್ಗೆ ಟ್ರಂಪ್ ಈ ಹಿಂದೆಯೂ ಎಚ್ಚರಿಕೆ ನೀಡಿದ್ದರು ಆದರೆ ಅದನ್ನು ಕಾರ್ಯಗತಗೊಳಿಸಿರಲಿಲ್ಲ. ಆದರೆ, ಈ ಬಾರಿ ಈ ಬಗ್ಗೆ ಗಮನಹರಿಸುವ ಸಾಧ್ಯತೆ ಹೆಚ್ಚಿದೆ.



ಪ್ಯಾಲೆಸ್ಟೀನ್ ಧ್ವಜ ಪ್ರದರ್ಶನ

ನೆದರ್ಲೆಂಡ್ಸ್‌ನ ಆಮ್‌ಸ್ಟರ್‌ಡಾಂನಲ್ಲಿ ಗುರುವಾರ ಅಜಾಕ್ಸ್ ಮತ್ತು ಇಸ್ರೇಲ್‌ನ ಮಕಾಬಿ ಟೆಲ್ ಅವೀವ್ ತಂಡಗಳ ನಡುವಣ ಯುರೋಪಾ ಲೀಗ್ ಫುಟ್‌ಬಾಲ್ ಪಂದ್ಯಕ್ಕೂ ಮುನ್ನ ಪ್ಯಾಲೆಸ್ಟೀನ್ ಪರ ಪ್ರತಿಭಟನಕಾರರು ಆ್ಯಂಟನ್ ಡಿ ಕಾಂಪ್ಲೀನ್ ಸ್ಕ್ವೇರ್‌ನಲ್ಲಿ ಪ್ಯಾಲೆಸ್ಟೀನ್ ಧ್ವಜ ಪ್ರದರ್ಶಿಸಿದರು. ಇಸ್ರೇಲ್ ಅಭಿಮಾನಿಗಳು ಮತ್ತು ಪ್ಯಾಲೆಸ್ಟೀನ್ ಪರ ಪ್ರತಿಭಟನಕಾರರ ನಡುವಿನ ಘರ್ಷಣೆಯಲ್ಲಿ ಐವರು ಗಾಯಗೊಂಡಿದ್ದು, ಘಟನೆಗೆ ಸಂಬಂಧಿಸಿದಂತೆ 62 ಮಂದಿಯನ್ನು ಬಂಧಿಸಲಾಗಿದೆ ಎಂದು ಆಮ್‌ಸ್ಟರ್‌ಡಾಂ ಪೊಲೀಸರು ತಿಳಿಸಿದ್ದಾರೆ - ಎಎಫ್‌ಪಿ ಚಿತ್ರ

'ಕಷ್ಟದಲ್ಲಿದ್ದವರ ಸೇವೆಗಿಂತ ಮುಖ್ಯವಾದದ್ದು ಯಾವುದೂ ಇಲ್ಲ'

ನವದೆಹಲಿ (ಪಿಟಿಐ): ನಾವು ಎಂದೂ ನೋಡದ, ಎಂದೂ ಮಾತನಾಡದ ಜನರ ಮತ್ತು ಅನ್ಯಾಯಕ್ಕೆ ಒಳಗಾದವರ ಸೇವೆಗಿಂತ ಮುಖ್ಯವಾದದ್ದು ಯಾವುದೂ ಇರಲಿಲ್ಲ ಎಂದು ಸುಪ್ರೀಂ ಕೋರ್ಟ್‌ನ ನಿರ್ಗಮಿತ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ 50ನೇ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಆಗಿದ್ದ ಅವರಿಗೆ ಶುಕ್ರವಾರ ಕೆಲಸದ ಕೊನೆಯ ದಿನವಾಗಿತ್ತು. ತಮಗೆ ಬೀಳ್ಕೊಡುಗೆ ನೀಡಲು ಸೇರಿದ್ದ ನಿಯೋಜಿತ ಸಿಜೆಐ ಸಂಜೀವ್ ಖನ್ನಾ ಅವರನ್ನೊಳಗೊಂಡ ನಾಲ್ವರು ನ್ಯಾಯಮೂರ್ತಿಗಳ ವಿಧ್ಯುಕ್ತ ಪೀಠದ ನೇತೃತ್ವ ವಹಿಸಿದ್ದ ನ್ಯಾ.ಚಂದ್ರಚೂಡ್ ಅವರು, ತಮ್ಮ ಕೆಲಸದ ಬಗ್ಗೆ ಮತ್ತು ದೇಶಕ್ಕೆ ಸೇವೆ ಸಲ್ಲಿಸಲು ಸಿಕ್ಕ ಅವಕಾಶದ ಬಗ್ಗೆ ಸಂಪೂರ್ಣ ತೃಪ್ತರಾಗಿರುವುದಾಗಿ ನುಡಿದರು.

'ನನ್ನನ್ನು ಯಾವುದು ಮುನ್ನಡೆಸುತ್ತಿದೆ ಎಂದು ನೀವು ಕೇಳಿದ್ದೀರಿ. ನನ್ನನ್ನು ಮುನ್ನಡೆಸಿದ್ದು ಈ ನ್ಯಾಯಾಲಯ. ಇಲ್ಲಿ ನಾನು ಏನೂ ಕಲಿತಿಲ್ಲ ಎನ್ನುವಂಥ ದಿನವೇ ಇಲ್ಲ, ಸಮಾಜಕ್ಕೆ ಸೇವೆ ಸಲ್ಲಿಸಲಾಗಲ್ಲ ಎನ್ನುವಂಥ ದಿನವೇ ಇರಲಿಲ್ಲ' ಎಂದರು.

ತಮ್ಮನ್ನು ವಿಮರ್ಶಿಸಿದವರು, ಟ್ರೋಲ್ ಮಾಡಿದವರ ಬಗ್ಗೆ ವ್ಯಂಗ್ಯ ಮಾಡಿದ ಅವರು, ತಮ್ಮ ನಿವೃತ್ತಿಯ ನಂತರ ಅವರೆಲ್ಲ ನಿರುದ್ಯೋಗಿಗಳಾಗಲಿದ್ದಾರೆ ಎಂದರು.

ತಮ್ಮ ಹಿರಿ, ಕಿರಿಯ ಸಹೋದ್ಯೋಗಿಗಳನ್ನು ಅವರು ಸ್ಮರಿಸಿದರು. ನಿಯೋಜಿತ ನ್ಯಾಯಮೂರ್ತಿ ಖನ್ನಾ ಅವರನ್ನು ಶ್ಲಾಘಿಸಿದದರು.

ನ್ಯಾ. ಚಂದ್ರಚೂಡ್ ಅವರಿಗೆ ಶುಭ ಹಾರೈಸಿದ ನ್ಯಾ. ಖನ್ನಾ ಅವರು, 'ಅವರು ಒಂದು ರೀತಿ ನನ್ನ ಕೆಲಸವನ್ನು ಸುಲಭಗೊಳಿಸಿದ್ದಾರೆ. ಮತ್ತೊಂದು ರೀತಿ ಕಠಿಣವಾಗಿಸಿದ್ದಾರೆ' ಎಂದರು.


ನಿರ್ಗಮಿತ ಸಿಜೆಐ ಡಿ.ವೈ.ಚಂದ್ರಚೂಡ್ ಅವರಿಗೆ ಹಿರಿಯ ವಕೀಲ ಕಪಿಲ್ ಸಿಬಲ್ ಸ್ಮರಣಿಕೆ ನೀಡಿದರು – ಪಿಟಿಐ ಚಿತ್ರ

ನ್ಯಾ.ಚಂದ್ರಚೂಡ್ ಅವರು ಅಸಾಧಾರಣ ಅಪ್ಪನ ಅಸಾಧಾರಣ ಮಗ. ನನ್ನ 52 ವರ್ಷಗಳ ವೃತ್ತಿಜೀವನದಲ್ಲಿ ಅವರಂತೆ ಅಪರಿಮಿತ ಸಹನೆ ಇರುವಂಥ, ಸದಾ ಹಸನ್ಮುಖಿಯಾದ ನ್ಯಾಯಮೂರ್ತಿಯನ್ನು ಕಂಡಿಲ್ಲ
ಕಪಿಲ್ ಸಿಬಲ್, ಸುಪ್ರೀಂ ಕೋರ್ಟ್ ವಕೀಲರ ಸಂಘದ ಅಧ್ಯಕ್ಷ

ಅತ್ಯುತ್ತಮ ವಕೀಲರಾದ ನೀವು ವಕೀಲರಾಗಿಯೇ ಮುಂದುವರಿಯಿರಿ ಎಂದು ನಾನು ಸಲಹೆ ನೀಡಿದ್ದೆ. ನೀವು ನ್ಯಾಯಮೂರ್ತಿ ಆದಿರಿ. ನನ್ನ ಮಾತು ಕೇಳಿದ್ದರೆ ಒಬ್ಬ ಶ್ರೇಷ್ಠ ನ್ಯಾಯಮೂರ್ತಿಯನ್ನು ನಾವು ಕಳೆದುಕೊಳ್ಳುತ್ತಿದ್ದೆವು
ಕೆ.ಕೆ.ವೇಣುಗೋಪಾಲ್, ಮಾಜಿ ಅಟಾರ್ನಿ ಜನರಲ್

'ಸ್ತ್ರೀಯರ ಬಟ್ಟೆ ಸ್ತ್ರೀಯರೇ ಹೊಲಿಯಬೇಕು'

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಮಹಿಳೆಯರ ಕೂದಲನ್ನು ಪುರುಷರು ಕತ್ತರಿಸಬಾರದು ಹಾಗೂ ಅವರು ಮಹಿಳೆಯರ ಬಟ್ಟೆಗಳನ್ನೂ ಹೊಲಿಯಬಾರದು ಎಂಬ ಪ್ರಸ್ತಾವನೆಯೊಂದನ್ನು ಉತ್ತರ ಪ್ರದೇಶದ ಮಹಿಳಾ ಆಯೋಗವು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಇಂಥ ಕ್ರಮಗಳಿಂದ ಮಹಿಳೆಯರನ್ನು ಲೈಂಗಿಕ ಕಿರುಕುಳದಿಂದ ಪಾರು ಮಾಡಬಹುದಾಗಿದೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

'ಆಯೋಗದ ಮುಖ್ಯಸ್ಥೆ ಬಬಿತಾ ಚೌಹಾಣ್ ಅವರು ಅ.28ರಂದು ನಡೆದ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಮುಂದಿರಿಸಿದರು. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲ ಸದಸ್ಯರು ಇದನ್ನು ಬೆಂಬಲಿಸಿದರು' ಎಂದು ಆಯೋಗದ ಸದಸ್ಯೆ ಹಿಮಾನಿ ಅಗರ್ವಾಲ್ ಶುಕ್ರವಾರ ತಿಳಿಸಿದರು.

ಇಂಥ ವೃತ್ತಿಗಳಲ್ಲಿರುವ ಗಂಡಸರಿಂದಲೇ ಕಿರುಕುಳ ನಡೆಯುತ್ತಿವೆ. ಕೆಲವು ಗಂಡಸರ ಉದ್ದೇಶ ಸರಿ ಇರುವುದಿಲ್ಲ. ಹಾಗಂತ ಎಲ್ಲರಿಗೂ ಕೆಟ್ಟ ಉದ್ದೇಶಗಳಿರುವುದಿಲ್ಲ
ಹಿಮಾನಿ ಅಗರ್ವಾಲ್, ಸದಸ್ಯೆ, ಉತ್ತರ ಪ್ರದೇಶದ ಮಹಿಳಾ ಆಯೋಗ

ಮಹಿಳೆಯರ, ಬಾಲಕಿಯರ ಮೇಲಿನ ಅತ್ಯಾಚಾರ, ಲೈಂಗಿಕ ಕಿರುಕುಳದಂಥ ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಲ್ಲಿ ಏರಿಕೆ ಕಂಡಿವೆ. ಶಹಜಾನ್‌ಪುರ ಜಿಲ್ಲೆಯಲ್ಲಿ 14 ವರ್ಷದ ಬಾಲಕಿಯ ಮೇಲೆ, ಬಾಲಕಿ ಓದುತ್ತಿದ್ದ ಶಾಲೆಯ ವಾಹನ ಚಾಲಕನೇ ಅತ್ಯಾಚಾರ ಎಸಗಿರುವ ಪ್ರಕರಣ ಇತ್ತೀಚೆಗೆ ನಡೆದಿತ್ತು.

ಪ್ರಸ್ತಾವನೆಯಲ್ಲೇನಿದೆ?

- ಜಿಮ್ ಅಥವಾ ಯೋಗ ಕೇಂದ್ರಗಳಲ್ಲಿ ಮಹಿಳೆಯರಿಗೆ ಪುರುಷ ತರಬೇತುದಾರ ಇರಕೂಡದು
- ಜಿಮ್, ಯೋಗ ಕೇಂದ್ರ, ಬೊಟಿಕ್, ಮಹಿಳೆಯರ ಒಳ ಉಡುಪುಗಳನ್ನು ಮಾರಾಟ ಮಾಡುವ ಅಂಗಡಿ, ಕೋಚಿಂಗ್ ಕೇಂದ್ರಗಳು ಮತ್ತು ಮಹಿಳೆಯರು ಹೆಚ್ಚಾಗಿ ತೆರಳುವ ಇತರ ಎಲ್ಲ ಸ್ಥಳಗಳಲ್ಲಿಯೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವುದು ಕಡ್ಡಾಯ
- ಶಾಲಾ ವಾಹನಗಳಲ್ಲಿ ಒಬ್ಬ ಶಿಕ್ಷಕಿ ಹಾಗೂ ಒಬ್ಬ ಮಹಿಳಾ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸುವುದು ಕಡ್ಡಾಯ. ನೃತ್ಯ ಮತ್ತು ರಂಗ ಶಾಲೆಗಳಲ್ಲಿಯೂ ಕಡ್ಡಾಯವಾಗಿ ಶಿಕ್ಷಕಿಯರನ್ನು ನೇಮಿಸಿಕೊಳ್ಳಬೇಕು. ಈ ಎಲ್ಲ ಸ್ಥಳಗಳಲ್ಲಿಯೂ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಯೂ ಕಡ್ಡಾಯ

ಜಿಮ್‌ಗೆ ಬರುತ್ತಿದ್ದ ಮಹಿಳೆಯೊಬ್ಬರನ್ನು ಅದೇ ಜಿಮ್‌ನ ತರಬೇತುದಾರ ಹತ್ಯೆ ಮಾಡಿರುವ ಘಟನೆ ಕಾನ್ಪುರದಲ್ಲಿ ಇತ್ತೀಚೆಗೆ ನಡೆದಿತ್ತು. ಬರೇಲಿ ಜಿಲ್ಲೆಯಲ್ಲಿ ಟೈಲರ್‌ರೊಬ್ಬರು ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎನ್ನುವ ಆರೋಪ ಕೇಳಿಬಂದಿತ್ತು. ಈ ಎಲ್ಲ ಪ್ರಕರಣಗಳ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ಮಹಿಳಾ ಆಯೋಗವು ಈ ಕ್ರಮ ಕೈಗೊಂಡಿದೆ.

ಗ್ರೆನೇಡ್ ದಾಳಿ ಮೂವರ ಬಂಧನ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಈಚೆಗೆ ನಡೆದ ಗ್ರೆನೇಡ್ ದಾಳಿಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಮೂವರು ಸ್ಥಳೀಯರನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದರು. ನಗರದ ಸಂಡೇ ಮಾರ್ಕೆಟ್‌ನಲ್ಲಿ ಗ್ರೆನೇಡ್ ಸ್ಫೋಟಗೊಂಡ ಕಾರಣ 12 ಮಂದಿ ಗಾಯಗೊಂಡಿದ್ದರು.

ಇಬ್ಬರು ಭಯೋತ್ಪಾದಕರ ಹತ್ಯೆ: ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರರು ಹತರಾಗಿದ್ದಾರೆ. ಗುಪ್ತಚರ ಮಾಹಿತಿ ಮೇರೆಗೆ ಗುರುವಾರ ಕಾರ್ಯಾಚರಣೆ ಆರಂಭಿಸಲಾಯಿತು.

ಅಮನ್ ಸೆಹ್ರಾವತ್ ಸೇರಿ ಹಲವು ಪೈಲ್ವಾನರು ಭಾಗಿ

ಡಿ.6ರಿಂದ ಬೆಂಗಳೂರಿನಲ್ಲಿ ರಾಷ್ಟ್ರೀಯ ಕುಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚು ವಿಜೇತ ಕುಸ್ತಿ ತಾರೆ ಅಮನ್ ಸೆಹ್ರಾವತ್ ಅವರು ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಡಿಸೆಂಬರ್ 6ರಿಂದ 8ರವರೆಗೆ ನಡೆಯುವ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಕರ್ನಾಟಕ ಕುಸ್ತಿ ಸಂಸ್ಥೆಯ ಆತಿಥ್ಯದಲ್ಲಿ ನಡೆಯುವ ಚಾಂಪಿಯನ್ ಷಿಪ್‌ನಲ್ಲಿ ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಅಂಗಸಂಸ್ಥೆ 25 ರಾಜ್ಯ ಘಟಕಗಳಿಂದ ಮತ್ತು ರೈಲ್ವೆ ಕ್ರೀಡಾ ಅಭಿವೃದ್ಧಿ ಮಂಡಳಿ (ಆರ್‌ಎಸ್‌ಪಿಬಿ) ಹಾಗೂ ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿ (ಎಸ್‌ಎಸ್‌ಪಿಬಿ)ಯಿಂದ ಸಾವಿರಕ್ಕೂ ಹೆಚ್ಚು ಕುಸ್ತಿಪಟುಗಳು ಮತ್ತು ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಅಮನ್ ಅವರೊಂದಿಗೆ ವಿಶ್ವ ಕುಸ್ತಿ ಚಾಂಪಿಯನ್ (20 ವರ್ಷದೊಳಗಿನವರ) ಅಂತಿಮ್ ಪಂಘಲ್, 2019ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ದೀಪಕ್ ಪೂನಿಯಾ, ವಿಶ್ವ ಚಾಂಪಿಯನ್ (23 ವರ್ಷದೊಳಗಿನವರ) ರಿತಿಕಾ ಹೂಡಾ, ಒಲಿಂಪಿಯನ್ ಸೋನಮ್ ಮಲಿಕ್, ರಾಧಿಕಾ, ಮನೀಶಾ ಭಾನ್ವಾಲಾ, ಬಿಪಾಶಾ, ಪ್ರಿಯಾ ಉದಿತ್, ಸುನಿಲ್ ಕುಮಾರ್ ಮತ್ತು ನರೀಂದರ್ ಚೀಮಾ ಕಣಕ್ಕೆ ಇಳಿಯುವರು.

'ಕರ್ನಾಟಕದಲ್ಲಿ ಮೊದಲ ಬಾರಿ ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಷಿಪ್ ಆಯೋಜಿಸಲು ಡಬ್ಲ್ಯುಎಫ್‌ಐ ಹೆಮ್ಮೆಪಡುತ್ತದೆ. ಭಾರತದ ಎಲ್ಲ ಅಗ್ರ ಕುಸ್ತಿಪಟುಗಳು ಈ ಕೂಟದಲ್ಲಿ ಭಾಗವಹಿಸಲಿದ್ದಾರೆ. ಕರ್ನಾಟಕ ಕುಸ್ತಿ ಸಂಸ್ಥೆಯೊಂದಿಗೆ ಕೆಲಸ ಮಾಡಲು ನಾವು ಉತ್ಸುಕರಾಗಿದ್ದೇವೆ' ಎಂದು ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ತಿಳಿಸಿದ್ದಾರೆ.


ಅಮನ್ ಸೆಹ್ರಾವತ್ –ಪ್ರಜಾವಾಣಿ ಸಂಗ್ರಹ ಚಿತ್ರ

ಅಮಾನತುಗೊಂಡಿದ್ದ ಡಬ್ಲ್ಯುಎಫ್‌ಐನಿಂದ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜನೆಯನ್ನು ಮಾಜಿ ಕುಸ್ತಿಪಟು ಸಾಕ್ಷಿ ಮಲಿಕ್ ಅವರ ಪತಿ ಸತ್ಯವರ್ತ್ ಕಡಿಯಾನ್ ಇತ್ತೀಚೆಗೆ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಆದರೆ, ನ್ಯಾಯಾಲಯವು ಚಾಂಪಿಯನ್‌ಷಿಪ್‌ಗೆ ಅವಕಾಶ ನೀಡಿ, ಫಲಿತಾಂಶವನ್ನು ರ‍್ಯಾಂಕಿಂಗ್‌ಗೆ ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಿಗೆ ಭಾರತದ ಪ್ರವೇಶಗಳನ್ನು ನಿರ್ಧರಿಸಲು ಪರಿಗಣಿಸಬಾರದು ಎಂದು ಹೇಳಿತ್ತು.

ರಾಷ್ಟ್ರೀಯ ಥ್ರೋಬಾಲ್: ಕರ್ನಾಟಕ ತಂಡದ ಆಯ್ಕೆ

ಬೆಂಗಳೂರು: ಉತ್ತರ ಪ್ರದೇಶದ ಬಿಜನೋರಿನಲ್ಲಿ ನಡೆಯುತ್ತಿರುವ 45ನೇ ಸೀನಿಯರ್ ರಾಷ್ಟ್ರೀಯ ಚಾಂಪಿಯನ್ ಷಿಪ್‌ನಲ್ಲಿ ಪಾಲ್ಗೊಂಡಿರುವ ಕರ್ನಾಟಕ ಪುರುಷರ ಮತ್ತು ಮಹಿಳಾ ತಂಡಗಳು ಇಂತಿವೆ.

ಪುರುಷರ ತಂಡ: ಭುಯಿನ್ ಎಂ. (ನಾಯಕ), ಕಣ್ಮಣಿ ಎಂ., ಥೇವರ್ ವೀರರಾಘವ್, ಚೇತನ್, ಅಭಿಷೇಕ್, ಗೋವಿಂದ ರಾಜ್, ಹೊಯ್ಸಳ ಆರ್., ಸಂತೋಷ್, ಯಶವಂತ್, ವಿನಯ್, ಕಿರಣ್ ಕುಮಾರ್, ಆಕಾಶ್.

ಮಹಿಳಾ ತಂಡ: ಚೈತನ್ಯಾ (ನಾಯಕಿ), ಮನಿಷಾ, ಶ್ರೇಯಾ ಶೆಟ್ಟಿ, ನಮ್ರತಾ, ಅರ್ಷಿತಾ, ಆ್ಯನಿ ಜಾನ್, ರಾಜಲಕ್ಷ್ಮಿ, ಲಿಖಿತಾ ರೆಡ್ಡಿ, ಕೃತಿಕಾ ಬಿ.ಡಿ., ಭೂಮಿಕಾ, ಮಧುಮಾಲಾ ಜಿ.ಎನ್., ಅನೀಖಾ ತಬಸ್ಸುಮ್.

ನೆಟ್ಟಕಲ್ಲಪ್ಪ ರಾಷ್ಟ್ರಮಟ್ಟದ ಈಜು ಕೂಟ ಇಂದಿನಿಂದ

ಈಜುಪಟುಗಳ ಪೈಪೋಟಿಗೆ ವೇದಿಕೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಕ್ಸ್, ಅಂತರರಾಷ್ಟ್ರೀಯ ಮತ್ತು ಉದಯೋನ್ಮುಖ ಪ್ರತಿಭೆಗಳ ಪೈಪೋಟಿಯ ವಿಶಿಷ್ಟ ವೇದಿಕೆಯಾಗಿರುವ ಕೆ.ಎ. ನೆಟ್ಟಕಲ್ಲಪ್ಪ ರಾಷ್ಟ್ರ ಮಟ್ಟದ ಈಜು ಕೂಟವು ಶನಿವಾರ ಮತ್ತು ಭಾನುವಾರ ನಡೆಯಲಿದೆ.

ಪದ್ಮನಾಭ ನಗರದಲ್ಲಿರುವ ಕೆ.ಎ. ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್ (ಎನ್.ಎ.ಸಿ) ಈಜುಕೊಳದಲ್ಲಿ ಕೂಟ ನಡೆಯಲಿದೆ. ಈಚೆಗೆ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಭಾಗವಹಿಸಿದ್ದ 14 ವರ್ಷ ವಯಸ್ಸಿನ ಈಜುಪಟು ಧಿನಿಧಿ ದೇಸಿಂಗು ಸೇರಿದಂತೆ ಹಲವು ಖ್ಯಾತನಾಮ ಈಜುಪಟುಗಳು ಇಲ್ಲಿ ಸ್ಪರ್ಧಿಸಲಿದ್ದಾರೆ. ಬೇರೆ ಬೇರೆ ರಾಜ್ಯಗಳ 300 ಈಜುಪಟುಗಳು ಭಾಗವಹಿಸಲಿದ್ದಾರೆ. ಸತತ ಮೂರನೇ ವರ್ಷ ಈ ಕೂಟವನ್ನು ಆಯೋಜಿಸಲಾಗುತ್ತಿದೆ.ಕಳೆದೆರಡು ವರ್ಷ ಗಮನ ಸೆಳೆದಿದ್ದ ಸ್ಕಿನ್ಸ್ ವಿಭಾಗದ ಸ್ಪರ್ಧೆಗಳು ಈ ಸಲವೂ ಆಯೋಜನೆಗೊಳ್ಳಲಿವೆ.


ಕರ್ನಾಟಕದ ಧಿನಿಧಿ ದೇಸಿಂಗು

'ಈಜುಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ನಗರದಲ್ಲಿ 2012ರಲ್ಲಿ ಎನ್‌ಎಸಿ ಆರಂಭಿಸಲಾಗಿದೆ. ಕಳೆದೆರಡು ವರ್ಷವೂ ಉತ್ತಮ ಸಂಖ್ಯೆಯಲ್ಲಿ ಈಜುಪಟುಗಳು ಭಾಗವಹಿಸಿದ್ದರು. ಈ ಬಾರಿಯೂ ಕರ್ನಾಟಕದ ನೂರಕ್ಕೂ ಹೆಚ್ಚು ಸ್ಪರ್ಧಿಗಳು ಇದ್ದಾರೆ. ಕೇರಳ, ತಮಿಳುನಾಡು, ಹರಿಯಾಣ, ಗುಜರಾತ್, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಈಜುಪಟುಗಳು ಭಾಗವಹಿಸಲಿದ್ದಾರೆ' ಎಂದು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ತಿಳಿಸಿದ್ದಾರೆ.

ಈ ಚಾಂಪಿಯನ್‌ಷಿಪ್ ಒಟ್ಟು ₹ 10 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಈಜುಪಟುಗಳಾದ ಅಕ್ಷಜಾ ಠಾಕೂರಿಯಾ, ಹಷಿಕಾ ರಾಮಚಂದ್ರ, ಹರ್ಷಿತಾ ಜಯರಾಮ್, ಅನುಮತಿ ಚೌಗುಲೆ, ಎಸ್. ದರ್ಶನ್, ಎಸ್. ದಕ್ಷಣ್, ಎಸ್. ಲಕ್ಷ್ಯ, ಬಿ ಜತೀನ್, ಎ.ಕೆ. ಲಿನೇಶಾ, ಎಸ್. ಸುನೀಶ್, ಎಸ್. ಉನ್ನಿಕೃಷ್ಣನ್, ಸಮರ್ಥ್ ಗೌಡ, ವಿಹಿತಾ ನಯನಾ, ಆಕಾಶ್ ಮಾನ್ ಅವರು ಭಾಗವಹಿಸುವರು.

ಸ್ಕಿನ್ಸ್, 100 ಮೀಟರ್ಸ್, 200 ಮೀಟರ್ಸ್ ಮತ್ತು 400 ಮೀಟರ್ಸ್ ವಿಭಾಗಗಳ ಲಾಂಗ್ ಕೋರ್ಸ್ ಸ್ಪರ್ಧೆಗಳು ನಡೆಯಲಿವೆ.

'ಶನಿವಾರ ಸಂಜೆ 5 ಗಂಟೆಗೆ ಒಲಿಂಪಿಯನ್ ಈಜುಪಟು ನಿಶಾ ಮಿಲೆಟ್ ಅವರು ಕೂಟವನ್ನು ಉದ್ಘಾಟಿಸುವರು. ಎರಡೂ ದಿನವೂ ಬೆಳಿಗ್ಗೆ 10 ರಿಂದ ರಾತ್ರಿ 7ರವರೆಗೆ ಈಜು ಸ್ಪರ್ಧೆಗಳು ನಡೆಯಲಿವೆ' ಎಂದು ವರುಣ್ ತಿಳಿಸಿದ್ದಾರೆ.

ಸಂಜು ಶತಕ: ಭಾರತಕ್ಕೆ ಜಯ

ವರುಣ್, ಬಿಷ್ಣೋಯಿಗೆ ತಲಾ 3 ವಿಕೆಟ್ • ಆತಿಥೇಯ ದಕ್ಷಿಣ ಆಫ್ರಿಕಾಕ್ಕೆ ನಿರಾಸೆ

ಡರ್ಬನ್ (ಪಿಟಿಐ): ಸಂಜು ಸ್ಯಾಮ್ಸನ್ ಅವರ ಭರ್ಜರಿ ಶತಕದ ಬಳಿಕ ಸ್ಪಿನ್ನರ್‌ಗಳಾದ ವರುಣ್ ಚಕ್ರವರ್ತಿ ಮತ್ತು ರವಿ ಬಿಷ್ಣೋಯಿ ಕೈಚಳಕದ ನೆರವಿನಿಂದ ಭಾರತ ತಂಡವು ಶುಕ್ರವಾರ ದಕ್ಷಿಣ ಆಫ್ರಿಕಾ ಎದುರಿನ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ 61 ರನ್‌ಗಳಿಂದ ಜಯ ಸಾಧಿಸಿತು.

ಕಿಂಗ್ಸ್‌ಮೀಡ್ ಕ್ರೀಡಾಂಗಣದಲ್ಲಿ ಕೇರಳದ ಸಂಜು ಅಬ್ಬರದ ಬ್ಯಾಟಿಂಗ್ (107; 50ಎಸೆತ) ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 202 ರನ್‌ಗಳ ದೊಡ್ಡ ಮೊತ್ತ ಗಳಿಸಿತು.

ಈ ಗುರಿಯನ್ನು ಬೆನ್ನತ್ತಿದ ಆತಿಥೇಯ ತಂಡಕ್ಕೆ ವೇಗದ ಬೌಲರ್‌ಗಳಾದ ಅರ್ಷದೀಪ್ ಸಿಂಗ್ ಮತ್ತು ಆವೇಶ್ ಖಾನ್ ಆರಂಭದಲ್ಲೇ ಪೆಟ್ಟು ನೀಡಿದರು. ಅವರು ಕ್ರಮವಾಗಿ ನಾಯಕ ಏಡನ್ ಮರ್ಕರಂ (6) ಮತ್ತು ಟ್ರಿಸ್ಟನ್ ಸ್ಟಬ್ಸ್ (11) ಅವರ ವಿಕೆಟ್ ಪಡೆದರು. ಹೀಗಾಗಿ 30 ರನ್ ಗಳಿಸುವಷ್ಟರಲ್ಲಿ ದಕ್ಷಿಣ ಆಫ್ರಿಕಾ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಈ ಮಧ್ಯೆ ರಯಾನ್ ರಿಕೆಲ್ಟನ್ (21;11ಎ), ಹೆನ್ರಿಚ್ ಕ್ಲಾಸೆನ್ (25;22ಎ) ಮತ್ತು ಡೇವಿಡ್ ಮಿಲ್ಲರ್ (18;22ಎ) ತಂಡಕ್ಕೆ ಕೊಂಚ ಚೇತರಿಕೆ ನೀಡಿದರು. ಈ ಮೂವರೂ ವರುಣ್ ಅವರ ಸ್ಪಿನ್ ಬಲೆಗೆ ಬಿದ್ದರು. ಕೊನೆಯ ಹಂತದಲ್ಲಿ ಬಿಷ್ಣೋಯಿ ಕೈಚಳಕ ತೋರಿ, ಪ್ಯಾಟ್ರಿಕ್ ಕ್ರುಗರ್ (1), ಮಾರ್ಕೊ ಯಾನ್ಸೆನ್ (12) ಮತ್ತು ಆ್ಯಂಡಿಲೆ ಸಿಮೆಲೇನ್ (6) ಅವರ ವಿಕೆಟ್ ಪಡೆದರು. ಬೌಲಿಂಗ್‌ನಲ್ಲಿ ಮಿಂಚಿದ್ದ ಗೆರಾಲ್ಡ್ ಕೋಜಿ (23;11ಎ) ಬ್ಯಾಟಿಂಗ್‌ನಲ್ಲೂ ಗಮನ ಸೆಳೆದರು. ತಂಡವು 17.5 ಓವರ್‌ಗಳಲ್ಲಿ 141 ರನ್ ಗಳಿಸಿ ಹೋರಾಟವನ್ನು ಮುಗಿಸಿತು.



ಶತಕ ಗಳಿಸಿದ ಸಂಭ್ರಮದಲ್ಲಿ ಸಂಜು ಸ್ಯಾಮ್ಸನ್ –ಎಎಫ್‌ಪಿ ಚಿತ್ರ

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತ ತಂಡದ ಆರಂಭಿಕ ಆಟಗಾರ ಸಂಜು ಅಬ್ಬರಿಸಿದರು. ಅವರು ಒಟ್ಟು 10 ಸಿಕ್ಸರ್ ಸಿಡಿಸಿ ದಾಖಲೆ ಬರೆದರು. 7 ಬೌಂಡರಿಗಳನ್ನೂ ಹೊಡೆದರು. 214ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ತಾವೆದುರಿಸಿದ 47ನೇ ಎಸೆತದಲ್ಲಿ ಶತಕದ ಗಡಿ ಮುಟ್ಟಿದರು. ಟಿ20 ಮಾದರಿಯಲ್ಲಿ 29 ವರ್ಷದ ಸಂಜು ಗಳಿಸಿದ ಎರಡನೇ ಶತಕ ಇದಾಗಿದೆ.

ಸಂಜು ಮತ್ತು ಅಭಿಷೇಕ್ ಶರ್ಮಾ ಅವರು ಭಾರತಕ್ಕೆ ಅಬ್ಬರದ ಆರಂಭ ನೀಡಿದರು. ಕೇವಲ 3 ಓವರ್‌ಗಳಲ್ಲಿ 24 ರನ್ ಬಾಚಿದರು. ಆದರೆ ನಾಲ್ಕನೇ ಓವರ್‌ನಲ್ಲಿ ಅಭಿಷೇಕ್ ವಿಕೆಟ್ ಗಳಿಸುವಲ್ಲಿ ಗೆರಾಲ್ಡ್ ಕೋಜಿ ಯಶಸ್ವಿಯಾದರು.

ಆದರೆ ಇನ್ನೊಂದು ಬದಿಯಲ್ಲಿದ್ದ ಸಂಜು ಮಾತ್ರ ಯಾವುದೇ ಮುಲಾಜು ಇಲ್ಲದೇ ಬ್ಯಾಟ್ ಬೀಸಿದರು. ಅವರ ಜೊತೆಗೂಡಿದ ನಾಯಕ ಸೂರ್ಯಕುಮಾರ್ ಯಾದವ್ (21; 17ಎ, 4X2, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಲು ನೆರವಾದರು. 9ನೇ ಓವರ್‌ನಲ್ಲಿ ಸೂರ್ಯಕುಮಾರ್ ವಿಕೆಟ್ ಗಳಿಸುವಲ್ಲಿ ಪ್ಯಾಟ್ರಿಕ್ ಕ್ರುಗಾರ್ ಯಶಸ್ವಿಯಾದರು. ದೊಡ್ಡ ಹೊಡೆತಕ್ಕೆ ಯತ್ನಿಸಿದ ಸೂರ್ಯ ಸಿಮಿಲೇನ್ ಅವರಿಗೆ ಕ್ಯಾಚ್ ಆದರು.

ಆದರೆ ಸಂಜು ಆಟಕ್ಕೆ ಅಂಕುಶ ಹಾಕಲು ಯಾರಿಗೂ ಸಾಧ್ಯವಾಗಲಿಲ್ಲ. ಎಲ್ಲ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಪೀಟರ್ ಹಾಕಿದ ಎಂಟನೇ ಓವರ್‌ನಲ್ಲಿ ಸತತ ಎರಡು ಸಿಕ್ಸರ್ ಎತ್ತಿದ ಸಂಜು 50ರ ಗಡಿ ದಾಟಿದರು. 27 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.

ತಿಲಕ್ ವರ್ಮಾ ಜೊತೆಗೂ ಸಂಜು 3ನೇ ವಿಕೆಟ್‌ಗೆ 77 ರನ್ ಸೇರಿಸಿದರು. 16ನೇ ಓವರ್‌ನವರೆಗೂ ಅವರ ಅಬ್ಬರ ಮುಂದುವರಿಯಿತು. ಎನ್ಕಾಬೇಮ್ಜಿ ಪೀಟರ್ ಅವರ ಎಸೆತದಲ್ಲಿ ಸಂಜು ಅವರು ಟ್ರಿಸ್ಟನ್ ಸ್ಟಬ್ಸ್‌ಗೆ ಕ್ಯಾಚಿತ್ತರು.

ಇವರಿಗಿಂತ ಮುಂಚಿನ ಓವರ್‌ನಲ್ಲಿ ತಿಲಕ್ ವರ್ಮಾ (33; 18ಎ) ಅವರು ಕೇಶವ್ ಮಹಾರಾಜ ಅವರ ಎಸೆತವನ್ನು ಆಡಿ ಮಾರ್ಕೊ ಯಾನ್ಸೆನ್ ಅವರಿಗೆ ಕ್ಯಾಚಿತ್ತರು.

ಈ ಗೆಲುವಿನೊಂದಿಗೆ ಭಾರತ ತಂಡವು ನಾಲ್ಕು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಪಡೆದಿದೆ. ಭಾನುವಾರ ಎರಡನೇ ಪಂದ್ಯ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 202 (ಸಂಜು ಸ್ಯಾಮ್ಸನ್ 107, ಅಭಿಷೇಕ್ ಶರ್ಮಾ 7, ಸೂರ್ಯಕುಮಾರ್ ಯಾದವ್ 21, ತಿಲಕ್ ವರ್ಮಾ 33, ಗೆರಾಲ್ಡ್ ಕೋಜಿ 37ಕ್ಕೆ3). ದಕ್ಷಿಣ ಆಫ್ರಿಕಾ: 17.5 ಓವರ್‌ಗಳಲ್ಲಿ 141 (ರಯಾನ್ ರಿಕೆಲ್ಟನ್ 21, ಹೆನ್ರಿಚ್ ಕ್ಲಾಸೆನ್ 25, ಗೆರಾಲ್ಡ್ ಕೋಜಿ 23; ಅರ್ಷದೀಪ್ 25ಕ್ಕೆ 1, ಆವೇಶ್ ಖಾನ್ 28ಕ್ಕೆ 2, ವರುಣ್ ಚಕ್ರವರ್ತಿ 25ಕ್ಕೆ 3, ರವಿ ಬಿಷ್ಣೋಯಿ 28ಕ್ಕೆ 3). **ಪಂದ್ಯದ ಆಟಗಾರ:** ಸಂಜು ಸ್ಯಾಮ್ಸನ್. **ಫಲಿತಾಂಶ:** ಭಾರತಕ್ಕೆ 61 ರನ್‌ಗಳ ಜಯ

ರಣಜಿ ಟ್ರೋಫಿ: ಬಂಗಾಳ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ

ಸೋಲು ತಪ್ಪಿಸಲು ಕರ್ನಾಟಕ ಹೋರಾಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಆತಿಥೇಯ ಕರ್ನಾಟಕ ತಂಡ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಬಂಗಾಳ ಎದುರು ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಲಿಲ್ಲ. ಇದರಿಂದಾಗಿ ಪ್ರವಾಸಿ ತಂಡವು ಪಂದ್ಯದ ಮೇಲೆ ಹಿಡಿತ ಬಿಗಿಗೊಳಿಸಿತು. ಪಂದ್ಯದಲ್ಲಿ ಉಳಿದಿರುವ ಇನ್ನೊಂದು ದಿನದಲ್ಲಿ ಸೋಲು ತಪ್ಪಿಸಿಕೊಳ್ಳಲು ಕರ್ನಾಟಕ ಹೋರಾಟ ಮುಂದುವರಿಸಿದೆ. ವಾಸುಕಿ ಕೌಶಿಕ್ ನೇತೃತ್ವದ ಬೌಲಿಂಗ್ ಪಡೆಯ ಮೇಲೆ ನಿರೀಕ್ಷೆಯ ನೋಟಗಳು ನೆಟ್ಟಿವೆ.

ಸಿ ಗುಂಪಿನ ಮೊದಲೆರಡೂ ಪಂದ್ಯಗಳು ಮಳೆಗೆ ಕೊಚ್ಚಿಹೋಗಿದ್ದವು. ಮೂರನೇ ಪಂದ್ಯದಲ್ಲಿ ಕರ್ನಾಟಕವು ಬಿಹಾರ ಎದುರು ಜಯಿಸಿತ್ತು. ಅದರಿಂದಾಗಿ ತಂಡದ ಖಾತೆಯಲ್ಲಿ 8 ಪಾಯಿಂಟ್‌ಗಳಿವೆ. ಸೆಮಿಫೈನಲ್ ಹಾದಿ ಸುಗಮವಾಗಬೇಕಾದರೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಂಗಾಳ ಎದುರಿನ ಪಂದ್ಯವೂ ಸೇರಿದಂತೆ ಇನ್ನುಳಿದಿರುವ ಎಲ್ಲ ಹಣಾಹಣಿಗಳಲ್ಲಿ ಜಯಿಸುವುದು ಅಗತ್ಯ. ಆದರೆ ಪ್ರವಾಸಿ ಬೌಲರ್‌ಗಳಾದ ಇಶಾನ್ ಪೊರೆಲ್ (55ಕ್ಕೆ4) ಮತ್ತು ಸೂರಜ್ ಸಿಂಧು ಜೈಸ್ವಾಲ್ (64ಕ್ಕೆ3) ಅವರು ಆತಿಥೇಯರ ಹಾದಿಯನ್ನು ಕಠಿಣಗೊಳಿಸಿದರು. ಅವರ ದಾಳಿಯ ಮುಂದೆ ಆತಿಥೇಯ ತಂಡವು ಊಟದ ವಿರಾಮಕ್ಕೆ ಆರು ನಿಮಿಷಗಳ ಮುನ್ನ 80 ರನ್‌ಗಳ ಹಿನ್ನಡೆ ಅನುಭವಿಸಿತು. ಬಂಗಾಳ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 301 ರನ್‌ಗಳಿಗೆ ಉತ್ತರವಾಗಿ ಕರ್ನಾಟಕಕ್ಕೆ 221 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಬಂಗಾಳ ತಂಡವು ದಿನದಾಟದ ಮುಕ್ತಾಯಕ್ಕೆ 44 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 127 ರನ್ ಗಳಿಸಿದೆ. ಇದರಿಂದಾಗಿ ಒಟ್ಟು207 ರನ್‌ಗಳ ಮುನ್ನಡೆ ಸಾಧಿಸಿದೆ. ಸುದೀಪ್ ಕುಮಾರ್ ಘರಾಮಿ (ಬ್ಯಾಟಿಂಗ್ 25; 72ಎ, 4X4) ಮತ್ತು ಶಹಬಾಜ್ ಅಹಮದ್ (ಬ್ಯಾಟಿಂಗ್ 12; 27ಎ, 4X1) ಕ್ರೀಸ್‌ನಲ್ಲಿದ್ದಾರೆ.

ಕರ್ನಾಟಕ ತಂಡದ ಪಂದ್ಯದ ಕೊನೆ ದಿನವಾದ ಶನಿವಾರ ಬೆಳಿಗ್ಗೆ ಬಂಗಾಳದ ವಿಕೆಟ್‌ಗಳನ್ನು ಬೇಗನೆ ಉರುಳಿಸಬೇಕು. ಸಾಧ್ಯವಾದಷ್ಟು ಕಡಿಮೆ ಗುರಿ ಪಡೆದು ಗೆಲುವಿಗಾಗಿ ಪ್ರಯತ್ನಿಸಬೇಕು. ಅದಕ್ಕಾಗಿ ಅಗ್ರಕ್ರಮಾಂಕದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಬೇಕು. ಮೊದಲ ಇನಿಂಗ್ಸ್‌ನಂತೆ ವೈಫಲ್ಯ ಅನುಭವಿಸಿದರೆ ಸೋಲಿನ ಕಹಿ ಕಾಡಬಹುದು. ಕನಿಷ್ಠ ಡ್ರಾ ಸಾಧಿಸಿದರೆ ಒಂದು ಅಂಕ ಸಿಗಲಿದೆ. ಆದರೆ ತನ್ನ ಕಳೆದ ಮೂರು ಪಂದ್ಯಗಳಲ್ಲಿ ಡ್ರಾ ಕಂಡಿರುವ ಬಂಗಾಳ ಮೊದಲ ಗೆಲುವಿಗಾಗಿ ತವಕಿಸುತ್ತಿದೆ. ಅನುಸ್ಟುಪ್ ಮಜುಂದಾರ್ ಬಳಗದ ಹಾವಭಾವಗಳಲ್ಲಿ ಅಪಾರ ಆತ್ಮವಿಶ್ವಾಸ ಎದ್ದುಕಾಣುತ್ತಿದೆ.

ವಿದ್ಯಾಧರ್‌-ಕೌಶಿಕ್ ಜೊತೆಯಾಟ: ಕರ್ನಾಟಕವು ಗುರುವಾರ 51 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 155 ರನ್ ಗಳಿಸಿತ್ತು. ಅರ್ಧಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಅಭಿನವ್ ಮನೋಹರ್ ಮತ್ತು ಶ್ರೇಯಸ್ ಗೋಪಾಲ್ ಅವರ ಮೇಲೆ ಬೆಟ್ಟದಷ್ಟು ಭರವಸೆ ಮೂಡಿತ್ತು. ಶುಕ್ರವಾರ ಬೆಳಿಗ್ಗೆ ಅವರನ್ನು ಕಟ್ಟಿಹಾಕುವಲ್ಲಿ ಪ್ರವಾಸಿ ಬೌಲರ್‌ಗಳು ಯಶಸ್ವಿಯಾದರು. ಇಶಾನ್ ಬೌಲಿಂಗ್‌ನಲ್ಲಿ ಶ್ರೇಯಸ್ ವಿಕೆಟ್‌ಕೀಪರ್ ಸಹಾಗೆ ಕ್ಯಾಚ್ ಆದರು. ಐದು ಓವರ್‌ಗಳ ನಂತರ ಅಭಿನವ್ ಕೂಡ ಶ್ರೇಯಸ್ ಅವರ ರೀತಿಯಲ್ಲಿಯೇ ನಿರ್ಗಮಿಸಿದರು. ಆಗಿನ್ನೂ ಕರ್ನಾಟಕವು 130 ರನ್‌ಗಳಿಂದ ಹಿಂದಿತ್ತು.

ಈ ಹಂತದಲ್ಲಿ ವಿದ್ಯಾಧರ್ ಪಾಟೀಲ (33; 61ಎ, 4X3, 6X1) ಮತ್ತು ಕೌಶಿಕ್ (11; 56ಎ, 4X1) ತಂಡದ ಹೋರಾಟಕ್ಕೆ ಬಲ ತುಂಬುವ ಪ್ರಯತ್ನ ಮಾಡಿದರು. ವಿದ್ಯಾಧರ್ ಹೊಡೆದ ಒಂದು ಸಿಕ್ಸರ್‌ಗೆ ಚೆಂಡು ಪ್ರೆಸ್ ಬಾಕ್ಸ್ ಗಾಜಿನ ಪರದೆಗೆ ಬಡಿಯಿತು. ಇನ್ನೊಂದು ಬದಿಯಿಂದ ಕೌಶಿಕ್ ಉತ್ತಮ ಬೆಂಬಲ ಕೊಟ್ಟರು. 9ನೇ ವಿಕೆಟ್ ಜೊತೆಯಾಟದಲ್ಲಿ 40 ರನ್ ಸೇರಿಸಿದರು. ಆದರೆ ಜೈಸ್ವಾಲ್ ಹಾಕಿದ ಎಸೆತವೊಂದರಲ್ಲಿ ಬೀಟ್ ಆದ ವಿದ್ಯಾಧರ್ ವಿಕೆಟ್ ಪತನವಾಯಿತು. 93 ನಿಮಿಷ ಬ್ಯಾಟಿಂಗ್ ಮಾಡಿದ ರಾಯಚೂರು ಹುಡುಗ ನಿರಾಶೆಯಿಂದ ಮರಳಿದರು. ಹಾರ್ದಿಕ್ (11 ರನ್) ಪ್ರದಿಪ್ತ ಅವರ ನೇರ ಥ್ರೋಗೆ ರನ್‌ಔಟ್ ಆದರು.

80 ನಿಮಿಷ ಕ್ರೀಸ್‌ನಲ್ಲಿದ್ದ ಕೌಶಿಕ್ ಅವರನ್ನು ಇಶಾನ್ ಎಲ್‌ಬಿ ಬಲೆಗೆ ಕೆಡವಿದರು. ಅದರೊಂದಿಗೆ ಕರ್ನಾಟಕದ 396 ನಿಮಿಷಗಳ ಇನಿಂಗ್ಸ್ ಮುಕ್ತಾಯವಾಯಿತು.



ಕರ್ನಾಟಕ ತಂಡದ ವಿದ್ಯಾಧರ್ ಪಾಟೀಲ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಬಂಗಾಳ 301 (101.5 ಓವರ್‌ಗಳಲ್ಲಿ)

ಕರ್ನಾಟಕ: 221 (82.1 ಓವರ್‌ಗಳಲ್ಲಿ)

ಅಭಿನವ್ ಸಿ ಸಹಾ ಬಿ ಇಶಾನ್ 55 (103ಎ, 4X6, 6X1)
ಶ್ರೇಯಸ್ ಸಿ ಸಹಾ ಬಿ ಇಶಾನ್ 28 (63ಎ, 4X2)
ಹಾರ್ದಿಕ್ ರನ್‌ಔಟ್ (ಪ್ರದೀಪ್ತ ಪ್ರಾಮಾಣಿಕ್) 11 (29ಎ, 4X2)
ವಿದ್ಯಾಧರ ಬಿ ಜೈಸ್ವಾಲ್ 33 (61ಎ, 4X3, 6X1)
ಕೌಶಿಕ್ ಎಲ್‌ಬಿಡಬ್ಲ್ಯು ಬಿ ಇಶಾನ್ 11 (56ಎ, 4X1)
ಅಭಿಲಾಷ್ ಶೆಟ್ಟಿ ಔಟಾಗದೆ 0 (2ಎ)

ಇತರೆ: 7 (ಲೆಗ್‌ಬೈ 6, ವೈಡ್ 1)

ವಿಕೆಟ್ ಪತನ: 6–162 (ಶ್ರೇಯಸ್ ಗೋಪಾಲ್;54.6), 7–171 (ಅಭಿನವ್ ಮನೋಹರ್;60.3), 8–181 (ಹಾರ್ದಿಕ್ ರಾಜ್; 63.1), 9–221 (ವಿದ್ಯಾಧರ ಪಾಟೀಲ; 81.3), 10–221 (ವಿ. ಕೌಶಿಕ್; 82.1)

ಬೌಲಿಂಗ್: ಇಶಾನ್ ಪೊರೆಲ್ 23.1–5–55–4, ಸೂರಜ್ ಸಿಂಧು ಜೈಸ್ವಾಲ್ 25.2–4–64–3, ರಿಷವ್ ವಿವೇಕ್ 16.4–3–46–2, ಶಹಬಾಜ್ ಅಹಮದ್ 9–0–23–0, ಅವಿಲಿನ್ ಘೋಷ್ 3–1–9–0, ಆಮೀರ್ ಗನಿ 5–1–18–0

ಎರಡನೇ ಇನಿಂಗ್ಸ್: ಬಂಗಾಳ 3ಕ್ಕೆ127 (44 ಓವರ್‌ಗಳಲ್ಲಿ)

ಶುವಾಂ ಸಿ ಸುಜಯ್ ಬಿ ಶೆಟ್ಟಿ 30 (72ಎ, 4X3)
ಚಟರ್ಜಿ ಸಿ ಸುಜಯ್ ಬಿ ಕೌಶಿಕ್ 48 (85ಎ, 4X7)
ಸುದೀಪ್‌ಕುಮಾರ್ ಬ್ಯಾಟಿಂಗ್ 25 (72ಎ, 4X4)
ಅನುಸ್ಟುಪ್ ಬಿ ವಿದ್ಯಾಧರ್ 5 (10ಎ, 4X1)
ಶಹಬಾಜ್ ಬ್ಯಾಟಿಂಗ್ 12 (27ಎ, 4X1)

ಇತರೆ: 7 (ಲೆಗ್‌ಬೈ 5, ನೋಬಾಲ್ 2)

ವಿಕೆಟ್ ಪತನ: 1–69 (ಶುವಾಂ ಡೇ; 22.5), 2–97 (ಸುದೀಪ್ ಚಟರ್ಜಿ; 31.5), 3–106 (ಅನುಸ್ಟುಪ್ ಮಜುಂದಾರ್; 34.3)

ಬೌಲಿಂಗ್: ವಾಸುಕಿ ಕೌಶಿಕ್ 12–5–21–1, ಅಭಿಲಾಷ್ ಶೆಟ್ಟಿ 13–1–44–1, ವಿದ್ಯಾಧರ ಪಾಟೀಲ 13–2–37–1, ಶ್ರೇಯಸ್ ಗೋಪಾಲ್ 4–1–11–0, ಹಾರ್ದಿಕ್ ರಾಜ್ 2–0–9–0



ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಗೋಲು ಗಳಿಸಿದ ಸಂಭ್ರಮದಲ್ಲಿ ಬೆಂಗಳೂರು ಎಫ್‌ಸಿ ಆಟಗಾರರು –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಡ್ರಾ ಪಂದ್ಯದಲ್ಲಿ ಬಿಎಫ್‌ಸಿ, ನಾರ್ತ್ ಈಸ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬೆಂಗಳೂರು ಎಫ್‌ಸಿ ಮತ್ತು ನಾರ್ತ್ ಯುನೈಟೆಡ್ ತಂಡಗಳು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಶುಕ್ರವಾರ 2–2 ಗೋಲುಗಳಿಸಿ ಡ್ರಾ ಮಾಡಿಕೊಂಡವು.

ಪಂದ್ಯ ಡ್ರಾ ಆದರೂ ಅಂಕಪಟ್ಟಿಯಲ್ಲಿ ಬೆಂಗಳೂರು ಎಫ್‌ಸಿ ತಂಡ ಅಗ್ರಸ್ಥಾನದಲ್ಲೇ ಮುಂದುವರೆದಿದೆ.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಉಭಯ ತಂಡಗಳು ತೀವ್ರ ಪೈಪೋಟಿ ಕಂಡುಬಂತು. ಪಂದ್ಯದ ಎಂಟನೇ ನಿಮಿಷ ಅಜರಾಯಿ ಮೊದಲ ಗೋಲು ಹೊಡೆದು ನಾರ್ತ್ ಈಸ್ಟ್ ಯುನೈಟೆಡ್ ತಂಡಕ್ಕೆ ಮುನ್ನಡೆ ಒದಗಿಸಿದರು.

ಆದರೆ ಎರಡೇ ನಿಮಿಷದಲ್ಲಿ ಬಿಎಫ್‌ಸಿ ತಂಡದ ನೊಗುಯೆರಾ ಗೋಲು ಹೊಡೆದು ಸ್ಕೋರ್ ಸಮಮಾಡಿಕೊಳ್ಳಲು ನೆರವಾದರು. ನಾರ್ತ್ ಈಸ್ಟ್ ತಂಡಕ್ಕೆ 14ನೇ ನಿಮಿಷದಲ್ಲಿ ಅಜರಾಯಿ ಮತ್ತೊಂದು ಗೋಲು ಹೊಡೆದು ಮತ್ತೆ ಮುನ್ನಡೆ ನೀಡಿದರು.

ವಿರಾಮದ ವೇಳೆಗೆ ನಾರ್ತ್‌ಈಸ್ಟ್ ಯುನೈಟೆಡ್ 2–1 ಗೋಲುಗಳಿಂದ ಮುನ್ನಡೆ ಪಡೆದಿತ್ತು. ವಿರಾಮದ ನಂತರ ಬೆಂಗಳೂರು ಎಫ್‌ಸಿ ತಂಡದ ಶಿವಶಕ್ತಿ ಬದಲು ತಾರಾ ಆಟಗಾರ ಸುನಿಲ್ ಚೆಟ್ರಿ ಅವರನ್ನು ಕಣಕ್ಕಿಳಿಸಲಾಯಿತು. 70ನೇ ನಿಮಿಷ ಬೆಂಗಳೂರು ಎಫ್‌ಸಿ ತಂಡದ ರಿಯಾನ್ ವಿಲಿಯಮ್ಸ್ ಗೋಲು ಹೊಡೆದು ಸ್ಕೋರ್ ಸಮಗೊಳಿಸಿದರು. ನಂತರ ಪಂದ್ಯದ ಕೊನೆಯವರೆಗೂ ಎರಡೂ ತಂಡಗಳು ಮುನ್ನಡೆಗೆ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸುದ್ದಿ

ಮುನಿಸಿಕೊಂಡ ಅಲ್ಜಾರಿ: 2 ಪಂದ್ಯಕ್ಕೆ ಅಮಾನತು

ಬ್ರಿಜ್‌ಟೌನ್ (ಬಾರ್ಬಾಡೋಸ್), (ಎಪಿ): ಇಂಗ್ಲೆಂಡ್ ವಿರುದ್ಧ ಏಕದಿನ ಪಂದ್ಯದ ವೇಳೆ, ನಾಯಕ ಶಾಯಿ ಹೋಪ್ ಅವರ ವಿರುದ್ಧ ಬಹಿರಂಗವಾಗಿ ಮುನಿಸು ತೋರಿದ ವೇಗದ ಬೌಲರ್ ಅಲ್ಜಾರಿ ಜೋಸೆಫ್ ಅವರನ್ನು ಎರಡು ಪಂದ್ಯಗಳಿಗೆ ಅಮಾನತು ಮಾಡಲಾಗಿದೆ.

ಬುಧವಾರ ನಡೆದ ಪಂದ್ಯದ ವೇಳೆ ತಮ್ಮ ಬೌಲಿಂಗ್‌ನಲ್ಲಿ ಕ್ಷೇತ್ರರಕ್ಷಣೆ ಸಂಯೋಜನೆಗೆ ಸಂಬಂಧಿಸಿದಂತೆ ಹೋಪ್ ವಿರುದ್ಧ ಸಿಡಿಮಿಡಿಗೊಂಡ ಅವರು ತಮ್ಮ ಓವರ್ ಮುಗಿದ ನಂತರ ಡಗ್‌ಔಟ್‌ಗೆ ಹೋಗಿ ಕುಳಿತು ವಿಭಿನ್ನ ರೀತಿ ಪ್ರತಿಭಟಿಸಿದ್ದರು. ಒಂದು ಓವರ್ ನಂತರ ಮತ್ತೆ ಮರಳಿದ್ದರು. ಪಂದ್ಯ ಮತ್ತು ಆ ಮೂಲಕ ಸರಣಿಯನ್ನು ವೆಸ್ಟ್ ಇಂಡೀಸ್ ಗೆದ್ದಿತ್ತು.

ಕಿರಣ್ ಮುನ್ನಡೆ

ಇಕ್ಸಾನ್ ಸಿಟಿ (ಕೊರಿಯಾ), (ಪಿಟಿಐ): ಭಾರತದ ಕಿರಣ್ ಜಾರ್ಜ್ ಅವರು ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಐದನೇ ಶ್ರೇಯಾಂಕದ ಜಪಾನ್ ಆಟಗಾರನ ಮೇಲೆ ನೇರ ಸೆಟ್‌ಗಳ ಗೆಲುವು ಪಡೆದು ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. ವಿಶ್ವ ಕ್ರಮಾಂಕದಲ್ಲಿ 41ನೇ ಸ್ಥಾನದಲ್ಲಿರುವ ಕಿರಣ್ 21–14, 21–16 ರಿಂದ ತಕುಮಾ ಒಬಾಯಾಶಿ ಅವರನ್ನು ಸೋಲಿಸಿದರು.

ಕ್ರಿಕೆಟ್: ಸೋಲಿನ ಸುಳಿಯಲ್ಲಿ ಕರ್ನಾಟಕ ತಂಡ

ಬೆಂಗಳೂರು: ಕರ್ನಾಟಕ ತಂಡ, ವಡೋದರದ ರಿಲಯನ್ಸ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕೂಚ್ ಬಿಹಾರ್ ಟ್ರೋಫಿಗಾಗಿ ನಡೆಯುತ್ತಿರುವ ಬಿಸಿಸಿಐ 19 ವರ್ಷದೊಳಗಿನವರ ಟೂರ್ನಿಯಲ್ಲಿ ಆತಿಥೇಯ ಬರೋಡ ಎದುರು ಇನಿಂಗ್ಸ್ ಸೋಲಿನ ಸುಳಿಯಲ್ಲಿದೆ.

ಮೂರನೇ ದಿನವಾದ ಶುಕ್ರವಾರ, ಬರೋಡ (ಗುರುವಾರ: 518/4) ಆಟ ಮುಂದುವರಿಸಿ 7 ವಿಕೆಟ್‌ಗೆ 604 ರನ್‌ಗಳಿದ್ದಾಗ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಆ ಮೂಲಕ 407 ರನ್‌ಗಳ ಲೀಡ್ ಪಡೆಯಿತು. ದಿನದಾಟ ಮುಗಿ ದಾಗ ಕರ್ನಾಟಕ ಎರಡನೇ ಇನಿಂಗ್ಸ್‌ನಲ್ಲಿ 7 ವಿಕೆಟ್‌ಗೆ 207 ರನ್ ಗಳಿಸಿದೆ. ಇನಿಂಗ್ಸ್ ಸೋಲು ತಪ್ಪಿಸಲು ಇನ್ನೂ 270 ರನ್ ಗಳಿಸಬೇಕಾಗಿದೆ. ಕರ್ನಾಟಕ ಪರ ಎರಡನೇ ಇನಿಂಗ್ಸ್‌ನಲ್ಲಿ ಸಮಿತ್ ದ್ರಾವಿಡ್ 71 ರನ್ ಗಳಿಸಿದರೆ, ಕಾರ್ತಿಕೇಯ 45 ರನ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 127; ಬರೋಡ: 140.4 ಓವರುಗಳಲ್ಲಿ 7 ವಿಕೆಟ್‌ಗೆ 604 ಡಿಕ್ಲೇರ್ (ಸ್ಮಿತ್ ರತ್ವಾ 215, ಆರ್ಯ ಎಂ.ಪಟೇಲ್ 64, ದಿವ್ಯಾಂಶು ದೇಸಾಯಿ 36; ಸಿದ್ಧಾರ್ಥ ಅಖಿಲ್ 133ಕ್ಕೆ3); ಎರಡನೇ ಇನಿಂಗ್ಸ್: ಕರ್ನಾಟಕ: 72 ಓವರುಗಳಲ್ಲಿ 7 ವಿಕೆಟ್‌ಗೆ 207 (ಕಾರ್ತಿಕೇಯ ಕೆ.ಪಿ. 45, ಸಮಿತ್ ದ್ರಾವಿಡ್ 71, ಸಿದ್ಧಾರ್ಥ ಅಖಿಲ್ 36, ಧೀರಜ್ ಗೌಡ ಔಟಾಗದೇ 35; ಕೇಶವ ಎಂ.ವಾರ್ಕೆ 84ಕ್ಕೆ4).

ಚೆಸ್: ಅರ್ಜುನ್‌ಗೆ ಮತ್ತೊಂದು ಜಯ

ಚೆನ್ನೈ (ಪಿಟಿಐ): ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಅರ್ಜುನ್ ಇರಿಗೇಶಿ, ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಶುಕ್ರವಾರ ಇರಾನ್‌ನ ಅಮಿನ್ ತಬಾತಬೇಯಿ ಅವರನ್ನು ಸೋಲಿಸಿ ಒಂಟಿಯಾಗಿ ಅಗ್ರಸ್ಥಾನಕ್ಕೇರಿದರು.

ಅಜೇಯರಾಗಿರುವ ಅರ್ಜುನ್ 3.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಎಂಟು ಆಟಗಾರರ ಮಾಸ್ಟರ್ಸ್ ವಿಭಾಗದಲ್ಲಿ ಇತರ ಮೂರು ಪಂದ್ಯಗಳು ಡ್ರಾ ಆದವು. ವಿದಿತ್ ಗುಜರಾತಿ ಮತ್ತು ಅರವಿಂದ ಚಿದಂಬರಂ ಅವರು ಕ್ರಮವಾಗಿ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಮತ್ತು ಲೆವೊನ್ ಅರೋನಿಯನ್ ಜೊತೆ ಡ್ರಾ ಮಾಡಿಕೊಂಡರು. ಪರ್ಹಾಮ್ ಮಘಸೂಡ್ಲೂ ಮತ್ತು ಸರ್ಬಿಯಾದ ಅಲೆಕ್ಸಿ ಸರನ ನಡುವಣ ಪಂದ್ಯವೂ ಡ್ರಾ ಮೂಲಕ ಕೊನೆಗೊಂಡಿತು.

ಪ್ರಣವ್ ಮಿಂಚು: ಪ್ರಬಲ ಕಣವಿರುವ ಚಾಲೆಂಜರ್ ವಿಭಾಗದಲ್ಲಿ ವಿ. ಪ್ರಣವ್, ವೈಶಾಲಿ ಆರ್. ವಿರುದ್ಧ ಜಯಗಳಿಸುವ ಮೂಲಕ ಸತತ ನಾಲ್ಕನೇ ಗೆಲುವನ್ನು ದಾಖಲಿಸಿದರು. ಕಾರ್ತಿಕೇಯ ಮುರಳಿ ಸಹ ದ್ರೋಣವಲ್ಲಿ ಹಾರಿಕಾ ಅವರನ್ನು ಸೋಲಿಸಿದರು. ರೌನಕ್ ಸಾಧ್ವಾನಿ ಮತ್ತು ಪ್ರಾಣೇಶ್ ಎಂ. ನಡುವಣ ಹೋರಾಟದ ಪಂದ್ಯ ಡ್ರಾ ಆಯಿತು. ಲಿಯೊನ್ ಮೆಂಡೊನ್ಕಾ ಮತ್ತು ಅಭಿಮನ್ಯು ಪುರಾಣಿಕ್ ಕೂಡ ಅಂಕ ಹಂಚಿಕೊಂಡರು.

ಪ್ರೊ ಕಬಡ್ಡಿ: ಪೈರೇಟ್ಸ್‌ಗೆ ಗೆಲುವು

ಹೈದರಾಬಾದ್: ರೇಡರ್‌ಗಳ ಅಬ್ಬರಕ್ಕೆ ಸಾಕ್ಷಿಯಾದ ಹೈವೋಲ್ಟೇಜ್ ಹಣಾಹಣಿಯಲ್ಲಿ ಮೂರು ಬಾರಿಯ ಚಾಂಪಿಯನ್ಸ್ ಪಟನಾ ಪೈರೇಟ್ಸ್ ತಂಡ ಎರಡು ಅಂಕಗಳಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ವಿರುದ್ಧ ಎರಡು ಅಂಕಗಳ ರೋಚಕ ಗೆಲುವು ದಾಖಲಿಸಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಈ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಟನಾ 43- 41 ಅಂಕಗಳಿಂದ ಜೈಪುರ ತಂಡಕ್ಕೆ ಆಘಾತ ನೀಡಿತು. ಇದರೊಂದಿಗೆ ಟೂರ್ನಿಯಲ್ಲಿ ಶುಭಂ ಶಿಂದೆ ನೇತೃತ್ವದ ಪಟನಾ ನಾಲ್ಕನೇ ಜಯ ದಾಖಲಿಸಿತು.

ನಾಯಕ ಅರ್ಜುನ್ ದೇಸ್ವಾಲ್ (20 ಅಂಕ) ಅವರ ರೈಡಿಂಗ್ ಪರಾಕ್ರಮ ಜೈಪುರ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ.

ದಿನದ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ದಬಾಂಗ್ 39–26ರಿಂದ ತಮಿಳು ತಲೈವಾಸ್ ತಂಡವನ್ನು ಮಣಿಸಿತು.



ಪಿಂಕ್ ಪ್ಯಾಂಥರ್ಸ್ ಕೋರ್ಟ್‌ನಲ್ಲಿ ಸಿಲುಕಿಕೊಂಡಿರುವ ಪಟ್ನಾ ಪೈರೇಟ್ಸ್ ರೇಡರ್

2ನೇ 'ಟೆಸ್ಟ್': ಮತ್ತೆ ಎಡವಿದ ಅಗ್ರ ಬ್ಯಾಟರ್‌ಗಳು

ಮೆಲ್ಬರ್ನ್ (ಪಿಟಿಐ): ಕೆ.ಎಲ್.ರಾಹುಲ್ ಅವರ ನಿರಾಶಾದಾಯಕ ಬ್ಯಾಟಿಂಗ್ ಮುಂದುವರಿಯಿತು. ಭಾರತ ಎ ತಂಡದ ಅಗ್ರ ಬ್ಯಾಟರ್‌ಗಳು ಎರಡನೇ ಕ್ರಿಕೆಟ್ 'ಟೆಸ್ಟ್' ಪಂದ್ಯದ ಎರಡನೇ ಇನಿಂಗ್ಸ್‌ನಲ್ಲೂ ಕುಸಿದರು. ಪಂದ್ಯದ ಎರಡನೇ ದಿನವಾದ ಶುಕ್ರವಾರ ಆಟ ಮುಗಿದಾಗ ಭಾರತ ಎ ತಂಡ 5 ವಿಕೆಟ್‌ಗೆ 73 ರನ್ ಗಳಿಸಿ ಸಂಕಷ್ಟದಲ್ಲಿತ್ತು.

ಒಂದು ವೇಳೆ ನಾಯಕ ರೋಹಿತ್ ಶರ್ಮಾ ಅವರು 22ರಂದು ಆರಂಭವಾಗುವ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೊದಲ ಪಂದ್ಯಕ್ಕೆ ಅಲಭ್ಯರಾದರೆ, ರಾಹುಲ್ ಅವರಿಗೆ ಆ ಹೊಣೆ ವಹಿಸಬಹುದೆಂಬ ನಿರೀಕ್ಷೆಯಿದೆ. ಆದರೆ ಅವರು ಇಲ್ಲಿ ಕೊಟ್ಟ ಅವಕಾಶದಲ್ಲಿ ಎಡವಿದರು. ಎರಡೂ ಇನಿಂಗ್ಸ್‌ಗಳಲ್ಲಿ ಅವರು ಗಳಿಸಿದ್ದು ಒಟ್ಟು 14 ರನ್‌ಗಳನ್ನಷ್ಟೇ.

ಇದಕ್ಕೆ ಮೊದಲು ಭಾರತ ಎ ತಂಡದ 161 ರನ್‌ಗಳಿಗೆ ಉತ್ತರವಾಗಿ ಆತಿಥೇಯ ತಂಡ 223 ರನ್ ಗಳಿಸಿ 62 ರನ್‌ಗಳ ಲೀಡ್ ಪಡೆಯಿತು. ಎರಡನೇ ಸರದಿಯಲ್ಲಿ ಭಾರತ ಅರ್ಧದಷ್ಟು ವಿಕೆಟ್‌ಗಳನ್ನು ಕಳೆದುಕೊಂಡಿದ್ದು ಬರೇ 11 ರನ್‌ಗಳಿಂದ ಮುಂದಿದೆ.

ಆಸ್ಟ್ರೇಲಿಯಾದ ವೇಗ–ಸ್ಪಿನ್ ಬೌಲರ್‌ಗಳು ಈಗ ತಮ್ಮ ತಂಡಕ್ಕೆ ಸರಣಿ ಸ್ವೀಪ್ ಮಾಡುವ ಅವಕಾಶ ಮಾಡಿಕೊಟ್ಟಿದ್ದಾರೆ. ಸರಣಿಯ ಮೊದಲ ಪಂದ್ಯವನ್ನು ಆಸ್ಟ್ರೇಲಿಯಾ ಎ ಏಳು ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು.

ಲಯಕ್ಕೆ ಪರದಾಡುತ್ತಿರುವ ರಾಹುಲ್ 44 ಎಸೆತಗಳನ್ನು ಆಡಿ 10 ರನ್ ಗಳಿಸಿದ ನಂತರ ಆಫ್ ಸ್ಪಿನ್ ಬೌಲರ್ ಕೋರಿ ರಾಕಿಸಿಯೋಲಿ ಎಸೆತದಲ್ಲಿ ಹೊಡೆತಕ್ಕೆ ಹೋಗದೇ ಪ್ಯಾಡ್‌ನಿಂದ ತಡೆಯಲು ಹೋದರು. ಆದರೆ ಪ್ಯಾಡ್‌ಗೆ ಬಡಿದ ಚೆಂಡು ಕಾಲುಗಳ ಮಧ್ಯದಿಂದ ನುಸುಳಿ ಬೇಲ್ಸ್ ಉರುಳಿಸಿತು.

ಟೆಸ್ಟ್ ಸರಣಿಗೆ ಬ್ಯಾಕಪ್ ಓಪನರ್ ಆಗಿರುವ ಅಭಿಮನ್ಯು ಈಶ್ವರನ್ ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಖಾತೆ ತೆರೆಯುವ ಮೊದಲೇ ನಿರ್ಗಮಿಸಿದರೆ, ಎರಡನೇ ಇನಿಂಗ್ಸ್‌ನಲ್ಲಿ 31 ಎಸೆತಗಳಲ್ಲಿ 17 ರನ್ ಗಳಿಸಿದ್ದಷ್ಟೇ ಬಂತು. ವೇಗ ಮತ್ತು ಸ್ಪಿನ್ ದಾಳಿಗೆ ಭಾರತದ ಆಟಗಾರರು ಪರದಾಡಿದರು. ಪಡಿಕ್ಕಲ್ (1) ಕೂಡ ಬೇರೂರಲಿಲ್ಲ. ದಿನದಾಟ ಮುಗಿದಾಗ ವಿಕೆಟ್ ಕೀಪರ್ ಧ್ರುವ್ ಜುರೆಲ್ (ಬ್ಯಾಟಿಂಗ್ 19) ಮತ್ತು ನಿತೀಶ್ ರೆಡ್ಡಿ (ಬ್ಯಾಟಿಂಗ್ 9) ಕ್ರೀಸ್‌ನಲ್ಲಿದ್ದರು.

ಇದಕ್ಕೆ ಮೊದಲು 2 ವಿಕೆಟ್‌ಗೆ 53 ರನ್‌ಗಳಿಂದ ದಿನದಾಟ ಮುಂದುವರಿಸಿದ ಆಸ್ಟ್ರೇಲಿಯಾ ಎ, ಭಾರತದ ವೇಗದ ಬೌಲರ್‌ಗಳಾದ ಪ್ರಸಿದ್ಧ ಕೃಷ್ಣ (50ಕ್ಕೆ4) ಮತ್ತು ಮುಕೇಶ್ ಕುಮಾರ್ (41ಕ್ಕೆ3) ದಾಳಿಗೆ ಸಿಲುಕಿ 62.1 ಓವರುಗಳಲ್ಲಿ 223 ರನ್‌ಗಳಿಗೆ ಆಲೌಟ್ ಆಯಿತು. ಆರಂಭ ಆಟಗಾರ ಮಾರ್ಕಸ್ ಹ್ಯಾರಿಸ್ 138 ಎಸೆತಗಳಲ್ಲಿ 74 ರನ್ ಗಳಿಸಿದರು. ಕೆಳಕ್ರಮಾಂಕದಲ್ಲಿ ರಾಕಿಸಿಯೊಲಿ ಬಿರುಸಿನ ಆಟವಾಡಿ 28 ಎಸೆತಗಳಲ್ಲಿ 35 ರನ್ (6x2, 4x3) ಸಿಡಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ ಎ: 161 ಮತ್ತು 31 ಓವರುಗಳಲ್ಲಿ 5 ವಿಕೆಟ್‌ಗೆ 73 (ಧ್ರುವ್ ಜುರೆಲ್ ಬ್ಯಾಟಿಂಗ್ 19; ನಥಾನ್ ಮೆಕ್‌ಆ್ಯಂಡ್ರೂ 22ಕ್ಕೆ2, ಬ್ಯೂ ವೆಬ್‌ಸ್ಟರ್ 14ಕ್ಕೆ2); ಆಸ್ಟ್ರೇಲಿಯಾ ಎ: 62.1 ಓವರುಗಳಲ್ಲಿ 223 (ಮಾರ್ಕಸ್ ಹ್ಯಾರಿಸ್ 74; ಪ್ರಸಿದ್ಧ ಕೃಷ್ಣ 50ಕ್ಕೆ4, ಮುಕೇಶ್ ಕುಮಾರ್ 41ಕ್ಕೆ3, ಖಲೀಲ್ ಅಹ್ಮದ್ 56ಕ್ಕೆ2).



ಪ್ರಸಿದ್ಧ ಕೃಷ್ಣ

ಮಗುವಿನ ನಿರೀಕ್ಷೆಯಲ್ಲಿ ರಾಹುಲ್ ದಂಪತಿ

ಬೆಂಗಳೂರು: ಕ್ರಿಕೆಟಿಗ ಕೆ.ಎಲ್.ರಾಹುಲ್ ಹಾಗೂ ಬಾಲಿವುಡ್ ನಟಿ ಆಥಿಯಾ ಶೆಟ್ಟಿ ದಂಪತಿ ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದಾರೆ.

'2025ರಲ್ಲಿ ತಮ್ಮ ಮೊದಲ ಮಗುವನ್ನು ಪಡೆಯಲಿದ್ದೇವೆ' ಎಂದು ಕನ್ನಡಿಗ ರಾಹುಲ್ ಮತ್ತು ಬಾಲಿವುಡ್ ನಟ ಸುನಿಲ್ ಶೆಟ್ಟಿ ಪುತ್ರಿ ಅಥಿಯಾ ಅವರು ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಶುಕ್ರವಾರ ಹೇಳಿಕೊಂಡಿದ್ದಾರೆ. ಈ ಜೋಡಿ 2023ರ ಜನವರಿ 23ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿತ್ತು.

ಮುಂದಿನ ಒಲಿಂಪಿಕ್ಸ್‌ನಲ್ಲಿ ಸ್ಪರ್ಧೆ: ಸಿಂಧು

ನವದೆಹಲಿ (ಪಿಟಿಐ): ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ.

ಮುಂದಿನ ಒಲಿಂಪಿಕ್ಸ್ ವೇಳೆಗೆ ಅವರಿಗೆ 33 ವರ್ಷ ಆಗಲಿದೆ. ಆ ವೇಳೆಗೆ ಗಾಯದ ಸಮಸ್ಯೆ ಇಲ್ಲದಿದ್ದರೆ ಮೂರನೇ ಪದಕ ಗೆಲ್ಲಲು ಕಣಕ್ಕಿಳಿಯುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪದಕದ ನಿರೀಕ್ಷೆಯೊಂದಿಗೆ ಸಿಂಧು ಕಣಕ್ಕಿಳಿದಿದ್ದರು. ಆದರೆ ಕ್ರೀಡಾಕೂಟದ ಪ್ರಿ ಕ್ವಾರ್ಟರ್‌ನಲ್ಲೇ ಹೊರಬಿದ್ದರು.

ಬೆಂಗಳೂರು ರೇಸ್

ಫಿಲಾಸಫಿ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸಿಟಿ ಪೋಲಿಸ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಿಲಾಸಫಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೆಸರ್ಟ್ ಕಿಂಗ್ಡಮ್ 1, ಲಕ್ಸ್ ಎಟರ್ನಾ 10, ಮ್ಯಾಗ್ನೆಟಿಕ್ 11
2ನೇ ರೇಸ್: ಅಮೇಜಿಂಗ್ ಲಕ್ 6, ಮಾಸ್ಟರ್ ವಿಕ್ಟರಿ 7, ಚಿರಾಗ್ 4
3ನೇ ರೇಸ್: ಪೆರಿಕಲ್ಸ್ 2, ಮ್ಯಾಜಿಕಲ್ ಬೇ 1, ಐರನ್ ಕಿಂಗ್ 4
4ನೇ ರೇಸ್: ಬ್ಲೂ ಗಾಡ್ 4, ಮಜಾಲ್ ಟಾವ್ 2, ಪ್ರೊಫೆಸಿ 12
5ನೇ ರೇಸ್: ಅಕ್ವಾಸ್ಟಿಕ್ 8, ಎಲ್ಫಿನ್ ನೈಟ್ 6, ಕ್ರಿಮ್ಸನ್ ಫ್ಲೇಮ್ 5
6ನೇ ರೇಸ್: ಫಿಲಾಸಫಿ 1, ಅರಲಿನ 3, ಎಲ್ವೆನಾರ್ 4
7ನೇ ರೇಸ್: ಎಬೋಟ್ಸ್ 6, ಇಸಾಬೆಲ್ 8, ಸ್ಮೈಲ್ ಆಫ್ ಬ್ಯೂಟಿ 2
8ನೇ ರೇಸ್: ಲಿವ್ ಇನ್ ದಿ ಮಿಸ್ಟ್ 3, ಕರಿನ್‌ಥಿಯನ್ 9, ಸ್ಟ್ರಾವಿನ್‌ಸ್ಕಿ 5

ಉತ್ತಮ ಬೆಟ್: ಲಿವ್ ಇನ್ ದಿ ಮಿಸ್ಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8